# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 29 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 104 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4






## ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಂದು ವರ್ಷ ಪೂರೈಕೆ; ಜನತೆಗೆ

# ಬಂಪರ್ ಕೊಡುಗೆ



- ಸ್ತ್ರೀ ಶಕ್ತಿ ಮಾದರಿ ಯುವಶಕ್ತಿ ಯೋಜನೆ ಜಾರಿ; ರೈತ ವಿದ್ಯಾನಿಧಿ, ನೇಕಾರರು, ಟ್ಯಾಕ್ಸಿ ಚಾಲಕರು, ಮೀನುಗಾರರ ಮಕ್ಕಳಿಗೂ ವಿಸ್ತರಣೆ
- 28 ಸಾವಿರ ಗ್ರಾಮಗಳಲ್ಲಿ ಸ್ವಾಮಿ ವಿವೇಕಾನಂದ ಸಂಘ ಸ್ಥಾಪನೆ
- ಇವುಗಳಿಗೆ ಸ್ತ್ರೀ ಶಕ್ತಿ ಸಂಘಗಳಿಗೆ ನೀಡುವಂತೆ ಅನುದಾನ
- ಉದ್ಯಮ ತರಬೇತಿ; ಏಜೆನ್ಸಿ ಮೂಲಕ ಇವರ ಉತ್ಪನ್ನ ಮಾರಾಟ
- ಪರಿಶಿಷ್ಟರಿಗೆ 75 ಯುನಿಟ್ ಉಚಿತ ವಿದ್ಯುತ್
- ವಿವೇಕ ಯೋಜನೆಯಡಿ 8000 ಶಾಲಾ ಕೊಠಡಿ ನಿರ್ಮಾಣ
- 100 ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ

ಬೆಂಗಳೂರು,ಜು.28(ಕೆಎಂಶಿ)– ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸ್ತ್ರೀ ಶಕ್ತಿ ಮಾದರಿಯಲ್ಲಿ ಯುವಕರಿಗಾಗಿ ಯುವಶಕ್ತಿ ಯೋಜನೆ ಅನುಷ್ಠಾನ, ರೈತ ವಿದ್ಯಾನಿಧಿ ಯೋಜನೆ ಇನ್ನು ಮುಂದೆ ನೇಕಾರರು, ಟ್ಯಾಕ್ಸಿ ಚಾಲಕರು, ಮೀನುಗಾರರ ಮಕ್ಕಳಿಗೂ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಪ್ರಕಟಿಸಿದ್ದಾರೆ.

ತಮ್ಮ ಸರ್ಕಾರಕ್ಕೆ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ಕೆಲವೊಂದಷ್ಟು ಹೊಸ ಯೋಜನೆಗಳನ್ನು ಪ್ರಕಟಿಸಿದ್ದಲ್ಲದೆ, 28 ಸಾವಿರ ಗ್ರಾಮಗಳಲ್ಲೂ ಸ್ವಾಮಿ ವಿವೇಕಾನಂದ ಸಂಘಗಳನ್ನು ಸ್ಥಾಪಿಸಿ, ಈ ಸಂಘಗಳಿಗೆ ಸ್ತ್ರೀ ಶಕ್ತಿ ಗುಂಪುಗಳಿಗೆ ನೀಡುವಂತೆ ಅನುದಾನವನ್ನು ನೀಡಿ, ಉದ್ಯಮ ಸಂಬಂಧಿ ತರಬೇತಿ ನೀಡಲಾಗುವುದು. ಸಂಘದಿಂದ ಉತ್ಪಾದನೆಗೊಳ್ಳುವ ಸಾಮಗ್ರಿಗಳನ್ನು ಒಂದು ಏಜೆನ್ಸಿ ಮೂಲಕ ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲಾಗುವುದು. ಇದರಿಂದ ಐದು ಲಕ್ಷ ಯುವಕರಿಗೆ ಸ್ವಯಂ ಉದ್ಯೋಗ ▶ 8ನೇ ಪುಟಕ್ಕೆ

### ಮೈಸೂರು ಸೇರಿ 5 ನಗರಗಳಲ್ಲಿ ಮೆಗಾ ಹಾಸ್ಟೆಲ್ ನಿರ್ಮಾಣ

ಬೆಂಗಳೂರು, ಜು.28(ಕೆಎಂಶಿ)– ಮೈಸೂರು ಸೇರಿದಂತೆ ರಾಜ್ಯದ ಐದು ನಗರಗಳಲ್ಲಿ ತಲಾ ಸಾವಿರ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸುವ ಮೆಗಾ ಹಾಸ್ಟೆಲ್‌ಗಳನ್ನು ಸ್ಥಾಪಿಸುವುದಾಗಿ ಸಿಎಂ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು. ಸರ್ಕಾರ ಯಾರ ಪರ ಎಂಬುದು ಬಹಳ ಮುಖ್ಯ. ಆ ದೃಷ್ಟಿಯಿಂದ ತಮ್ಮದು ಜನಪರ ಸರ್ಕಾರ, ನಾನು ಮತ್ತು ನನ್ನ ಸಂಪುಟ ಸಹೋದ್ಯೋಗಿಗಳು ಒಂದು ಟೀಮ್ ವರ್ಕ್ ತರಹ ಕೆಲಸ ಮಾಡಿ ರಾಜ್ಯದ ಸಂಕಷ್ಟಗಳಿಗೆ ಸ್ಪಂದಿಸಿದ್ದೇವೆ. ▶ 8ನೇ ಪುಟಕ್ಕೆ


■ ಪ್ರವೀಣ್ ಹತ್ಯೆ ಪ್ರಕರಣ
**ಇಬ್ಬರ ಬಂಧನ, 21 ಶಂಕಿತರ ವಿಚಾರಣೆ**
■ ಪುಟ–2

■ ಪ್ರವೀಣ್ ಹತ್ಯೆಯಾದ 48 ಗಂಟೆಯಲ್ಲಿ
**ಸುರತ್ಕಲ್‌ನಲ್ಲಿ ಮತ್ತೊಬ್ಬ ಯುವಕನ ಹತ್ಯೆ**
■ ಪುಟ–2

# ಮೈಸೂರಿನಿಂದ ತಿರುಪತಿಗೆ ಶೀಘ್ರವೇ ವಿಮಾನ ಹಾರಾಟ

## ಲಕ್ಷದ್ವೀಪಕ್ಕೂ ಸಂಪರ್ಕ ವಿಮಾನ

ಮೈಸೂರು, ಜು.28(ಆರ್‌ಕೆ)–ಮೈಸೂರಿನಿಂದ ಪ್ರಸಿದ್ಧ ಧಾರ್ಮಿಕ ಕೇಂದ್ರ ತಿರುಪತಿಗೆ ಶೀಘ್ರವೇ ನೇರ ವಿಮಾನ ಸೌಲಭ್ಯ ಕಲ್ಪಿಸಲಾಗುವುದು ಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜುನಾಥ್ ತಿಳಿಸಿದ್ದಾರೆ.



'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ದೇಶದ ಪ್ರಮುಖ ಯಾತ್ರಾಸ್ಥಳವಾದ ತಿರುಪತಿಗೆ ಭಕ್ತಾದಿಗಳಿಂದ ಭಾರೀ ಬೇಡಿಕೆ ಇರುವುದರಿಂದ ಈಗಾಗಲೇ ಇಂಡಿಗೋ ಸಂಸ್ಥೆ ಜೊತೆ ಮಾತುಕತೆ ನಡೆಸಲಾಗಿದ್ದು, ಮೈಸೂರು–ತಿರುಪತಿ ನಡುವೆ ವಿಮಾನ ಹಾರಾಟ ಆರಂಭಿಸಿದಲ್ಲಿ ಪ್ರಯಾಣಿಕರ ಪ್ರತಿಕ್ರಿಯೆ ಅಂದಾಜಿಸಲಾಗುತ್ತಿದೆ. ಜೊತೆಗೆ ಪ್ರಯಾಣ ಶುಲ್ಕ ನಿಗದಿ, ಟೂರ್ ಪ್ಯಾಕೇಜ್ ಇತ್ಯಾದಿ ವಿಷಯಗಳ ಬಗ್ಗೆಯೂ ಸುದೀರ್ಘ ಚರ್ಚೆ ನಡೆಸಲಾಗಿದೆ ಎಂದರು. ತಿರುಪತಿಯ ಶ್ರೀ ವೆಂಕಟೇಶ್ವರ ದರ್ಶನಕ್ಕೆ ಆನ್‌ಲೈನ್ ಟಿಕೆಟ್ ವ್ಯವಸ್ಥೆ ಇರುವುದರಿಂದ ಟಿಕೆಟ್ ಬುಕ್ ಆಗಿ ವಾಸ್ತವ್ಯಕ್ಕೂ ವ್ಯವಸ್ಥೆ ಖಚಿತವಾದ ಭಕ್ತರು ಮಾತ್ರ ತಿರುಪತಿ ಪ್ರವಾಸ ಹಮ್ಮಿಕೊಳ್ಳುತ್ತಾರೆ. ಕೆಎಸ್‌ಆರ್‌ಟಿಸಿ ಬಸ್, ಕೆಎಸ್‌ಟಿಡಿಸಿ ಟೂರ್ ಪ್ಯಾಕೇಜ್, ಖಾಸಗಿ ಬಸ್ಸುಗಳ ವ್ಯವಸ್ಥೆ ಹಾಗೂ ನಿತ್ಯ ರೈಲು ಸಂಚಾರ ಸೌಲಭ್ಯವೂ ಇರುವುದರಿಂದ ವಿಮಾನದಲ್ಲಿ ಎಷ್ಟು ಮಂದಿ ತಿರುಪತಿಗೆ ಪ್ರಯಾಣ ಮಾಡುತ್ತಾರೆ ಎಂಬುದರ ಬಗ್ಗೆ ಸಮೀಕ್ಷೆ ನಡೆಸಿದ ನಂತರ ವಿಮಾನ ಸಂಪರ್ಕ ಕಲ್ಪಿಸಲು ಇಂಡಿಗೋ ಸಂಸ್ಥೆ ನಿರ್ಧರಿಸಲಿದೆ ಎಂದು ಮಂಜುನಾಥ್ ತಿಳಿಸಿದರು.

ಈ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದ್ದು, ಪೂರ್ವ ಸಿದ್ಧತೆಯೂ ಪ್ರಗತಿಯಲ್ಲಿರುವುದರಿಂದ ಶೀಘ್ರವೇ ಮೈಸೂರು ಮತ್ತು ತಿರುಪತಿ ನಡುವೆ ಇಂಡಿಗೋ ವಿಮಾನ ಹಾರಾಟ ಆರಂಭಿಸಲಿದೆ. ಅದು ಸಾಕಾರವಾದಲ್ಲಿ ಕಡಿಮೆ ಅವಧಿಯಲ್ಲಿ ತಿರುಪತಿ ಯಾತ್ರೆ ಮುಗಿಸಲು ಭಕ್ತಾದಿಗಳಿಗೆ ಸಾಧ್ಯವಾಗಲಿದೆ ಎಂದರು.

ಈಗಾಗಲೇ ಲಕ್ಷದ್ವೀಪದ ಅಗಟ್ಟಿ ಪ್ರವಾಸಿ ಕೇಂದ್ರಕ್ಕೂ ಕಳೆದ 10 ತಿಂಗಳಿಂದ ಸಂಪರ್ಕ ವಿಮಾನ ವ್ಯವಸ್ಥೆ ಇದ್ದು, ಪ್ರವಾಸಿಗರಿಂದ ಈ ವಿಮಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಏರ್ ಅಲಯನ್ಸ್ ವಿಮಾನವು ಪ್ರತಿ ದಿನ ಬೆಂಗಳೂರು–ಮೈಸೂರು–ಕೊಚ್ಚಿ ಮೂಲಕ ಅಗಟ್ಟಿಗೆ ಹಾರಾಟ ನಡೆಸುತ್ತಿದೆ. ಸುಮಾರು ಶೇ.60 ರಿಂದ 70 ರಷ್ಟು ಸೀಟುಗಳು ಭರ್ತಿಯಾಗುತ್ತಿವೆ ಎಂದು ಅವರು ತಿಳಿಸಿದರು.

ಅದೇ ರೀತಿ ಮೈಸೂರು ಮತ್ತು ಚೆನ್ನೈ ನಡುವೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಪ್ರಯಾಣಿಸುತ್ತಿದ್ದು, ಹೆಚ್ಚುವರಿ ಫ್ಲೈಟ್‌ಗೆ ಬೇಡಿಕೆ ಇರುವುದರಿಂದ ಮತ್ತಷ್ಟು ವಿಮಾನ ಕಾರ್ಯಾಚರಿಸುವಂತೆ ಅಲಯನ್ಸ್ ಏರ್ ಸಂಸ್ಥೆಯನ್ನು ಕೇಳಿಕೊಳ್ಳಲಾಗಿದೆ. ಕೊರೊನಾ ಸೋಂಕಿನ ಪ್ರಕರಣಗಳು ಕಡಿಮೆಯಾಗಿರುವುದರಿಂದ ಪ್ರವಾಸ ಮತ್ತು ಯಾತ್ರೆ ಕೈಗೊಳ್ಳಲು ಜನರು ಆಸಕ್ತಿ ತೋರುತ್ತಿರುವುದರಿಂದ ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಮಂಜುನಾಥ್ ನುಡಿದರು. ಪ್ರಸ್ತುತ ಮೈಸೂರಿನಿಂದ ಬೆಂಗಳೂರು, ಹೈದರಾಬಾದ್, ಗೋವಾ, ಕೊಚ್ಚಿ, ಚೆನ್ನೈ ಹಾಗೂ ಹುಬ್ಬಳ್ಳಿಗೆ ವಿಮಾನ ಸಂಪರ್ಕವಿದ್ದು, ಎಲ್ಲಾ ಫ್ಲೈಟ್‌ಗಳಲ್ಲೂ ಶೇ.65 ರಿಂದ 75ರಷ್ಟು ಆಸನಗಳು ಭರ್ತಿಯಾಗುತ್ತಿವೆ. ಮುಂದಿನ ದಿನಗಳಲ್ಲಿ ಕಲಬುರಗಿ, ಪುಣೆ, ತಿರುವನಂತಪುರಂ, ಮಂಗಳೂರು, ಮುಂಬೈ ಹಾಗೂ ನವದೆಹಲಿಗೂ ಮೈಸೂರಿನಿಂದ ವಿಮಾನ ಸಂಪರ್ಕ ಕಲ್ಪಿಸಿದಲ್ಲಿ ದೇಶದ ಎಲ್ಲ ಪ್ರಮುಖ ನಗರಗಳಿಗೂ ವಿಮಾನ ಸೌಲಭ್ಯ ಸಿಕ್ಕಿದಂತಾಗುತ್ತದೆ.

ಮೈಸೂರು ವಿಮಾನ ನಿಲ್ದಾಣದ ರನ್ ವೇಯನ್ನು ಪ್ರಸ್ತುತ ಇರುವ 1,740 ಮೀಟರ್‌ನಿಂದ 2,750 ಮೀಟರ್‌ಗೆ ವಿಸ್ತರಿಸುವ ಪ್ರಸ್ತಾವನೆ ಸಾಕಾರವಾದಲ್ಲಿ ಅಧಿಕ ಆಸನ ಸಾಮರ್ಥ್ಯದ ವಿಮಾನ ಹಾರಾಟಕ್ಕೆ ಅವಕಾಶವಾಗಲಿದ್ದು, ಮೈಸೂರಿನ ಕೈಗಾರಿಕೆಗಳು, ಶಿಕ್ಷಣ, ಪ್ರವಾಸೋದ್ಯಮ, ಹೋಟೆಲ್ ಉದ್ಯಮ, ಯೋಗ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

# ಇಂದು ರಘು ಕೌಟಿಲ್ಯ ಅಧಿಕಾರ ಸ್ವೀಕಾರ

ಮೈಸೂರು, ಜು.28– ರಘು ಕೌಟಿಲ್ಯ ಅವರನ್ನು ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿ, ಕಂಪನಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಅವರು ಜು.29ರಂದು ಬೆಳಗ್ಗೆ 9.30ಕ್ಕೆ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿಜೆಪಿ ಕಾರ್ಯಕರ್ತ ಪ್ರವೀಣ್ ಅವರನ್ನು ಕಳೆದುಕೊಂಡಿರುವ ಈ ದುಃಖದ ಸಂದರ್ಭದಲ್ಲಿ ಯಾರೂ ಕೂಡ ಹಾರ, ಫಲತಾಂಬೂಲ ನೀಡದಂತೆ ರಘು ಕೌಟಿಲ್ಯ ಮನವಿ ಮಾಡಿದ್ದಾರೆ.



## ಶಾಸಕರಿಂದ ಕಾಮಗಾರಿಗೆ ಚಾಲನೆ...



ಮೈಸೂರಿನ 21ನೇ ವಾರ್ಡ್ ಗಂಗೋತ್ರಿ ಹುಡ್ಕೋ ಬಡಾವಣೆ ಹಾಗೂ ಸರಸ್ವತಿಪುರಂನಲ್ಲಿ 3 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಶಂಕುಸ್ಥಾಪನೆ ನೆರವೇರಿಸಿದರು. ಸ್ಥಳೀಯ ಕಾರ್ಪೊರೇಟರ್ ವೇದಾವತಿ, ಅಧೀಕ್ಷಕ ಇಂಜಿನಿಯರ್ ಮಹೇಶ್, ಬಿಜೆಪಿ ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಪುನೀತ್ ಮತ್ತು ರಮೇಶ್, ಮುಖಂಡರಾದ ಶಿವಶಂಕರ್, ದಿನೇಶ್ ಗೌಡ, ಶ್ರೀನಿವಾಸ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪ್ರಜ್ವಲ್ ಶ್ರೀವತ್ಸ, ಸೋಮಶೇಖರ್ ರಾಜ್ ಅರಸ್, ಶಿವಲಿಂಗೇಗೌಡ, ನವೀನ್, ಗುರುದತ್, ಸುಬ್ರಹ್ಮಣ್ಯ, ಚಲುವ, ನಂದಕುಮಾರ್, ವಿಜಯ್ ಕುಮಾರ್, ರಾಕೇಶ್, ಮಣಿಕಂಠ, ಜ್ಯೋತಿ, ಪ್ರವೀಣ್ ಕುಮಾರ್, ಅಭಿವೃದ್ಧಿ ಅಧಿಕಾರಿ ಯೋಗಾನಂದ, ಗುತ್ತಿಗೆದಾರ ಅಶೋಕ್, ಗೋವಿಂದೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಅಧ್ಯಕ್ಷರಾಗಿ ನೇಮಕಗೊಂಡಿರುವ ರಘು ಕೌಟಿಲ್ಯ ಅವರನ್ನು ದೇವರಾಜ ಅರಸು ಪ್ರತಿಷ್ಠಾನ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಡಾ.ವೈ.ಡಿ. ರಾಜಣ್ಣ, ಎಂ. ಚಂದ್ರಶೇಖರ್, ಜಾಕೀರ್ ಹುಸೇನ್, ನಟರಾಜ್ ಅವರನ್ನು ಕಾಣಬಹುದು.



ಕರ್ನಾಟಕ ರಾಜ್ಯ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಅವರು ಆದಿ ಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಬಿಜೆಪಿ ಮುಖಂಡರಾದ ಅರುಣ್ ಕುಮಾರ್‌ಗೌಡ ರಾಜಕುಮಾರ್, ಕುಮಾರ್‌ಗೌಡ, ದೇವರಾಜೇಗೌಡ, ರವಿ ರಾಜಕೀಯ, ಈರೇಗೌಡ, ಮಂಜುನಾಥ್, ನಾಣಿಗೌಡ, ಕೆ.ಜೆ.ರಮೇಶ್, ಜೋಗಿ ಮಂಜು, ಸೋಮಶೇಖರ್, ಕೃಷ್ಣಕುಮಾರ್ ನಾಯಕ್ ಮುಂತಾದವರು ಉಪಸ್ಥಿತರಿದ್ದರು.

# ಪ್ರವೀಣ್ ಹತ್ಯೆ ಪ್ರಕರಣ: ಇಬ್ಬರ ಬಂಧನ, 21 ಶಂಕಿತರ ವಿಚಾರಣೆ

ಮಂಗಳೂರು, ಜು.28–ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲೂಕು ಬೆಳ್ಳಾರೆ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಪೊಲೀಸರು ಇಬ್ಬರನ್ನು ಬಂಧಿಸಿದ್ದು, 21 ಮಂದಿ ಶಂಕಿತರನ್ನು ವಿಚಾರಣೆಗೊಳಪಡಿಸಿದ್ದಾರೆ.

ಸವನೂರು ಗ್ರಾಮದ ಜಾಕೀರ್(29) ಮತ್ತು ಬೆಳ್ಳಾರೆ ಗ್ರಾಮದ ಮಹಮ್ಮದ್ ಷಫೀಕ್(27) ಬಂಧಿತರಾಗಿದ್ದು, ಇವರಿಬ್ಬರನ್ನು ಇಂದು ಸಂಜೆ ಪುತ್ತೂರು ಎಸಿಜೆಎಂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಬಂಧಿತರಿಗೆ ಯಾವುದಾದರೂ ಸಂಘಟನೆಗಳ ಸಂಪರ್ಕವಿದೆಯೇ ಎಂಬುದೂ ಸೇರಿದಂತೆ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಮಾಧ್ಯಮಗಳಿಗೆ ತಿಳಿಸಿದ ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್, ಈವರೆಗೆ 21 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಅವರಲ್ಲಿ ಎಸ್‌ಡಿಪಿಐ ಹಾಗೂ ಪಿಎಫ್‌ಐ ಸಂಘಟನೆಗಳಿಗೆ ಸೇರಿದವರೂ ಇದ್ದಾರೆ. ಈ ಹತ್ಯೆ ತುಂಬಾ ಭೀಕರವಾಗಿದ್ದು, ಸೂಕ್ಷ್ಮ ವಿಚಾರವೂ ಆಗಿದೆ. ಪ್ರಕರಣದಲ್ಲಿ ಭಾಗಿಯಾದ ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ ಎಂದ ಅವರು, ಮಂಗಳೂರು ನಗರ ಪೊಲೀಸ್ ಆಯುಕ್ತರು ಮತ್ತು ಉಡುಪಿ ಪೊಲೀಸರ ನೆರವಿನೊಂದಿಗೆ 6 ವಿಶೇಷ ತಂಡಗಳನ್ನು ರಚಿಸಲಾಗಿದೆ. ಈ ತಂಡಗಳಲ್ಲಿ ಹಾಸನ ಎಸ್‌ಪಿ ಹರಿರಾಂ ಶಂಕರ್ ಮತ್ತು ಡಿಸಿಪಿ ಅನುಚೇತನ್ ಅವರನ್ನೂ ಕೂಡ ಸೇರಿಸಲಾಗಿದೆ ಎಂದು ತಿಳಿಸಿದರು.



ಪ್ರವೀಣ್ ನೆಟ್ಟಾರು

ಪ್ರವೀಣ್ ಹತ್ಯೆಗೀಡಾದ ಪ್ರದೇಶದ ಸುತ್ತಮುತ್ತಲ ಸಿಸಿ ಕ್ಯಾಮರಾಗಳಲ್ಲಿ ದಾಖಲಾಗಿರುವ ದೃಶ್ಯಗಳನ್ನು ಪರಿಶೀಲಿಸಿ ಅದರ ಆಧಾರದ ಮೇರೆಗೆ ಪೊಲೀಸರು ಜಾಕೀರ್ ಮತ್ತು ಮಹಮ್ಮದ್ ಷಫೀಕ್ ಎಂಬುವರನ್ನು ಬಂಧಿಸಿದ್ದಾರೆ ಎಂದು ಹೇಳಲಾಗಿದೆ. ಹತ್ಯೆಗೀಡಾದ ಪ್ರವೀಣ್ ಕೋಳಿ ಅಂಗಡಿ ಬಳಿ ಸುಮಾರು 40 ನಿಮಿಷ ಕಾಲ ಬೈಕ್‌ನಲ್ಲಿ ಇಬ್ಬರು ಕುಳಿತಿರುವುದು ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ. ಪ್ರವೀಣ್ ಹತ್ಯೆ ನಂತರ ಇವರಿಬ್ಬರೂ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಈ ವ್ಯಕ್ತಿಗಳು ಪ್ರವೀಣ್‌ನ ಚಲನ–ವಲನದ ಮೇಲೆ ನಿಗಾ ವಹಿಸಿ ಹಂತಕರಿಗೆ ಮಾಹಿತಿ ನೀಡಿರಬಹುದು ಎಂದು ಶಂಕಿಸಲಾಗಿದೆ. ಬೈಕ್‌ನಲ್ಲಿ ಕುಳಿತು ಹೊಂಚು ಹಾಕುತ್ತಿದ್ದವರು ಇದೀಗ ಬಂಧಿಸಲ್ಪಟ್ಟಿರುವವರೇ? ಎಂಬುದರ ಬಗ್ಗೆ ಪೊಲೀಸರು ಖಚಿತಪಡಿಸಿಲ್ಲ. ಆದರೆ ಇವರಿಬ್ಬರೂ ಪ್ರವೀಣ್ ಹತ್ಯೆಗೆ ಸಹಕರಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಪ್ರವೀಣ್ ಹತ್ಯೆಯಾದ 48 ಗಂಟೆಯಲ್ಲಿ ಸುರತ್ಕಲ್‌ನಲ್ಲಿ ಮತ್ತೊಬ್ಬ ಯುವಕನ ಹತ್ಯೆ

- ಮೂರ್‍ನಾಲ್ಕು ಮಂದಿಯಿಂದ ದುಷ್ಕೃತ್ಯ
- ಬಟ್ಟೆ ಅಂಗಡಿಯೊಳಗೆ ಓಡಿದರೂ ಬೆನ್ನತ್ತಿ ಕೊಚ್ಚಿ ಕಗ್ಗೊಲೆ
- ದ್ವೇಷದ ಕೊಂಡವಾಗಿರುವ ಕರಾವಳಿ: ಜನರಲ್ಲಿ ಭೀತಿ

ಮಂಗಳೂರು, ಜು.28–ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಬಳಿ ನಡೆದ ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಯ ಕಾವು ಆರುವ ಮುನ್ನವೇ ಗುರುವಾರ ರಾತ್ರಿ ಸುರತ್ಕಲ್‌ನ ಜನನಿಬಿಡ ಪ್ರದೇಶದಲ್ಲಿ ಸಾರ್ವಜನಿಕರ ಕಣ್ಣೆದುರೇ ಯುವಕನೋರ್ವನನ್ನು ಮೂರ್‍ನಾಲ್ಕು ದುಷ್ಕರ್ಮಿಗಳು ತಲ್ವಾರ್‌ಗಳಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ನಡೆದಿದೆ.

ಮಂಗಳಪೇಟೆ ನಿವಾಸಿ ಫಾಜಿಲ್(23) ಹತ್ಯೆಗೀಡಾದವನಾಗಿದ್ದು, ಸುರತ್ಕಲ್‌ನ ಬಟ್ಟೆ ಅಂಗಡಿಯೊಂದರ ಮುಂದೆ ನಿಂತು ಸ್ನೇಹಿತನ ಜೊತೆ ಮಾತನಾಡಿ, ಅಂಗಡಿಯೊಳಗೆ ಹೋಗುತ್ತಿದ್ದಂತೆಯೇ ಕಾರಿನಲ್ಲಿ ಬಂದಿದ್ದ ಮೂವರು ದುಷ್ಕರ್ಮಿಗಳು ಆತನನ್ನು ಅಟ್ಟಾಡಿಸಿಕೊಂಡು ತಲ್ವಾರ್‌ಗಳಿಂದ ಕೊಚ್ಚಿ ಪರಾರಿಯಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಫಾಜಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಬಿಳಿ ಬಣ್ಣದ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಮಂಕಿ ಕ್ಯಾಪ್ ಧರಿಸಿದ್ದರು. ರಸ್ತೆಯಲ್ಲಿ ಜನರ ಓಡಾಟವೂ ಕೂಡ ಇತ್ತು. ಹಠಾತ್ತನೆ ನಡೆದ ಈ ಕೃತ್ಯದಿಂದ ಭಯಭೀತರಾದ ಜನರು ಅತ್ತಿಂದಿತ್ತ ಓಡುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಮಂಗಳೂರು ನಗರ ಪೊಲೀಸ್ ಆಯುಕ್ತ ಶಶಿಕುಮಾರ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಮಂಗಳೂರು ನಗರದ ಸುರತ್ಕಲ್, ಬಜ್ಪೆ, ಪಣಂಬೂರು ಮತ್ತು ಮುಲ್ಕಿ ಠಾಣಾ ವ್ಯಾಪ್ತಿಗಳಲ್ಲಿ ಶನಿವಾರ ಬೆಳಗ್ಗೆವರೆಗೆ ಸೆಕ್ಷನ್ 144 ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಸಂದರ್ಭದಲ್ಲಿ ಮದ್ಯದಂಗಡಿಗಳನ್ನು ಬಂದ್ ಮಾಡುವಂತೆ ಪೊಲೀಸ್ ಆಯುಕ್ತರು ಆದೇಶ ನೀಡಿದ್ದಾರೆ. ಈ ಸಂಬಂಧ ಮಾಧ್ಯಮಗಳೊಂದಿಗೆ ಮಾತನಾಡಿದ ಪೊಲೀಸ್ ಆಯುಕ್ತ ಶಶಿಕುಮಾರ್, ಮೂರ್‍ನಾಲ್ಕು ಮಂದಿಯ ತಂಡ ಈ ಹತ್ಯೆ ನಡೆಸಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಯಾವ ಕಾರಣಕ್ಕೆ ಯಾರು ಹತ್ಯೆ ಮಾಡಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಸಾರ್ವಜನಿಕರು ಯಾವುದೇ ರೀತಿಯ ಊಹಾಪೋಹಗಳಿಗೆ ಕಿವಿಗೊಡದೇ ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಿದರು. ನಾಲ್ಕೂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಕಾನೂನು–ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್ ಮಂಗಳೂರಿನಲ್ಲೇ ಬೀಡು ಬಿಟ್ಟಿದ್ದಾರೆ.



ಮತ್ತೊಂದೆಡೆ ಮಾಜಿ ಶಾಸಕ ಮೊಹಿಯುದ್ದೀನ್ ಬಾವ, ಸುದ್ದಿಗಾರರೊಂದಿಗೆ ಮಾತನಾಡಿ, ಹತ್ಯೆಗೀಡಾದ ಯುವಕ ಗ್ಯಾಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಪ್ರತೀಕಾರಕ್ಕಾಗಿ ಈ ಹತ್ಯೆ ನಡೆದಿದೆ ಎಂದು ತಿಳಿಸಿದ್ದಾರೆ. ಗೃಹ ಸಚಿವ ಆರಗ ಜ್ಞಾನೇಂದ್ರ ಮಾತನಾಡಿ, ಮೂರ್‍ನಾಲ್ಕು ಮಂದಿಯಿಂದ ಸುರತ್ಕಲ್‌ನಲ್ಲಿ ಯುವಕನ ಹತ್ಯೆಯಾಗಿದೆ. ಈ ಹತ್ಯೆಯ ಹಿನ್ನೆಲೆ ಹಾಗೂ ಹಂತಕರ ಬಗ್ಗೆ ತಮಗೆ ಇನ್ನೂ ಮಾಹಿತಿ ದೊರೆತಿಲ್ಲ. ಸದ್ಯಕ್ಕೆ ಆ ಪ್ರದೇಶದಲ್ಲಿ ಕಾನೂನು–ಸುವ್ಯವಸ್ಥೆ ನಿಯಂತ್ರಣದಲ್ಲಿದೆ ಎಂದು ಹೇಳಿದ್ದಾರೆ.

## ಪ್ರವೀಣ್ ಕುಟುಂಬಕ್ಕೆ ಸಾಂತ್ವನ ಹೇಳಿದ ಸಿಎಂ

### ಸರ್ಕಾರದ 25 ಲಕ್ಷ ಪರಿಹಾರದ ಚೆಕ್ ವಿತರಣೆ




ಪುತ್ತೂರು, ಜು.28–ದುಷ್ಕರ್ಮಿಗಳಿಂದ ಹತ್ಯೆಗೀಡಾದ ಪ್ರವೀಣ್ ನೆಟ್ಟಾರು ನಿವಾಸಕ್ಕೆ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ, ಸರ್ಕಾರದ ವತಿಯಿಂದ 25 ಲಕ್ಷ ರೂ. ಪರಿಹಾರದ ಚೆಕ್ ಅನ್ನು ನೀಡಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್‌ಕಟೀಲ್, ಸಚಿವರಾದ ಸುನೀಲ್‌ಕುಮಾರ್, ಕೋಟಾ ಶ್ರೀನಿವಾಸ ಪೂಜಾರಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಉಪಸ್ಥಿತರಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ. ಶೀಘ್ರದಲ್ಲೇ ಎಲ್ಲಾ ಆರೋಪಿಗಳನ್ನು ಬಂಧಿಸಲಾಗುತ್ತದೆ. ಸರ್ಕಾರ ಮತ್ತು ಬಿಜೆಪಿ ನಿಮ್ಮೊಂದಿಗಿದೆ ಎಂದು ಪ್ರವೀಣ್ ಕುಟುಂಬಸ್ಥರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಕೊಲೆ ಮಾತ್ರವಲ್ಲ, ದೇಶ ದ್ರೋಹದ ಕೆಲಸ. ಇದು ಪೂರ್ವ ನಿಯೋಜಿತ ಕೃತ್ಯ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಕೇರಳದ ಗಡಿಯಲ್ಲಿ ನಡೆದಿರುವುದರಿಂದ ಇದು ವ್ಯವಸ್ಥಿತ ಕೊಲೆ ಎನ್ನಬಹುದು. ಕರಾವಳಿ ಪ್ರದೇಶದಲ್ಲಿ ಇಂತಹ ಕೊಲೆಗಳು ನಡೆಯುತ್ತಿರುವ ಪರಿಣಾಮ, ನಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಈ ಪ್ರಕರಣವನ್ನೂ ಕೂಡ ಎನ್‌ಐಎಗೆ ವಹಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಈ ಹತ್ಯೆ ಹಿಂದೆ ಯಾವುದೇ ಸಂಘಟನೆ ಇದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದರು.

## ಪ್ರವೀಣ್ ನೆಟ್ಟಾರು ಕುಟುಂಬಕ್ಕೆ 10 ಲಕ್ಷ ವೈಯಕ್ತಿಕ ನೆರವು ಘೋಷಿಸಿದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ

ಬೆಂಗಳೂರು, ಜು.28(ಕೆಎಂಶಿ)–ಸಮಾಜವಿರೋಧಿ ಶಕ್ತಿಗಳ ಅಮಾನುಷ ಕ್ರೌರ್ಯಕ್ಕೆ ಬಲಿಯಾದ ಬಿಜೆಪಿ ಕಾರ್ಯಕರ್ತ ಮತ್ತು ಯುವ ಮುಖಂಡ ಪ್ರವೀಣ್ ನೆಟ್ಟಾರು ಅವರ ಕುಟುಂಬಕ್ಕೆ ವೈಯಕ್ತಿಕವಾಗಿ 10 ಲಕ್ಷ ರೂ. ನೆರವು ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.



ಗುರುವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಇದನ್ನು ನೆರವು ಎಂದು ಹೇಳಲು ಇಷ್ಟ ಪಡುವುದಿಲ್ಲ. ಇದು ನನ್ನ ಕರ್ತವ್ಯವಾಗಿದೆ ಎಂದರು. 10 ಲಕ್ಷ ರೂ.ಗಳ ಚೆಕ್ ಅನ್ನು ಪ್ರವೀಣ್ ಅವರ ಕುಟುಂಬಕ್ಕೆ ತಲುಪಿಸಲಾಗುವುದು. ಅವರ ಬಲಿದಾನಕ್ಕೆ ನಾವು ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಅವರು ಗದ್ಗದಿತರಾದರು.

ಪ್ರವೀಣ್ ಅವರ ಹಂತಕರು ಎಲ್ಲೇ ಇದ್ದರೂ ಕಠಿಣ ಕ್ರಮ ಜರುಗಿಸಲಾಗುವುದು. ಪಕ್ಷದ ಕಾರ್ಯಕರ್ತರ ಆಕ್ರೋಶ ನನಗೆ ಅರ್ಥವಾಗುತ್ತದೆ. ಅಪರಾಧಿಗಳ ಹೆಡೆಮುರಿ ಕಟ್ಟುವ ಶಕ್ತಿ ಬಿಜೆಪಿ ಸರಕಾರಕ್ಕಿದೆ ಎಂದು ಸಚಿವರು ಪ್ರತಿಕ್ರಿಯಿಸಿದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**29.07.2022 ಶುಕ್ರವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022**
**ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ**
**ತಿಥಿ: ಪ್ರತಿಪತ್, ನಕ್ಷತ್ರ : ಪುಷ್ಯ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ:** ಸ್ವರ್ಣಾಮೃತಪ್ರಾಶನ, ಸ್ಥಳ: ಮಹಾವಿದ್ಯಾಲಯ ಆವರಣ, ಬೆಳಗ್ಗೆ 6 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ಸೇಫಿಯೆಂಟ್ ಕಾಲೇಜು:** ಸೇಫಿಯೆಂಟ್ ಚಾರಿಟಿ ಕಪ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಕಾಲೇಜು ಖಜಾಂಚಿ ದಲ್‌ಜೀತ್ ರಾಮ್ ಚೌಧರಿ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಕೆ. ಗಣೇಶ್, ಉಪ ಪ್ರಿನ್ಸಿಪಾಲ್ ಆರ್. ನರೇಂದ್ರ, ಸ್ಥಳ: ವಿಜಯನಗರ ಕ್ರೀಡಾ ಮೈದಾನ, ಬೆಳಗ್ಗೆ 9ಕ್ಕೆ.

■ **ವಿಕ್ರಂ ಎಜುಕೇಷನಲ್ ಟ್ರಸ್ಟ್ :** ಉದ್ಘಾಟನೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಸಾ.ರಾ. ಮಹೇಶ್, ಗೌರವ ಅತಿಥಿಗಳು : ಡಾ. ವಿಕ್ಟರ್ ಮೆನೆಜಸ್, ಡಾ. ಚಿಂತನಾ ಎಂ. ಪಾಟ್ಕರ್, ಪಾಲಿಕೆ ಸದಸ್ಯ ಎಸ್.ಬಿ. ಮಂಜು, ಟ್ರಸ್ಟಿ ರೇಖಾ ಸನತ್, ವಿಕ್ರಮ್ ಸ್ಕೂಲ್ ಪ್ರಿನ್ಸಿಪಾಲ್ ಡಾ. ಕೆ.ಎನ್. ಲಕ್ಷ್ಮಿ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಡಾ. ಹೆಚ್.ಎನ್. ಸನತ್‌ಕುಮಾರ್, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಜೆ.ಕೆ. ಮೈದಾನ, ಬೆಳಗ್ಗೆ 10ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ವೇದಿಕೆ, ಅಂತರ ಕಾಲೇಜು ಸಂಗೀತ ಹಾಗೂ ಕನ್ನಡ ಚರ್ಚಾ ಸ್ಪರ್ಧೆ, ಉದ್ಘಾಟನೆ: ಎಸ್‌ಬಿಐ ವ್ಯವಸ್ಥಾಪಕ ವರದರಾಜು, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್ ವಿಶ್ರಾಂತ ಹಿರಿಯ ವಿಭಾಗೀಯ ವ್ಯವಸ್ಥಾಪಕ ಮಹೇಶ್ ಎನ್. ಅರಸ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ.

■ **ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜು :** ಪದವಿಪೂರ್ವ ಕಾಲೇಜು ಹಾಗೂ ಕಟ್ಟಡದ ಉದ್ಘಾಟನೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಟ್ಟಡ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಪದವಿಪೂರ್ವ ಕಾಲೇಜು ಉದ್ಘಾಟನೆ : ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಕಾಲೇಜು ಆವರಣ, ಬಾಪೂಜಿ ಬಡಾವಣೆ, ಬೋಗಾದಿ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಹರ್ಷಿ ವಿದ್ಯಾಸಂಸ್ಥೆ :** ಕರ್ನಾಟಕ ಪ್ರಹಸನ ಪಿತಾಮಹ ಟಿ.ಪಿ. ಕೈಲಾಸಂ ಅವರ ಜಯಂತ್ಯೋತ್ಸವ, ಉದ್ಘಾಟನೆ: ಮಹರ್ಷಿ ವಿದ್ಯಾಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಭವಾನಿ ಶಂಕರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪನ್ಯಾಸಕ ಧನಂಜಯ ಅವರಿಂದ ಉಪನ್ಯಾಸ, ಉಪಸ್ಥಿತರು: ಆಡಳಿತಾಧಿಕಾರಿ ತೇಜಸ್ ಬಿ. ಶಂಕರ್, ಪ್ರಾಂಶುಪಾಲರಾದ ಎಂ. ಮಹದೇವಸ್ವಾಮಿ, ಎ.ಕುಮಾರ್, ಪ್ರಹ್ಲಾದರಾವ್ ಅವರಿಂದ ಕೈಲಾಸಂ ಗೀತಗಾಯನ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ. ಲತಾಮೋಹನ್, ಸ್ಥಳ: ಮಹರ್ಷಿ ವಿದ್ಯಾಸಂಸ್ಥೆ, ವಿಶ್ವೇಶ್ವರನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಯಜುರ್ವೇದ ಜಟಾ ಪಾರಾಯಣ ಯಜ್ಞ ಪರಿಸಮಾಪ್ತಿ, ಶ್ರಾವಣ ಮಾಸಾರಂಭ, ಶ್ರೀದತ್ತ ವೆಂಕಟೇಶ್ವರಸ್ವಾಮಿ ಕ್ಷೇತ್ರದಲ್ಲಿ ಶ್ರಾವಣಮಾಸ ಪೂಜೆಗಳು ಆರಂಭ, ಕೋಟಿ ತುಳಸೀ ಅರ್ಚನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ಆಜಾದಿ ಕಾ ಅಮೃತ್ ಮಹೋತ್ಸವ್ ಅಂಗವಾಗಿ ವಿಶೇಷ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಅಧ್ಯಕ್ಷತೆ : ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಡಾ. ಹೆಚ್.ಎಂ. ಕಲಾಶ್ರೀ ಅವರಿಂದ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಸ್ತ್ರೀ ಸಂವೇದನೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಕರಾಮುವಿವಿ ಕುಲಸಚಿವ ಡಾ.ಎ. ಖಾದರ್ ಪಾಷ, ಉಪಸ್ಥಿತರು : ಡಾ. ವಿನೋದ, ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಬೆಳಗ್ಗೆ 10.30ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ದತ್ತಿ ಬಹುಮಾನ ವಿತರಣಾ ಸಮಾರಂಭ, ಪ್ರಾಸ್ತಾವಿಕ ನುಡಿ: ಸಹಾಯಕ ಪ್ರಾಧ್ಯಾಪಕ ಆರ್.ಡಿ. ಶ್ರೀನಿವಾಸ, ಮುಖ್ಯ ಅತಿಥಿಗಳು: ನಿವೃತ್ತ ಸಹ ಪ್ರಾಧ್ಯಾಪಕರಾದ ಡಾ.ಕೆ.ಎನ್.ರೂಪ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಶ್ರೀನಿವಾಸ, ಸ್ಥಳ:ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 11ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ :** ಯುದ್ಧ ಸ್ಮಾರಕ ಶಂಕುಸ್ಥಾಪನಾ ಸಮಾರಂಭ, ಶಂಕುಸ್ಥಾಪನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಮೀಪ, ಬೆಳಗ್ಗೆ 12.05ಕ್ಕೆ.

■ **ಡಿಸೈನರ್ ಹಾಟ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಲೈಫ್ ಸ್ಟೈಲ್ ಎಕ್ಸಿಬಿಷನ್, ಉದ್ಘಾಟನೆ : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಸ್ಥಳ: ಸದರನ್ ಸ್ಟಾರ್ ಹೋಟೆಲ್, ವಿನೋಬ ರಸ್ತೆ, ಮಧ್ಯಾಹ್ನ 12.05ಕ್ಕೆ.

■ **ಗಾನಭಾರತಿ :** ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರ ಜಯಂತಿ ದತ್ತಿ ಕಾರ್ಯಕ್ರಮ, ದ್ವಂದ್ವ ವೀಣಾ ವಾದನ, ವಿದುಷಿ ಆರ್.ಎಸ್. ಜಯಲಕ್ಷ್ಮಿ, ವಿದುಷಿ ಚಾರುಲತಾ ಚಂದ್ರಶೇಖರ್ ಅವರಿಂದ ವೀಣಾ ವಾದನ, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಮುಖ್ಯ ಅತಿಥಿಗಳು : ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ವಿಶ್ರಾಂತ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್ :** ಡಿವಿಜಿಯವರ 'ಮಂಕು ತಿಮ್ಮನ ಕಗ್ಗ' ಪ್ರವಚನ, ಸಂಜೆ 6 ರಿಂದ ದೇವರ ನಾಮಗಳು, ಸಂಜೆ 6.30 ರಿಂದ ರೂಪ ನಂದೀಶ್ ಅವರಿಂದ ಪ್ರವಚನ, ಸುಜಯೀಂದ್ರರಾವ್ (ತಬಲ), ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

■ **ಕಾಸ್ಮೋಪಾಲಿಟನ್ ಕ್ಲಬ್ :** ಕ್ಲಬ್‌ನ ನವೀಕೃತ ಅತಿಥಿ ಗೃಹ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಕಾಸ್ಮೋಪಾಲಿಟನ್ ಕ್ಲಬ್, ಸಂಜೆ 7ಕ್ಕೆ

**ಸುತ್ತೂರಿನಲ್ಲಿಂದು**

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸುರಂಗ ಕವಿಕೃತ ತ್ರಿಷಷ್ಟಿ ಪುರಾತನ ಚಾರಿತ್ರಂ ಕಾವ್ಯವಾಚನ ಮತ್ತು ಪ್ರವಚನ, ಪ್ರವಚನ : ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ : ಡಿ.ಎಂ. ಸಿದ್ದಲಿಂಗಸ್ವಾಮಿ, ಸ್ಥಳ: ಸುತ್ತೂರು, ಸಂಜೆ 7 ರಿಂದ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ದೀಪಿಕಾ ಪಾಂಡುರಂಗಿ, ಎನ್. ಹೇಮಾ, ವ್ಯಾಖ್ಯಾನ –ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆ–ರಾಜು ಅನಂತಸ್ವಾಮಿ ಮತ್ತು ಸಂಗಡಿಗರು, ಎಸ್. ಸುನೀತಾ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಷಯ– ಮಹಿಳೆಯರಲ್ಲಿ ಕ್ಯಾನ್ಸರ್, ಭಾಗವಹಿಸುವವರು– ಡಾ. ವಿದ್ಯಾ ಜಿ., 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಎಂ.ಎಸ್. ಸುಬ್ಬಲಕ್ಷ್ಮಿ – ಹಾಡುಗಾರಿಕೆ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ಎ.ಎಸ್. ಮುರಳೀಧರ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ–ಸಖೀ ಸಂವಾದ, ಪ್ರಸ್ತುತಿ– ಕೆ.ಬಿ. ಮೀನಾ, 4.30 ವೃತ್ತಿ ಮಾರ್ಗದರ್ಶನ– ಟೆಕ್ನಿಕಲ್ ಕೋರ್ಸ್ ಆಯ್ಕೆಗೆ ಆಪ್ತ ಸಲಹೆ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂದ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಸದಾಶಿವೇಗೌಡ ಬಿ. ಅವರೊಂದಿಗೆ ಮಾತುಕತೆ, 6.50ಕೃಷಿರಂಗ–ಕಿಸಾನ್‌ವಾಣಿ, 7.45 ಈಸಿ ಇಂಗ್ಲಿಷ್–ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ. ವಿಜಯನಾರಸಿಂಹ, ನಿರ್ಮಾಣ– ಎಸ್.ಲಕ್ಷ್ಮೀ ನಾರಾಯಣ, 9.00 ಚರ್ಚೆ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

## ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರ 50ನೇ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ

# ಕುಸಿಯುತ್ತಿರುವ ಪ್ರಜಾಪ್ರಭುತ್ವ ರಕ್ಷಣೆ ಯುವಕರಿಂದ ಮಾತ್ರ ಸಾಧ್ಯ

### ಉದ್ಯೋಗ ಮೇಳ ಉದ್ಘಾಟಿಸಿ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಅಭಿಮತ



ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅವರ 50ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಮೈಸೂರು ಒನ್ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳವನ್ನು ಮಾಜಿ ಸಚಿವ ಚೆಲುವರಾಯಸ್ವಾಮಿ ಉದ್ಘಾಟಿಸಿದರು.



"ಚುನಾವಣೆಯಲ್ಲಿ ಟಿಕೆಟ್ ಸಿಗಲಿ ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಮಾಡಿದ್ದಲ್ಲ. ನನ್ನ ಸ್ನೇಹಿತರು ಹುಟ್ಟುಹಬ್ಬವನ್ನು ಉದ್ಯೋಗ ಮೇಳ ಮತ್ತು ಇನ್ನಿತರೆ ಸೇವಾ ಚಟುವಟಿಕೆಗಳ ಮೂಲಕ ಆಚರಿಸುತ್ತಿದ್ದಾರೆ. ಅವರೆಲ್ಲಾ ನಿರಂತರವಾಗಿ ಸೇವಾ ಕಾರ್ಯಗಳಲ್ಲಿ ತೊಡಗಿದ್ದು, ಅದರ ಒಂದು ಭಾಗವಾಗಿ ಇಂದಿನ ಕಾರ್ಯಕ್ರಮ ಆಯೋಜಿಸಿದ್ದಾರೆ. –ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ

ಮೈಸೂರು,ಜು.28(ಆರ್‌ಕೆಬಿ)– ಇಂದು ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಂದಿದ್ದು, ಇದರ ರಕ್ಷಣೆಗೆ ಯುವಕರು ಮುಂದಾಗಬೇಕು ಎಂದು ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅವರ 50ನೇ ಹುಟ್ಟುಹಬ್ಬದ ಅಂಗವಾಗಿ ಕೆ.ಹರೀಶ್‌ಗೌಡ ಸ್ನೇಹ ಬಳಗ, ಉದ್ಯೋಗದಾತ ಸಂಸ್ಥೆಯ ಸಹಯೋಗದಲ್ಲಿ ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಮೈಸೂರು ಒನ್ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳ ಹಾಗೂ 100 ಮಂದಿ ವಿಶೇಷಚೇತನರಿಗೆ ಗುರುತಿನ ಚೀಟಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರಿಗೆ ಪಾಲಿಕೆ ಮಾಜಿ ಸದಸ್ಯರೂ ಆದ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗ ಅಧ್ಯಕ್ಷ ಆರ್.ಸುನಂದಕುಮಾರ್, ಉಪಾಧ್ಯಕ್ಷ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ರಾಕೇಶ್‌ಕುಮಾರ್, ಕಾರ್ಯದರ್ಶಿ ಪ್ರವೀಣ್, ಮುಖಂಡರಾದ ಶಿವಶಂಕರ್, ದುರ್ಗೇಶ್‌ಕುಮಾರ್, ಸುರೇಶ, ವಾಟರ್ ಕೃಷ್ಣ, ಪೈ.ಸಂಪತ್ತು ಹುಟ್ಟುಹಬ್ಬದ ಶುಭಾಶಯ ಕೋರಿದರು.



ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ವತಿಯಿಂದ ಹರೀಶ್‌ಗೌಡರಿಗೆ ಶುಭ ಕೋರಲಾಯಿತು. ಈ ವೇಳೆ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್, ನಗರ ಅಧ್ಯಕ್ಷ ಹೆಬ್ಬಾಳ್ ವಿಜಯ್, ಜಿಲ್ಲಾ ಅಧ್ಯಕ್ಷ ಬೋಗಾದಿ ಮಾದೇವಸ್ವಾಮಿ, ಯುವ ಮುಖಂಡ ಬೀರೇಶ್ ಕಿಂಗ್, ಹುಯಿಲಾಲ್ ಮಂಜು ಇದ್ದರು.

ಇಂದು ಸಂವಿಧಾನಕ್ಕೆ ವಿರುದ್ಧವಾಗಿ ಆಡಳಿತ ನಡೆಸಲಾಗುತ್ತಿದೆ. ಸಂವಿಧಾನವನ್ನು ತಿರುಚಿ ಬೇರೆ ಬೇರೆ ದಾರಿಗೆ ತರುವ ಸ್ಥಿತಿಯ ಸಂದರ್ಭದಲ್ಲಿ ವಿದ್ಯಾವಂತರು, ಬುದ್ಧಿವಂತರು, ಯುವಕರು ರಾಜಕೀಯಕ್ಕೆ ಬಂದಾಗ ಮಾತ್ರ ಪ್ರಜಾಪ್ರಭುತ್ವದ ರಕ್ಷಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೆ.ಹರೀಶ್‌ಗೌಡ ಅವರಿಗೆ ನಾಯಕತ್ವ ಗುಣ ಇದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 36 ಸಾವಿರ ಮತ ಪಡೆದು ಸೋತಿದ್ದರೂ, ಉತ್ಸಾಹದಿಂದ ಜನಸೇವೆಯಲ್ಲಿ ನಿರತರಾಗಿದ್ದಾರೆ. ಶಾಸಕರಾಗಿಲ್ಲದಿದ್ದರೂ ಶಾಸಕರು ಮಾಡುವ ಎಲ್ಲಾ ಕೆಲಸಗಳನ್ನು ಮಾಡುತ್ತಾ ಜನರ ಪ್ರೀತಿ ಗಳಿಸಿದ್ದಾರೆ. ಮುಂದಿನ ದಿನಗಳು ಅವರಿಗೆ ಶುಭವಾಗಲಿ ಎಂದು ಹಾರೈಸಿದರು.

ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಮಾತನಾಡಿ, ನಿರುದ್ಯೋಗಿ ಪದವೀಧರರಿಗಾಗಿ ಉದ್ಯೋಗ ಮೇಳ ಆಯೋಜಿಸುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಕೆ.ಹರೀಶ್‌ಗೌಡ ಅವರು ಅರ್ಥಪೂರ್ಣವಾಗಿ ಆಚರಿಸಿಕೊಂಡಿದ್ದಾರೆ. ಕೆಲಸಕ್ಕಾಗಿ ಅಲೆಯುತ್ತಿರುವ ನಿರುದ್ಯೋಗಿಗಳಿಂದಲೇ ತುಂಬಿರುವ ಈ ದೇಶದ ಪರಿಸ್ಥಿತಿ ಅಲೋಚಿಸಿ, ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ. ಮೈಸೂರಿನಲ್ಲಿರುವಷ್ಟು ವಿದ್ಯಾವಂತರು ಬೇರೆಲ್ಲೂ ಇಲ್ಲ. ಅವರೆಲ್ಲರಿಗೂ ಉದ್ಯೋಗ ಸಿಗುವಂತಾಗಬೇಕು. ಉದ್ಯೋಗ ಪಡೆಯುವ ಹಕ್ಕು ವಿದ್ಯಾವಂತರ ಕೈಯ್ಯಲ್ಲೇ ಇದೆ ಎಂದರು.

ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಹಣ ಮತ್ತು ಹೆಣ ರಾಜಕಾರಣ ಇಂದು ಹೆಚ್ಚುತ್ತಿದೆ. ಇದರಿಂದ ಅಖಂಡತೆಗೆ ಪೆಟ್ಟು ಬೀಳುತ್ತಿದೆ. ಅಭದ್ರತೆ ಉಂಟಾಗುತ್ತಿದೆ. ಸೋದರತೆಗೆ ಬೆಂಕಿ ಬಿದ್ದಿದೆ. ಇಂತಹ ಸಂದರ್ಭದಲ್ಲಿ ಜನರ ಭಾವನೆಗಳಿಗೆ ಸ್ಪಂದಿಸುವ ಕೆಲಸವನ್ನು ಕೆ.ಹರೀಶ್‌ಗೌಡ ಮತ್ತು ಅವರ ಸ್ನೇಹಿತರು ಕೈಗೊಂಡಿರುವುದು ಉತ್ತಮ ಕಾರ್ಯ ಎಂದು ಹೇಳಿದರು.

ಇಂದು ಕೇಂದ್ರದಲ್ಲಿ 5,43,000 ರಾಜ್ಯದಲ್ಲಿ 2,32,000 ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಲು ಸರ್ಕಾರ ಮುಂದಾಗುತ್ತಿಲ್ಲ. 75ನೇ ವರ್ಷದ ಸ್ವಾತಂತ್ರ್ಯ ಸಂಭ್ರಮದಲ್ಲಿ 75 ಸಾರ್ವಜನಿಕ ಸಂಸ್ಥೆಗಳನ್ನು ಮಾರಾಟ ಮಾಡಿದ್ದಾರೆ. ಹೆಣ ಬಿದ್ದರೆ, ಅದು ಯಾವ ಪಕ್ಷದ್ದು ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಕೆಲವರಿಂದ, ಕೆಲವರಿಗಾಗಿ, ಕೆಲವರಿಗೋಸ್ಕರ ನಕಲಿ ಪ್ರಜಾಪ್ರಭುತ್ವ ಇದೆ. ಇದರ ವಿಚಾರಗಳನ್ನು ಅರಿತು ವಿದ್ಯಾವಂತರು ದೇಶದ ಅಖಂಡತೆಯನ್ನು ಉಳಿಸಲು ಮುಂದಾಗಬೇಕಾಗಿದೆ ಎಂದು ಹೇಳಿದರು.

ಚಿಂತಕ ಪ್ರೊ.ನಂಜರಾಜ ಅರಸ್ ಮಾತನಾಡಿ, ಕೇಕ್ ಕತ್ತರಿಸಿ ಸಂಭ್ರಮಿಸುವ ಬದಲಿಗೆ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವ ಪ್ರಯತ್ನಕ್ಕೆ ಮುಂದಾಗಿರುವುದು ನಿಜಕ್ಕೂ ಅರ್ಥಪೂರ್ಣ ಹುಟ್ಟುಹಬ್ಬ ಆಚರಣೆ. ಸಾಮಾಜಿಕವಾಗಿ ಜನರಿಗೆ ತುಂಬಾ ಕೆಲಸ ಮಾಡಬೇಕು ಎಂಬ ಕನಸು ಹೊತ್ತಿರುವ ಹರೀಶ್‌ಗೌಡರ ಕನಸು ಈಡೇರಲಿ ಎಂದು ಹಾರೈಸಿದರು. ಸಮಾರಂಭದಲ್ಲಿ ಹೊಸಮಠ ಶ್ರೀ ಚಿದಾನಂದ ಸ್ವಾಮೀಜಿ, ಮುಸ್ಲಿಂ ಧರ್ಮಗುರುಗಳಾದ ಮೌಲಾನಾ ಅಬ್ದುಲ್ ಸಲಾ ರಜ್ವಿಖಾಜಿ ಷರಿಯತ್, ಮೌಲಾನಾ ಶಮೂನ್, ರೆ. ಫಾ. ಕೆ.ಎ. ವಿಲಿಯಮ್ಸ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ರಮೇಶ ಬಂಡಿಸಿದ್ದೇಗೌಡ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರೀಗೌಡ, ನಗರಪಾಲಿಕೆ ಸದಸ್ಯ ಜೆ.ಗೋಪಿ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಟಿ.ಬಿ.ಚಿಕ್ಕಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ವಿಜಯಕುಮಾರ್, ಕೆಪಿಸಿಸಿ ಉಪಾಧ್ಯಕ್ಷ ಸುಧೀಂದ್ರ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಮಾದು, ಪಾಲಿಕೆ ಮಾಜಿ ಸದಸ್ಯರಾದ ಡಿ.ನಾಗಭೂಷಣ್, ಪ್ರಶಾಂತ್‌ಬಾಬು, ಉಪ್ಪಾರ ಮುಖಂಡ ಯೋಗೇಶ್, ಸವಿತಾ ಸಮಾಜದ ಮುಖಂಡ ಎನ್.ಆರ್.ನಾಗೇಶ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕೆ.ಹರೀಶ್‌ಗೌಡ ಸ್ನೇಹ ಬಳಗದ ಟೆಂಟ್ ಶ್ರೀನಿವಾಸ್, ರಾಮು, ತೇಜು, ದಿನೇಶ್, ಮಹದೇಶ್, ಅನಂತ ನಾರಾಯಣ, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಯೋಗೇಶ್, ಒಕ್ಕಲಿಗರ ಸಂಘದ ನಿರ್ದೇಶಕರಾದ ಗುರು, ಮಹದೇವು ಇನ್ನಿತರರು ಉಪಸ್ಥಿತರಿದ್ದರು.

# ನೂರಾರು ಮಂದಿಗೆ ಉದ್ಯೋಗ ಭಾಗ್ಯ

### ವಿಶೇಷಚೇತನರಿಗೆ ಗುರುತಿನ ಕಾರ್ಡ್, ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ




ಮೈಸೂರು, ಜು.28(ಆರ್‌ಕೆಬಿ)– ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅವರ 50ನೇ ಹುಟ್ಟುಹಬ್ಬದ ಪ್ರಯುಕ್ತ ಕೆ.ಹರೀಶ್‌ಗೌಡ ಸ್ನೇಹ ಬಳಗ ಹಾಗೂ ಉದ್ಯೋಗದಾತ ಸಂಸ್ಥೆಯ ಸಹಯೋಗದಲ್ಲಿ ಗುರುವಾರ ಮೈಸೂರಿನ ಗೋಕುಲಂ 3ನೇ ಹಂತದ ಡಾಕ್ಟರ್ಸ್ ಕಾರ್ನರ್ ಮೈದಾನದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ನೂರಾರು ಮಂದಿಗೆ ಉದ್ಯೋಗ ದೊರೆತಿದೆ.

ಮೇಳದಲ್ಲಿ ಜೋಯಾಲುಕಾಸ್, ಸಾಥಿಯಾ ಹೋಟೆಲ್ ಮ್ಯಾನೇಜ್‌ಮೆಂಟ್, ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ಸ್, ನವಭಾರತ್ ಫರ್ಟಿಲೈಸರ್ಸ್, ಅಪೋಲೋ ಹೋಂ ಕೇರ್, ಮಾಂಡವಿ ಮೋಟಾರ್ಸ್, ಥಾಟ್‌ಫೋಕಸ್, ರುಡ್‌ಸೆಟ್, ಎವರ್‌ಗ್ರೀನ್ ಸಲ್ಯೂಷನ್, ಹೆಚ್‌ಡಿಎಫ್‌ಸಿ ಲೈಫ್, ಐಸಿಐಸಿಐ ಬ್ಯಾಂಕ್, ಎಐಎಂಎಸ್, ಎಸ್‌ಬಿಐ ಲೈಫ್, ಲೈಫ್ ಮಿತ್ರ ಸೇರಿದಂತೆ 120ಕ್ಕೂ ಹೆಚ್ಚು ವಿವಿಧ ಖಾಸಗಿ ಕಂಪನಿಗಳು ಭಾಗವಹಿಸಿದ್ದವು. ಎಸ್‌ಎಸ್‌ಎಲ್‌ಸಿ, ನಾನಾ ಪದವಿ, ಇಂಜಿನಿಯರಿಂಗ್ ಪದವಿ ಪಡೆದ ಸಾವಿರಾರು ಅಭ್ಯರ್ಥಿಗಳು ಮೇಳದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು, ತುಮಕೂರು, ರಾಮನಗರ, ಶಿವಮೊಗ್ಗ, ಉಡುಪಿ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಉದ್ಯೋಗ ಅರಸಿ ಬಂದಿದ್ದ ನಿರುದ್ಯೋಗಿಗಳು ತಮ್ಮ ವಿದ್ಯಾರ್ಹತೆಗೆ ತಕ್ಕಂತಹ ಹುದ್ದೆಗಳನ್ನು ಅರಸಿ ಕಂಪನಿಗಳ ಮುಖ್ಯಸ್ಥರೊಂದಿಗೆ ಚರ್ಚಿಸಿದರು. ಈ ಪೈಕಿ ನೂರಾರು ಮಂದಿಗೆ ಉದ್ಯೋಗ ದೊರೆತಿದ್ದು, ಕೆಲವು ಕಂಪನಿಗಳು ಕೆಲವರಿಗೆ ಸ್ಥಳದಲ್ಲಿಯೇ ಉದ್ಯೋಗ ಆದೇಶ ಪತ್ರ ನೀಡಿದರೆ, ಇನ್ನೂ ಕೆಲವು ಕಂಪನಿಗಳು ದಿನಾಂಕ ನಿಗದಿಪಡಿಸಿ, ಸಂದರ್ಶನಕ್ಕೆ ಬರುವಂತೆ ತಿಳಿಸಿದವು.



ಮೃಗಾಲಯ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಂ.ಶಿವಕುಮಾರ್ ಅವರನ್ನು ಚಾಮರಾಜ ಕ್ಷೇತ್ರದ ಮಾಜಿ ಅಧ್ಯಕ್ಷ ಶಿವರಾಮ್, ಪ್ರಧಾನ ಕಾರ್ಯದರ್ಶಿ ಪುನೀತ್, ರಮೇಶ್, ಮುಖಂಡರಾದ ಗೋವಿಂದರಾಜು, ಹೂಗುಚ್ಛ ನೀಡಿ, ಅಭಿನಂದಿಸಿದರು.

## ಇಂದು ಸಿಸಿ ಕ್ಲಬ್ ನವೀಕೃತ ಕೊಠಡಿಗಳ ಉದ್ಘಾಟನೆ

ಮೈಸೂರು,ಜು.28(ಆರ್‌ಕೆ)–ಮೈಸೂರಿನ ದಿ ಕಾಸ್ಮೊಪಾಲಿಟನ್ ಕ್ಲಬ್‌ನಲ್ಲಿ ನವೀಕೃತ ಅತಿಥಿ ಗೃಹದ ಕೊಠಡಿಗಳನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಾಳೆ (ಜು.29) ಉದ್ಘಾಟನೆ ಮಾಡುವರು. ಶುಕ್ರವಾರ ಸಂಜೆ 7 ಗಂಟೆಗೆ ಸಿಸಿ ಕ್ಲಬ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವ ಅವರು, ನವೀಕೃತ ಕೊಠಡಿಗಳನ್ನು ಉದ್ಘಾಟಿಸುವ ಜೊತೆಗೆ ಪ್ರೈಡ್ ಆಫ್ ಇಂಡಿಯಾ' ಗಿಡ ನೆಟ್ಟು ನೀರೆರೆಯುವರು. ಕ್ಲಬ್ ಅಧ್ಯಕ್ಷ ಸಿ.ನಾರಾಯಣಗೌಡ, ಉಪಾಧ್ಯಕ್ಷ ಎಸ್.ದ್ವಾರಕಿ, ಕಾರ್ಯದರ್ಶಿ ಹೆಚ್.ಎನ್.ಜಯಪಾಲ್, ಖಜಾಂಚಿ ಬಿ.ಪಿ.ವೀರೇಶ, ವ್ಯವಸ್ಥಾಪನಾ ಸಮಿತಿ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

## ಕಾರು ಮಾರಾಟ ಸೋಗಿನಲ್ಲಿ 2.90 ಲಕ್ಷ ಆನ್‌ಲೈನ್ ದೋಖಾ

### ಮೋಸ ಹೋದ ಸಾಫ್ಟ್‌ವೇರ್ ಇಂಜಿನಿಯರ್

ಕ್ರೈಂ ಬಾಕ್ಸ್

ಮೈಸೂರು, ಜು.28–ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಮಾಡುವ ಸೋಗಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಆನ್‌ಲೈನ್ ಮೂಲಕ 2.90 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ರಾಮಕೃಷ್ಣನಗರ ಹೆಚ್–ಬ್ಲಾಕ್ ನಿವಾಸಿ ಸಾಫ್ಟ್‌ವೇರ್ ಇಂಜಿನಿಯರ್ ಎಂ.ಮನೋಜ್(34) ಅವರು ಸೆಕೆಂಡ್ ಹ್ಯಾಂಡ್ ಕಾರು ಖರೀದಿಸಲು www.carwale.com ಎಂಬ ವೆಬ್‌ಸೈಟ್‌ನಲ್ಲಿ ಸರ್ಚ್ ಮಾಡಿದಾಗ ದೊರೆತ ಎರಡು ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಿದ್ದಾರೆ. ವಾಟ್ಸಾಪ್ ಮೂಲಕ ಅವರ ಸಂಪರ್ಕಕ್ಕೆ ಬಂದ ವ್ಯಕ್ತಿ, ತಾನು ಆರ್ಮಿಯಲ್ಲಿ ಕೆಲಸ ಮಾಡಿಕೊಂಡಿರುವುದಾಗಿ ನಂಬಿಸಿ ಮೊದಲಿಗೆ ಕಾರಿನ ಟ್ರಾನ್ಸ್‌ಪೋರ್ಟ್ ಸರ್ವೀಸ್ ಚಾರ್ಜ್ ಎಂದು 3150 ರೂ.ಗಳನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡು ನಂತರ 2.90 ಲಕ್ಷ ರೂ.ಗಳನ್ನು ಮನೋಜ್ ಅವರಿಂದ ವರ್ಗಾವಣೆ ಮಾಡಿಕೊಂಡು ವಂಚನೆ ಎಸಗಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವೇಶ್ಯಾವಾಟಿಕೆ: ಮೂವರ ಸೆರೆ

ಮೈಸೂರು, ಜು.28(ಆರ್‌ಕೆ)–ವೇಶ್ಯಾವಾಟಿಕೆ ಅಡ್ಡದ ಮೇಲೆ ದಾಳಿ ನಡೆಸಿದ ಜಿಲ್ಲಾ ಪೊಲೀಸ್ ಮಾನವ ಕಳ್ಳ ಸಾಗಾಣಿಕಾ ಘಟಕದ ಪೊಲೀಸರು ಮೂವರನ್ನು ಬಂಧಿಸಿ, ಓರ್ವ ಮಹಿಳೆಯನ್ನು ರಕ್ಷಿಸಿದ್ದಾರೆ. ಮೈಸೂರಿನ ರಮಾಬಾಯಿನಗರದ ಮನೆಯೊಂದರಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ನೂರಾನಿ, ಗೀತಾ ಹಾಗೂ ರಾಮಣ್ಣ ಎಂಬುವವರನ್ನು ಬಂಧಿಸಲಾಗಿದೆ. ಯುವತಿಯರ ಇರಿಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದರು. ಭಾತ್ಮೀದಾರರ ಸುಳಿವಿನ ಆಧಾರದಲ್ಲಿ ಜುಲೈ 26ರಂದು ದಾಳಿ ನಡೆಸಿದ ಮಾನವ ಕಳ್ಳ ಸಾಗಾಣಿಕೆ ಘಟಕದ ಸಬ್ ಇನ್ಸ್‌ಪೆಕ್ಟರ್ ಯಾಸ್ಮಿನ್ ತಾಜ್ ಹಾಗೂ ಸಿಬ್ಬಂದಿ, ಮೂವರನ್ನು ಬಂಧಿಸಿ, ಸಂತ್ರಸ್ತ ಮಹಿಳೆಯನ್ನು ರಕ್ಷಿಸಿ ಸ್ತ್ರೀ ಸೇವಾನಿಕೇತನ ಸ್ವಯಂ ಸೇವಾ ಸಂಸ್ಥೆಗೆ ಒಪ್ಪಿಸಿದ್ದಾರೆ.

ಮೈಸೂರು ಗ್ರಾಮಾಂತರ ಉಪ ವಿಭಾಗದ ಡಿವೈಎಸ್ಪಿ ಎಂ.ಎಸ್.ಪೂರ್ಣಚಂದ್ರ ತೇಜಸ್ವಿ ಅವರ ಮಾರ್ಗದರ್ಶನದಲ್ಲಿ ನಡೆದ ದಾಳಿಯಲ್ಲಿ ಮಹಿಳಾ ಠಾಣೆ ಇನ್ಸ್‌ಪೆಕ್ಟರ್ ವಿ.ಡಿ.ಮಮತಾ, ಸಿಬ್ಬಂದಿಗಳಾದ ಹರೀಶ್ ಕುಮಾರ್, ಎ.ದಾಕ್ಷಾಯಿಣಿ, ರಾಮ್‌ಪ್ರಸಾದ್, ಚಿಕ್ಕಲಿಂಗಯ್ಯ ಹಾಗೂ ಇತರರು ಪಾಲ್ಗೊಂಡಿದ್ದರು.

## ಗೃಹಿಣಿ ಸರ ಕಿತ್ತುಕೊಂಡು ಪರಾರಿಯಾದ ಖದೀಮರು

ಮೈಸೂರು, ಜು.28–ಸರಗಳ್ಳರು ಗೃಹಿಣಿಯೋರ್ವರ 2.10 ಲಕ್ಷ ರೂ. ಮೌಲ್ಯದ 2 ಚಿನ್ನದ ಸರಗಳನ್ನು ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಉದಯಗಿರಿ ಎಸ್‌ಬಿಎಂ ಕಾಲೋನಿಯಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಶ್ರೀಮತಿ ಲಕ್ಷ್ಮೀ(69) ಎಂಬುವರು ಜು.26ರಂದು ಸಂಜೆ 7.30ರ ಸುಮಾರಿನಲ್ಲಿ ಉದಯಗಿರಿ ರಾಮಧಾಮಕ್ಕೆ ಹೋಗಿ ಹಿಂತಿರುಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಅವರ ಮನೆಯ ಸಮೀಪವೇ ಗೃಹಿಣಿ ಧರಿಸಿದ್ದ 45 ಗ್ರಾಂ ತೂಕದ ಮಾಂಗಲ್ಯ ಸರ ಮತ್ತು 20 ಗ್ರಾಂ ತೂಕದ ಮತ್ತೊಂದು ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೈಸೂರಲ್ಲಿ ಜು.31ಕ್ಕೆ ಗ್ರಾಪಂ ಸದಸ್ಯರ ಸ್ವಾಭಿಮಾನಿ ಸಮಾವೇಶ



**ವಿವಿಧ ಬೇಡಿಕೆಗಳು**
- ಗೌರವಧನ ಹೆಚ್ಚಳ
- ಉಚಿತ ಬಸ್‌ಪಾಸ್
- ವಿಮಾ ಸೌಲಭ್ಯ
- ಪಿಂಚಣಿ ಸೌಕರ್ಯ
- ಸಾಂವಿಧಾನಿಕ ಸ್ವಾತಂತ್ರ್ಯ

ಮೈಸೂರು,ಜು.28(ಎಂಟಿವೈ)– ಗೌರವಧನ ಹೆಚ್ಚಳ, ವಿಮಾ ಸೌಲಭ್ಯ ಕಲ್ಪಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೈಸೂರಲ್ಲಿ ಜು.31 ರಂದು ಗ್ರಾಮ ಪಂಚಾಯಿತಿ ಸದಸ್ಯರ ಸ್ವಾಭಿಮಾನಿ ಸಮಾವೇಶ ಆಯೋಜಿಸಲಾಗಿದೆ ಎಂದು ಕರ್ನಾಟಕ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜು ಯದುನಾಡು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಸದಸ್ಯರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಗ್ರಾ.ಪಂ ಪಾತ್ರ ಬಹು ಮುಖ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಗ್ರಾಪಂಗೆ ಇದ್ದ ಅಧಿಕಾರ ಮೊಟಕುಗೊಳಿಸುವ ಹಾಗೂ ಅನುದಾನ ಕಡಿತ ಮಾಡುವ ಮೂಲಕ ಬಲ ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ 31 ಜಿಲ್ಲೆಗಳ 226 ತಾಲೂಕುಗಳಲ್ಲೂ ಗ್ರಾ.ಪಂ ಸದಸ್ಯರನ್ನು ಸಂಘಟಿಸಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ಗಮನ ಸೆಳೆಯಲು ಸ್ವಾಭಿಮಾನಿ ಸಮಾವೇಶ ಸಂಘಟಿಸಲಾಗುತ್ತಿದೆ ಎಂದರು. ಮೈಸೂರಲ್ಲಿ ಜು.31ರಂದು ಬೆಳಗ್ಗೆ 10ಗಂಟೆಗೆ ಪುರಭವನದ ಮುಂಭಾಗ ದಿಂದ ಗ್ರಾ.ಪಂ ಸದಸ್ಯರು ಬೃಹತ್ ಮೆರವಣಿಗೆಯಲ್ಲಿ ದಸರಾ ವಸ್ತುಪ್ರದರ್ಶನ ಮೈದಾನ ತಲುಪಲಿದ್ದಾರೆ. ಬಳಿಕ ವಸ್ತುಪ್ರದರ್ಶನದ ಆವರಣದಲ್ಲಿ ನಡೆಯುವ ಸ್ವಾಭಿಮಾನಿ ಸಮಾವೇಶವನ್ನು ಸಂಘದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಗೌರವಧನ ಹೆಚ್ಚಳ ಮಾಡಬೇಕು. ಉಚಿತ ಬಸ್‌ಪಾಸ್, ವಿಮಾ ಸೌಲಭ್ಯ, ಪಿಂಚಣಿ ಸೌಲಭ್ಯ ಒದಗಿಸಬೇಕು. ಸಂವಿಧಾನದ ಆಶಯದಂತೆ ಗ್ರಾಪಂಗಳನ್ನು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಪರಿವರ್ತಿಸಲು ಸೂಕ್ತ ವಾತಾವರಣ ಸೃಷ್ಟಿಸಬೇಕು. ಗ್ರಾ.ಪಂಗಳಿಗೆ ಅನುದಾನ ಹೆಚ್ಚಳ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಪಂ ಸಿಇಓ ಅವರಿಗೆ ಮನವಿಪತ್ರ ಸಲ್ಲಿಸಲಾಗುವುದು. ಸಮಾವೇಶದಲ್ಲಿ ಸುಮಾರು 3000 ಮಂದಿ ಗ್ರಾಪಂ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಗ್ರಾ.ಪಂ ಸದಸ್ಯರ ಮಹಾ ಒಕ್ಕೂಟದ ಪದಾಧಿಕಾರಿಗಳಾದ ರಂಗಸ್ವಾಮಿ ಜಿ. ಮರಳ್ಳಿ, ಮಂಜುನಾಥ್, ಬಿ.ಮಹದೇವ್, ಗುರುಮೂರ್ತಿ, ದೇವರಾಜು, ಶಿವಕುಮಾರ್ ಇದ್ದರು.

## ವೀರಶೈವ ಲಿಂಗಾಯತ ಸಮುದಾಯದವರಿಗೇ ಮುಡಾ ಅಧ್ಯಕ್ಷ ಗಾದಿ ಕಲ್ಪಿಸಿ

### ಸಮುದಾಯದ ಮುಖಂಡರ ಆಗ್ರಹ

ಮೈಸೂರು,ಜು.28(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದವರನ್ನೇ ಈ ಬಾರಿ ಅಧ್ಯಕ್ಷರನ್ನಾಗಿ ನೇಮಿಸುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟದ ಸದಸ್ಯ ಟಿ.ಎಸ್.ಲೋಕೇಶ್ ಒತ್ತಾಯಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ರಚನೆಯಾದ ದಿನದಿಂದಲೂ ವೀರಶೈವ ಲಿಂಗಾಯತ ಸಮಾಜಕ್ಕೆ ಸೇರಿದ ಯಾರನ್ನೂ ಅಧ್ಯಕ್ಷರನ್ನಾಗಿ ನಿಯೋಜಿಸದೇ ಇರುವುದು ಖಂಡನೀಯ. ಹೀಗಾಗಿ ಈ ಬಾರಿಯಾದರೂ ಬಿಜೆಪಿಯಲ್ಲಿ ಸಕ್ರಿಯರಾಗಿರುವ ಸಮುದಾಯದ ಯಾರನ್ನಾದರೂ ಅಧ್ಯಕ್ಷರನ್ನಾಗಿ ಸರ್ಕಾರ ನಿಯೋಜಿಸಬೇಕು. ಚುನಾವಣೆ ಸಮೀಪಿಸುತ್ತಿದ್ದಂತೆ ಸಮುದಾಯದ ಮುಖಂಡರನ್ನು ಮೈಸೂರಿಗೆ ಕರೆತಂದು ಪ್ರಚಾರ ಮಾಡಿಸುವ ಮೂಲಕ ಸಮುದಾಯದವರ ಮತ ಸೆಳೆಯಲು ಪ್ರಯತ್ನ ನಡೆಸುವ ರಾಜಕೀಯ ಪಕ್ಷಗಳು ಸಮುದಾಯಕ್ಕೆ ಪ್ರಾತಿನಿಧ್ಯತೆ ನೀಡುವಲ್ಲಿ ಮೀನಾಮೇಷ ಎಣಿಸುತ್ತವೆ. ಇದುವರೆಗೂ ಮುಡಾಕ್ಕೆ ಸಮುದಾಯದ ನಾಯಕರನ್ನು ನೇಮಕ ಮಾಡದೇ ನಿರ್ಲಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾಲಿಯಿರುವ ಮುಡಾಕ್ಕೆ ಸಮುದಾಯದ ಯಾರಾದರೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಸ್ವಂತ ಬಲದಿಂದ ಸರ್ಕಾರ ರಚಿಸಲು ಈ ಸಮುದಾಯ ಕಾರಣವಾಯಿತು. ಈಗ ಸರ್ಕಾರದ ಕೊನೆ ಅವಧಿಯಲ್ಲಿ ಮತ್ತೆ ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಮಾಡಲಾಗುತ್ತಿದೆ. ಹೀಗಾಗಿ ಮುಡಾಕ್ಕೆ ನೇಮಕ ಮಾಡುವ ವೇಳೆ ಸಮುದಾಯಕ್ಕೆ ಅವಕಾಶ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಶ್ರೀಹೊಸಮಠದ ಚಿದಾನಂದಸ್ವಾಮೀಜಿ, ಕುದೇರು ಗುರುಶಾಂತ ಸ್ವಾಮೀಜಿ, ಹಿನಕಲ್ ಬಸವರಾಜು, ಎಂ.ಎಚ್. ಚಂದ್ರಶೇಖರ್ ಇದ್ದರು.

## ಗೀತೋತ್ಸವ ಗಾಯನ ಇಂದು

ಮೈಸೂರು,ಜು.28(ಎಂಟಿವೈ)– ಮೈಸೂರಿನ ಶ್ರೀಗಂಧ ಕಲಾತಂಡದ ವತಿಯಿಂದ ನಾಳೆ(ಜು.29) ಸಂಜೆ 5.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಗೀತೋತ್ಸವ' ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ಜಯರಾಂ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ಪ್ರಿಯರಿಗೆ ರಸದೌತಣ ಉಣಬಡಿಸುವ ನಿಟ್ಟಿನಲ್ಲಿ ಗಾಯನ ಕಾರ್ಯಕ್ರಮದಲ್ಲಿ ಪ್ರಸಿದ್ಧಿ ಪಡೆದಿರುವ ಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ ಮತ್ತು ಹಳೆಯ ಸುಮಧುರ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಆಯೋಜಿಸಲಾಗಿದೆ. ಗಾಯಕರಾದ ಬಾಲುಪ್ರಕಾಶ್, ಆದರ್ಶ್, ಶ್ರೀನಿವಾಸ್, ಸುಧೀಂದ್ರ ವಿಶ್ವನಾಥ್, ಶಾರದಾಂಬ, ಶಶಿಕಲಾ, ರಶ್ಮಿ, ಧನ್ಯಶ್ರೀ ಸೇರಿದಂತೆ 18 ಮಂದಿ ಗಾಯಕರು ಗೀತೋತ್ಸವದಲ್ಲಿ ಹಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಉದ್ಯಮಿ ರವಿಗೌಡ, ಮೇಲುಕೋಟೆ ವಂಗೀಪುರದ ಇಳೈ ಆಳ್ವಾರ್ ಸ್ವಾಮೀಜಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿರುವ ಈ ಕಾರ್ಯಕ್ರಮದಲ್ಲಿ ನೈಜ ವಾದ್ಯ ಪರಿಕರಗಳನ್ನು ನುಡಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಗಾಯಕರಾದ ಆದರ್ಶ್, ಶ್ರೀನಿವಾಸ್, ಸುಧೀಂದ್ರ ಇದ್ದರು.

## ಕಾಂಗ್ರೆಸ್‌ಗೆ ನೇಮಕ



ಮೈಸೂರು,ಜು.28– ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಸಂಘಟನಾ ಕಾರ್ಯದರ್ಶಿಯಾಗಿ ಮೈಸೂರಿನ ಬಡಾಮಕಾನ್ ನಿವಾಸಿ ಸೈಯ್ಯದ್ ಫಾರೂಕ್ ಅವರನ್ನು ನೇಮಕ ಮಾಡಲಾಗಿದೆ.

# ಇಂದಿನಿಂದ ಕೆಆರ್‌ಎಸ್ ಹಿನ್ನೀರಲ್ಲಿ ಜೂನಿಯರ್ ರ್‍ಯಾಂಕಿಂಗ್ ಸೈಲಿಂಗ್ ಚಾಂಪಿಯನ್‌ಶಿಪ್

- ದೇಶದ ವಿವಿಧ ಭಾಗಗಳಿಂದ 150ಕ್ಕೂ ಹೆಚ್ಚು ಕಿರಿಯ ನಾವಿಕ ಪಟುಗಳು ಭಾಗಿ
- ಆಹ್ವಾನಿತರಿಗೆ ಮಾತ್ರ ಪ್ರವೇಶಾವಕಾಶ; ಮಾಹಿತಿಗೆ ಸಂಪರ್ಕಿಸಿ: 90350-98720




ಸಾರ್ವಜನಿಕರಿಗೆ ಚಾಂಪಿಯನ್‌ಶಿಪ್ ನಡೆಯುವ ಸ್ಥಳಕ್ಕೆ ಪ್ರವೇಶಾವಕಾಶವಿಲ್ಲ. ಆಹ್ವಾನಿತರಿಗೆ ಮಾತ್ರ ವೀಕ್ಷಿಸಲು ಅವಕಾಶ. ಆಹ್ವಾನ ಪತ್ರಕ್ಕಾಗಿ ಆರ್‌ಎಂಎಸ್‌ಸಿ ಸಂಸ್ಥಾಪಕ ಕ್ಯಾಪ್ಟನ್ ಅರವಿಂದ ಶರ್ಮ (ಮೊ.90350 –98720) ಸಂಪರ್ಕಿಸಿ.

ಮೈಸೂರು, ಜು.28(ಆರ್‌ಕೆ)– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ಹಿನ್ನೀರಿನಲ್ಲಿ ನಾಳೆ (ಜು.29)ಯಿಂದ ನ್ಯಾಷನಲ್ ಜೂನಿಯರ್ ರ್‍ಯಾಂಕಿಂಗ್ ಸೈಲಿಂಗ್ ಚಾಂಪಿಯನ್‌ಶಿಪ್ ನಡೆಯಲಿದೆ.

ದಿ ರಾಯಲ್ ಮೈಸೂರ್ ಸೈಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ) ವತಿಯಿಂದ ನ್ಯಾಷನಲ್ ಫೆಡರೇಷನ್ ಯಾಚಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ವೈಎಐ) ಸಹಯೋಗದೊಂದಿಗೆ ಆಯೋಜಿಸಿರುವ ರಾಷ್ಟ್ರೀಯ ಕಿರಿಯರ ಶ್ರೇಯಾಂಕ ನೌಕ ಕ್ರೀಡೆಯು ಆಗಸ್ಟ್ 4ರವರೆಗೆ ನಡೆಯಲಿದೆ. ಚಾಂಪಿಯನ್‌ಶಿಪ್‌ನಲ್ಲಿ 150ಕ್ಕೂ ಹೆಚ್ಚು ಪಟುಗಳು ಭಾಗವಹಿಸುವ ನಿರೀಕ್ಷೆ ಇದೆ.

ಆಹ್ವಾನಿತರಿಗೆ ಮಾತ್ರ ಸ್ಪರ್ಧೆ ವೀಕ್ಷಿಸಲು ಅವಕಾಶವಿದೆ. ತಮಿಳುನಾಡು, ಹೈದರಾಬಾದ್, ಮುಂಬೈ, ಭೂಪಾಲ್, ಗೋವಾ, ಕರ್ನಾಟಕ, ಇಂಡಿಯನ್ ನೇವಿ ಮತ್ತು ಇಂಡಿಯನ್ ಆರ್ಮಿ ಘಟಕಗಳು ಸೇರಿ ದೇಶದ ವಿವಿಧ ಭಾಗಗಳ ಸುಮಾರು 70 ಮಂದಿ ಸೈಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಹೆಸರು ನೋಂದಾಯಿಸಿದ್ದಾರೆ ಎಂದು ದಿ ರಾಯಲ್ ಮೈಸೂರ್ ಸೈಲಿಂಗ್ ಕ್ಲಬ್ ಸದಸ್ಯರಾದ ಸಿದ್ದಾರ್ಥ ಹೋಟೆಲ್ ಮತ್ತು ವಿಂಡ್ ಫ್ಲವರ್ ರೆಸಾರ್ಟ್ ಪ್ರಮೋಟರ್ ಪಿ.ವಿ.ಗಿರಿ ತಿಳಿಸಿದ್ದಾರೆ.

ಶುಕ್ರವಾರವೂ ಸ್ಪರ್ಧೆ ನಡೆಯುವ ಕೆಆರ್‌ಎಸ್ ಹಿನ್ನೀರಿನ ಸ್ಥಳದಲ್ಲಿ ನೋಂದಣಿ ಪ್ರಕ್ರಿಯೆ ನಡೆಯಲಿದ್ದು, ಕೆಲವರು ಇಂದು ದೋಣಿಗಳೊಂದಿಗೆ ಆಗಮಿಸಿ ಸ್ಪರ್ಧೆಗೆ ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಗಾಳಿಯ ವೇಗ, ದಿಕ್ಕು ವಾತಾವರಣದ ಬಗ್ಗೆ ಅರಿಯುತ್ತಿರುವ ಸೈಲಿಂಗ್ ಪಟುಗಳು, ಪ್ರಾಯೋಗಿಕ ಪರೀಕ್ಷೆಯಲ್ಲಿ ನಿರತರಾಗಿದ್ದಾರೆ ಎಂದರು.

ಭಾರೀ ವಾಹನಗಳಲ್ಲಿ ತಂದ ದೋಣಿಗಳನ್ನು ಸ್ಪರ್ಧೆಗೆ ಬೇಕಾದಂತೆ ಜೋಡಿಸಿಕೊಂಡು ಪೂರ್ವ ಸಿದ್ಧತಾ ಕಾರ್ಯದಲ್ಲಿ ತೊಡಗಿರುವ ಸೈಲಿಂಗ್ ಪಟುಗಳು ಗೆಲುವಿಗೆ ಪೂರಕ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಚಾಂಪಿಯನ್ ಶಿಪ್ ವಿಜೇತರು ಏಷಿಯನ್ ಗೇಮ್ಸ್, ಯೂರೋಪಿಯನ್ ಗೇಮ್ಸ್ ಮತ್ತು ಒಲಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅರ್ಹರಾಗುತ್ತಾರೆ ಎಂದು ಪಿ.ವಿ.ಗಿರಿ ತಿಳಿಸಿದ್ದಾರೆ.

ಐಎಲ್‌ಸಿಎ 4.7, ಆರ್‌ಎಸ್–1, ಆಪ್ಟಿಮಿಸ್ಟ್ ಮತ್ತು ಆಪ್ಟಿಮಿಸ್ಟ್ ಗ್ರೀನ್ ಫ್ಲೇಟ್ ವರ್ಗಗಳಲ್ಲಿ ಸೈಲಿಂಗ್ ಚಾಂಪಿಯನ್‌ಶಿಪ್ ನಡೆಯಲಿದ್ದು, ಎನ್.ಆರ್. ಗ್ರೂಪ್ ಟೈಟಲ್ ಪ್ರಾಯೋಜನೆ ಮಾಡಿದೆ. ಎಂಐಐಎಲ್ ಗ್ಲೋಬಲ್ ಬೆಂಬಲಿಸುತ್ತಿರುವ ಚಾಂಪಿಯನ್‌ಶಿಪ್‌ಗೆ ಮೈಸೂರು ಹೋಟೆಲ್ ಮಾಲೀಕರ ಸಂಘ ನೆರವು ನೀಡಿದೆ. ನ್ಯಾಷನಲ್ ಜೂನಿಯರ್ ರ್‍ಯಾಂಕಿಂಗ್ ಸೈಲಿಂಗ್ ಚಾಂಪಿಯನ್‌ಶಿಪ್ ಮುಗಿದ ನಂತರ ದಿ ರಾಯಲ್ ಮೈಸೂರ್ ಸೈಲಿಂಗ್ ಕ್ಲಬ್ ವತಿಯಿಂದ ಆ.4ರಿಂದ 7ರವರೆಗೆ ನ್ಯಾಷನಲ್ ಫನ್ ರೆಗಟ್ಟಾ ಏರ್ಪಡಿಸಲಿದ್ದು, ದೇಶದ ವಿವಿಧ ಭಾಗಗಳಿಂದ ಬರುವ ಸ್ಪರ್ಧಿಗಳನ್ನು ಒಂದೆಡೆ ಸೇರಿಸಲು ಹಾಗೂ ಮೈಸೂರನ್ನು ಪ್ರವಾಸಿ ತಾಣವಾಗಿ ಪ್ರೇರೇಪಿಸಲು ಸಹಕಾರಿಯಾಗಲಿದೆ. ಆರ್‌ಎಂಎಸ್‌ಸಿಯು ನಗರದ ಬೆಳವಣಿಗೆ ಹಾಗೂ ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗಾಗಿ 'city of sails' ಎಂಬ ಅಭಿಯಾನ ಆರಂಭಿಸಲಿದ್ದು, ಕ್ರೀಡೆ ಮತ್ತು ಕೆಆರ್‌ಎಸ್ ಹಿನ್ನೀರಿನ ಪ್ರದೇಶ ಮೈಸೂರಿನ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂಬುದರ ಬಗ್ಗೆ ಜಾಗೃತಿ ಮೂಡಿಸಲಿದೆ.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ಮದುವೆಗೆ ಮುಂಚೆ ನೀವು ಎಲ್ಲಾ ಹಬ್ಬಕ್ಕೂ ಸೀರೆ, ಬಳೆ ಎಲ್ಲಾ ಕೊಡಿಸ್ತಾ ಇದ್ರಿ, ಈಗ ಯಾಕೆ ಹೀಗೆ?

ಗಂಡ : ನೋಡೆ ಮೀನು ಹಿಡಿದ ಮೇಲೆ ಯಾರಾದರೂ ಅದಕ್ಕೆ ಎರೆ ಹುಳು ತಿನ್ನಿಸ್ತಾರಾ?

ಮೈಸೂರು ಮಿತ್ರ

ಶುಕ್ರವಾರ, 29 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

### ಅಮೃತವಾಹಿನಿ

ಭವಿಷ್ಯತ್ತಿನೊಂದಿಗೆ ಯಾರು ಅತೀ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ. –ಹೆನ್ರಿಕ್ ಇಬ್ಸನ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಚ್ಚು ಹಾಕಿಸಿದ ಮಾತ್ರಕ್ಕೆ ಪದ್ಯವಾಗಿ ಹೋದೀತೆ?

## ನಿಮ್ಮ ಪತ್ರಗಳು

### ಕಾಂಗ್ರೆಸ್‌ಗೆ ಶಕ್ತಿ ನೀಡುತ್ತಾ 'ಸಿದ್ದರಾಮೋತ್ಸವ'

ಮಾನ್ಯರೆ,

ರಾಜ್ಯ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ವಿವಿಧ ಪಕ್ಷಗಳ ರಾಜಕೀಯ ನಾಯಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯಗೊಳ್ಳುತ್ತಿದ್ದಾರೆ. ಇದರ ನಡುವೆ ರಾಜ್ಯ ರಾಜಕಾರಣದಲ್ಲಿ 'ಸಿದ್ದರಾಮೋತ್ಸವ' ಸಿಕ್ಕಾಪಟ್ಟೆ ಸದ್ದು ಮಾಡುತ್ತಿದೆ. ಇದು ರಾಜ್ಯ ಕೈ ಪಾಳಯದಲ್ಲಿ ಬಣ ಬಡಿದಾಟಕ್ಕೂ ಎಡೆ ಮಾಡಿಕೊಟ್ಟಿದೆ.

ರಾಜ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರಿಗೆ ಆಗಸ್ಟ್ 3 ರಂದು 75 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಜನ್ಮದಿನವನ್ನು ಸ್ನೇಹಿತರು ಮತ್ತು ಲಕ್ಷಾಂತರ ಅಭಿಮಾನಿಗಳ ಜೊತೆ ಆಚರಿಸಿಕೊಳ್ಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯನವರು ಇದನ್ನು 75ನೇ ಅಮೃತ ಮಹೋತ್ಸವ ಎಂದರೆ, ಅಭಿಮಾನಿಗಳು 'ಸಿದ್ದರಾಮೋತ್ಸವ' ಎನ್ನುತ್ತಿದ್ದಾರೆ. ಈ ಅಭಿಮಾನದ 'ಸಿದ್ದರಾಮೋತ್ಸ'ವದ ಬಗ್ಗೆ ಆಡಳಿತ ಬಿಜೆಪಿ ಪಕ್ಷದ ನಾಯಕರನ್ನೊಳಗೊಂಡಂತೆ ಸ್ವಪಕ್ಷೀಯರಿಂದಲೇ ವಿರೋಧದ ಮಾತುಗಳು ಕೇಳಿ ಬರುತ್ತಿವೆ. ಎಂದೂ ಜನ್ಮದಿನವನ್ನು ಆಚರಿಸಿಕೊಳ್ಳದ ಸಿದ್ದರಾಮಯ್ಯನವರು ಚುನಾವಣೆ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಮತ್ತು ಜನ್ಮದಿನ ಆಚರಣೆ ನೆಪದಲ್ಲಿ ಲಕ್ಷಾಂತರ ಜನರನ್ನು ಸೇರಿಸುವ ಮೂಲಕ ಶಕ್ತಿ ಪ್ರದರ್ಶನ ಮಾಡುತ್ತಿದ್ದಾರೆ ಹಾಗೂ ಮುಂದಿನ ಸಿಎಂ ಅಭ್ಯರ್ಥಿ ನಾನೇ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ ಎಂಬುದು ಕೆಲವರ ಟೀಕೆ. ಅಭಿಮಾನದ 'ಸಿದ್ದರಾಮೋತ್ಸವ'ದ ಬಗ್ಗೆ ಏನೇ ಟೀಕೆ, ಟಿಪ್ಪಣಿ ಇದ್ದರೂ ಕೂಡ ರಾಜ್ಯ ರಾಜಕಾರಣದಲ್ಲಿ ಸಿದ್ದರಾಮಯ್ಯ 'ಮಾಸ್ ಲೀಡರ್' ಎನ್ನುವುದು ಸುಳ್ಳಲ್ಲ. 2013 ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮತ್ತು ಸಿದ್ದರಾಮಯ್ಯನವರು ಸಿಎಂ ಗಾದಿಗೇರಲು ಸ್ವತಃ ಸಿದ್ದರಾಮಯ್ಯನವರೇ ಕಟ್ಟಿದ್ದ ಅಹಿಂದ ಸಂಘಟನೆ ಸಹಕಾರಿಯಾಗಿತ್ತು ಎನ್ನುವುದು ಇತಿಹಾಸ. ಇತಿಹಾಸ ಮತ್ತೆ ಮರುಕಳಿಸುತ್ತಾ? ಅಹಿಂದದಂತೆ 'ಸಿದ್ದರಾಮೋತ್ಸವ' ಕೂಡ 2023ಕ್ಕೆ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲು ಶಕ್ತಿ ನೀಡುತ್ತಾ? ಇಲ್ಲ ಬಣ ಬಡಿದಾಟಕ್ಕೆ ಕಾರಣವಾಗಿ ರಾಜ್ಯ ಕಾಂಗ್ರೆಸ್ ಛಿದ್ರವಾಗುತ್ತಾ? ಕಾದು ನೋಡೋಣ.

–ರಮೇಶ್ ಮೌರ್ಯ, ಹೆಡಿಯಾಲ, ನಂಜನಗೂಡು ತಾ.

### ಈಜುಕೊಳದಂತಿರುವ ಬಿಎಂಶ್ರೀ ರೈಲ್ವೆ ಅಂಡರ್‌ಬ್ರಿಡ್ಜ್



ಮಾನ್ಯರೆ,

ಮೈಸೂರಿನ ಬಿ.ಎಂ.ಶ್ರೀ ನಗರದಲ್ಲಿರುವ ರೈಲ್ವೆ ಅಂಡರ್‌ಬ್ರಿಡ್ಜ್ ಈಜುಕೊಳದಂತೆ ನೀರು ತುಂಬಿಕೊಂಡಿದ್ದು, ಇಲ್ಲಿನ ನಿವಾಸಿಗಳ ಓಡಾಟಕ್ಕೆ ತುಂಬಾ ತೊಂದರೆಯಾಗಿದೆ. ವಾಹನಗಳ ಚಕ್ರಗಳು ಮುಳುಗುವಷ್ಟು ನೀರು ನಿಂತಿದ್ದು, ವಾಹನ ಸವಾರರು, ಪಾದಚಾರಿಗಳು ಓಡಾಡುವುದೇ ದುಸ್ಸಾಹಸವಾಗಿದೆ. ರಾತ್ರಿ ವೇಳೆಯಲ್ಲಿ ಎಷ್ಟೋ ಜನರು ಈ ಕೆಸರಿನಲ್ಲಿ ಬಿದ್ದು ಗಾಯಗಳಾಗಿರುವ ಉದಾಹರಣೆಗಳಿವೆ ಪ್ರತಿ ಸಾರಿ ಮಳೆ ಬಂದಾಗ ಅಧಿಕಾರಿಗಳು ಬರುತ್ತಾರೆ, ನೋಡುತ್ತಾರೆ. ಹಳ್ಳ ಕೊಳ್ಳಗಳಿಗೆ ಮಣ್ಣು ತುಂಬಿ ಹೋಗುತ್ತಾರೆ ಅಷ್ಟೆ, ನಂತರ ಇದರ ಕಡೆ ಯಾವ ಅಧಿಕಾರಿಗಳೂ ಗಮನಹರಿಸುವುದಿಲ್ಲ. ಯಾರಾದರೂ ಪ್ರಾಣ ತೆತ್ತರೆ ಮಾತ್ರ ಸರಿ ಮಾಡುವರು ಎಂದು ಭಾವಿಸಬೇಕಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರೈಲ್ವೆ ಅಂಡರ್‌ಬ್ರಿಡ್ಜ್ ಸರಿಪಡಿಸಿ ನಿವಾಸಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಅಂಕುರ ಕಲಿಟ, ಮಹಾರಾಜ ಕಾಲೇಜು, ಮೈಸೂರು

### ಜಾತಿ, ಧರ್ಮದಿಂದ ಬಿಂಬಿಸುವುದು ತಪ್ಪಬೇಕು!

ಮಾನ್ಯರೆ,

ಮನುಷ್ಯನೊಬ್ಬ ಕೊಲೆಯಾದರೆ ಅದರಲ್ಲಿ ಜಾತಿ, ಧರ್ಮ ಹುಡುಕುವ ನೀಚತನ ಯಾರಿಗೂ ಇರಬಾರದು. ಏಕೆಂದರೆ ಧರ್ಮ ಹಾಗೂ ಜಾತಿಯ ಹೆಸರಿನಲ್ಲಿ ಕೊಲೆಗಳು ಆಗುತ್ತಿವೆಂದು ಬಿಂಬಿಸಿದರೆ ಸಮಾಜದ ಸಾಮರಸ್ಯ ಹದಗೆಡುವುದರ ಜೊತೆಗೆ ಮತೀಯ ಗಲಭೆಗಳು ಇನ್ನಷ್ಟು ಹೆಚ್ಚಾಗುತ್ತವೆ.

ಇಂತಹ ಜಾತಿ ಹಾಗೂ ಧರ್ಮದವನು ಕೊಲೆಯಾಗಿದ್ದಾನೆ ಅಂತ ಬಿಂಬಿಸಿದರೆ, ಯಾವ ಜಾತಿಯವನು ಕೊಲೆ ಆಗೋಕೆ ಅರ್ಹ ಅಂತ ಬಿಂಬಿಸಿದವರೇ ಹೇಳಬೇಕು!? ದಲಿತ ವ್ಯಕ್ತಿಯೊಬ್ಬ ಕೊಲೆಯಾದರೆ ನಮ್ಮ ಸಮಾಜ ನೋಡುವುದೇ ಬೇರೆ. ಕೊಲೆಯಾದವನು ಹಿಂದೂ ಆದರೆ ಅದಕ್ಕೆ ಮತ್ತೊಂದು ಪ್ರತಿಕ್ರಿಯೆ. ಮುಸ್ಲಿಮನೊಬ್ಬ ಹಿಂದೂವಿನಿಂದ ಕೊಲೆಯಾದರೆ ಒಂದು ಥರದ ಪ್ರತಿಕ್ರಿಯೆ.. ಅದೇ ಹಿಂದೂವೊಬ್ಬ ಮುಸ್ಲಿಮನಿಂದ ಕೊಲೆಯಾದರೆ ಜಾಣಮೌನ!? ದಲಿತನಿಂದ ಬ್ರಾಹ್ಮಣ ಕೊಲೆಯಾದರೆ ಅದಕ್ಕೊಂದು ಬಣ್ಣ. ದಲಿತರಿಬ್ಬರೇ ತಮ್ಮಷ್ಟಕ್ಕೆ ತಾವೇ ಹೊಡೆದುಕೊಂಡು ಸತ್ತೋದರೆ ಅದಕ್ಕೊಂದು ವ್ಯಾಖ್ಯಾನ.... ಹೀಗೆ ಪ್ರತಿ ಸಾವಿಗೂ ಜಾತಿ, ಧರ್ಮದ ಅನ್ವಯ, ವ್ಯಾಖ್ಯಾನ ಕೊಡುತ್ತಾ ಹೋದರೆ ಸಮಾಜದ ಸಾಮರಸ್ಯ ಹದಗೆಡದೆ ಇನ್ನೇನಾದೀತು? ಸಮಾಜದ ಯಾವುದೇ ವ್ಯಕ್ತಿ ಕೊಲೆಯಾದರೂ, ಆ ವ್ಯಕ್ತಿಯ ಕೊಲೆಗೆ ಕಾರಣ ತಿಳಿಸಬೇಕೆ ವಿನಹ, ಕೊಲೆಯಾದ ವ್ಯಕ್ತಿ ಯಾವ ಜಾತಿ ಹಾಗೂ ಧರ್ಮದವನು ಅಂತ ಬಿಂಬಿಸಬಾರದು. ಇದರಿಂದ ಸಮಾಜದ ನೆಮ್ಮದಿಯೂ ಹಾಳು. ಜೊತೆಗೆ ಕೋಮು ಸಂಘರ್ಷಕ್ಕೆ ನಾವೇ ಆಹ್ವಾನ ಕೊಟ್ಟಂತೆ ಆಗುತ್ತದೆ. ಇದು ತಪ್ಪಬೇಕು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ಜಾತಿಯ ಹೆಸರಿನಲ್ಲಿ ಮಕ್ಕಳ ಪೌಷ್ಟಿಕತೆ ಕುಗ್ಗದಿರಲಿ

ಮಾನ್ಯರೆ,

ಸರ್ಕಾರಿ ಶಾಲೆಯಲ್ಲಿ ಪೌಷ್ಟಿಕ ಆಹಾರ ದೊರಕಬೇಕೆಂಬ ನಿಟ್ಟಿನಲ್ಲಿ ಸರ್ಕಾರಿ ಮತ್ತು ಸರ್ಕಾರದ ಅನುದಾನಿತ ಶಾಲೆಗಳಲ್ಲಿ ಒಂದರಿಂದ ಎಂಟನೇ ತರಗತಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ಮತ್ತು ಬಾಳೆಹಣ್ಣು ವಿತರಣೆ ಯೋಜನೆಯು ರಾಜ್ಯದಲ್ಲಿ ಆರಂಭವಾಗಿದೆ. ಶಾಲೆಗಳಲ್ಲಿ ಓದುವ ಬಹುತೇಕ ಮಕ್ಕಳು ಬಡವರ ಕುಟುಂಬದಿಂದಲೇ ಬಂದಿರುತ್ತಾರೆ. ಆರೋಗ್ಯಕರ ದೃಷ್ಟಿಯಿಂದ ಮಕ್ಕಳ ಬೆಳವಣಿಗೆಗೆ ಪೂರಕವಾಗುವ ಆಹಾರಗಳು ಈ ಸಮಯದಲ್ಲಿ ಅನಿವಾರ್ಯ. ಇದನ್ನು ಪೋಷಕರು ಅರಿಯಬೇಕಿದೆ.

ಜಾತಿಯ ನೀತಿ ನಿಯಮಗಳ ಕಟ್ಟುಪಾಡಿನಿಂದಾಗಿ ಮಕ್ಕಳಿಗೆ ಶಾಲೆಯಲ್ಲಿ ನೀಡಲಾಗುವ ಪೌಷ್ಟಿಕ ಆಹಾರಗಳನ್ನು ತಿನ್ನದಂತೆ ತಾಕೀತು ಹಾಕುವುದನ್ನು ಪೋಷಕರು ನಿಲ್ಲಿಸಬೇಕಾಗಿದೆ. ಮನೆಯೇ ಮೊದಲ ಪಾಠಶಾಲೆ. ಸರ್ಕಾರದ ಈ ಯೋಜನೆಯನ್ನು ಸಮಾಜದ ಎಲ್ಲಾ ಮಕ್ಕಳು ಅನುಭವಿಸುವಂತಾಗಬೇಕು.

–ಚಂದನ್ ಆರ್ ಮಹಾರಾಜ ಕಾಲೇಜು ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

**ಸಮಾಜಮುಖಿ**

# ಹಿರಿಯರ ಸಂಖ್ಯೆ ಹೆಚ್ಚಳ: ಸವಾಲುಗಳು–ಸಾಧ್ಯತೆಗಳು



ಜಗತ್ತಿನ ಜನಸಂಖ್ಯೆಯಲ್ಲಿ ಹಿರಿಯರ (60+ ವಯೋಗುಂಪು) ಸಂಖ್ಯೆ ಕ್ರಮೇಣ ಹೆಚ್ಚುತ್ತಿರುವುದು ಸಮಕಾಲೀನ ಸಮಾಜ ಕಾಣುತ್ತಿರುವ ಧನಾತ್ಮಕ ಬದಲಾವಣೆಗಳಲ್ಲಿ ಒಂದು. ಈ ಪರಿಸ್ಥಿತಿ ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಗುಣಮಟ್ಟದ ಸಂಕೇತವಷ್ಟೇ ಅಲ್ಲ, ಸುಸ್ಥಿರ–ಸುರಕ್ಷಿತ ಬದುಕನ್ನು ನಡೆಸುವುದಕ್ಕೂ ವಯಸ್ಸಿಗೂ ಸಂಬಂಧವಿರಬೇಕಿಲ್ಲ ಎಂಬ ಸಂದೇಶವೂ ಹೌದು. ಆದರೆ ಹಿರಿಯರು ಸಮರೂಪವಾದ ಒಂದು ವರ್ಗವಲ್ಲ. ವಯಸ್ಸು, ಲಿಂಗ, ಜಾತಿ, ದೈಹಿಕ ಮತ್ತು ಮಾನಸಿಕ ಸ್ಥಿತಿ, ಅವರಿಗೆ ದೊರೆಯುವ ಅಥವಾ ದೊರೆಯದಿರುವ ಕೌಟುಂಬಿಕ, ಸಾಮಾಜಿಕ ಹಾಗೂ ಆರ್ಥಿಕ ಬೆಂಬಲ–ಇವೇ ಮುಂತಾದ ಅಂಶಗಳ ಆಧಾರದ ಮೇಲೆ ಅವರ ಜೀವನ ಸಾಗುವ ಪಥದ ಪರಿಸ್ಥಿತಿ ನಿರ್ಧಾರವಾಗುತ್ತದೆ.

ಭಾರತದಲ್ಲಿ ಹಿರಿಯರ ಜನಸಂಖ್ಯೆ ಹಾಲಿ ಶೇ.10.1 ರಷ್ಟಿದೆ. ಕಳೆದ ದಶಕದಲ್ಲಿ, ಎಂದರೆ, 2011ರಿಂದ 2021ರವರೆಗೆ ಹಿರಿಯರ ಜನಸಂಖ್ಯೆ ಶೇ.32.7ರ ಪ್ರಮಾಣದಲ್ಲಿ ಹೆಚ್ಚಾಗಿದ್ದರೆ ಇಡೀ ದೇಶದ ಒಟ್ಟು ಜನಸಂಖ್ಯೆಯ ಹೆಚ್ಚಳವಾದದ್ದು ಶೇ.12.4ರಷ್ಟು. ಈ ದಶಕ ಕೊನೆಗೊಳ್ಳುವ ವೇಳೆಗೆ ಹಿರಿಯರ ಜನಸಂಖ್ಯೆ ಶೇ.13.1ರಷ್ಟಾಗಲಿದ್ದು, 2050ರ ವೇಳೆಗೆ ಶೇ.18ರಷ್ಟು ಭಾರತದ ಜನಸಂಖ್ಯೆ 60 +ರ ವಯೋಗುಂಪಿನಲ್ಲಿರುತ್ತಾರೆ. ಜಗತ್ತಿನ ಜನಸಂಖ್ಯೆಯಲ್ಲಿ ಈ ಅವಧಿಯಲ್ಲಿ ಹಿರಿಯರ ಪ್ರಮಾಣ 22% ಇರಲಿದೆ ಎಂದು ಜನಸಂಖ್ಯಾ ಅಧ್ಯಯನಗಳು ತಿಳಿಸುತ್ತಿವೆ.

ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲೂ ಹಿರಿಯರ ಜನಸಂಖ್ಯೆಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು. ಜಾಗತಿಕ ಮಟ್ಟದಲ್ಲಿ 60+ ಜನಸಂಖ್ಯೆಯಲ್ಲಿ ಅವರ ಪ್ರಮಾಣ ಶೇ.55ರಷ್ಟಿದ್ದು, 80+ರ ವಯೋಗುಂಪಿನಲ್ಲಿ ಅವರ ಪ್ರಮಾಣ ಪುರುಷರಿಗಿಂತ ಎರಡರಷ್ಟಿದೆ. ಆದರೆ ವಯಸ್ಸಾಗುವಿಕೆಯ ಪ್ರಕ್ರಿಯೆಯ ಪರಿಣಾಮಗಳನ್ನು ಅತ್ಯಂತ ಪ್ರಬಲವಾಗಿ ಎದುರಿಸುವವರೂ ಮಹಿಳೆಯರೇ.

ಭಾರತದಲ್ಲಿ ಹಿರಿಯರ ಸಂಖ್ಯೆ ಹೆಚ್ಚಾಗುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಜನಸಂಖ್ಯೆಯ ಜೀವಿತಾವಧಿಯಲ್ಲಿ ಏರಿಕೆಯಾಗಿರುವುದು. 1951ರಲ್ಲಿ, ಎಂದರೆ ಅಭಿವೃದ್ಧಿ ಯೋಜನೆಗಳ ಕಾಲ ಆರಂಭವಾದಾಗ ಮಾನವ ಜೀವಿತಾಪೇಕ್ಷ (ವ್ಯಕ್ತಿಗಳು ಹುಟ್ಟಿದಾಗಿನಿಂದ ಎಷ್ಟು ವರ್ಷ ಬದುಕುತ್ತಾರೆ ಎನ್ನುವುದು) ಕೇವಲ 32 ವರ್ಷಗಳಿದ್ದವು. ಆದರೆ ಈಗ ಅದು ಪುರುಷರಿಗೆ ಹೆಚ್ಚು–ಕಡಿಮೆ 70 ಮತ್ತು ಮಹಿಳೆಯರಿಗೆ 73ರಷ್ಟಾಗಿದೆ. ದೇಶದ ಎಲ್ಲ ರಾಜ್ಯಗಳಲ್ಲೂ ಬಹು ಮಟ್ಟಿಗೆ ಇದೇ ಪರಿಸ್ಥಿತಿ ಇದೆ. ಈ ಬದಲಾವಣೆಗೆ ಪ್ರಧಾನ ಕಾರಣಗಳೆಂದರೆ ವಿವಾಹದ ವಯಸ್ಸಿನಲ್ಲಿ ಏರಿಕೆಯಾಗಿ, ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಕನಿಷ್ಠ 10ನೇ ತರಗತಿಯನ್ನಾದರೂ ದಾಟುವವರೆಗೆ ಶಾಲೆಗಳಲ್ಲಿ ಮುಂದುವರೆಯುವುದು, ಫಲಿತತೆಯ ಪ್ರಮಾಣ ಕಡಿಮೆಯಾಗಿರುವುದು ಮತ್ತು ಆರೋಗ್ಯ ಸೇವೆಗಳ ಲಭ್ಯತೆ ಹೆಚ್ಚಾಗಿರುವುದು.

ಮಹಿಳೆಯರ ವಿಚಾರದಲ್ಲಿ ಹೇಳುವುದಾದರೆ, ಅವರು ಸಂತಾನೋತ್ಪತ್ತಿಯ ವಯಸ್ಸನ್ನು ದಾಟಿದ ಮೇಲೆ ಎದುರಿಸಬಹುದಾದ ಆರೋಗ್ಯ ಅಪಾಯಗಳು ಕಡಿಮೆಯಾಗುತ್ತವೆ. ಮೇಲಾಗಿ ಮಹಿಳೆಯರ ಮೇಲಿರುವ ಅನೇಕ ಸಾಂಸ್ಕೃತಿಕ ಬಂಧನಗಳ ಕಾರಣದಿಂದಾಗಿ ಅವರ ಹೊರ ಪ್ರಪಂಚದ ಸಂಪರ್ಕಗಳು ಸೀಮಿತವಾಗಿದ್ದು, ಅವರ ಆರೋಗ್ಯಕ್ಕೆ ಅಪಾಯವನ್ನು ತರಬಲ್ಲಂಥ ಚಟಗಳಿಂದ ದೂರವಿರುವುದೂ ಒಂದು ಕಾರಣ.

ಹಿರಿಯರ ಜೀವಿತಾವಧಿ ಹೆಚ್ಚಾಗುತ್ತಾ ಹೋಗುವುದು ಸಾಮಾಜಿಕ ಪ್ರಗತಿಯ ಸೂಚಕವಾದರೂ ಅವರಲ್ಲಿ ಬಹು ಮಂದಿಗೆ ಸುರಕ್ಷಿತ ಬದುಕನ್ನು ನಡೆಸಲು ಆಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ಆರ್ಥಿಕ ಪರಾವಲಂಬನೆ, ವಯಸ್ಸಾಗುವಿಕೆಯ ಪ್ರಕ್ರಿಯೆ ತರಬಲ್ಲ ಆರೋಗ್ಯ ಸಂಬಂಧಿ ಸಮಸ್ಯೆಗಳು ಹಾಗೂ ಸ್ವತಂತ್ರ ಬದುಕನ್ನು ನಡೆಸಲು ಪೂರಕವಾದ ಬೆಂಬಲ ವ್ಯವಸ್ಥೆ ಇಲ್ಲದಿರುವುದು.

ವಯಸ್ಸಾಗುವಿಕೆಯನ್ನು, ವೃದ್ಧಾಪ್ಯವನ್ನು ವೈಭವೀಕರಿಸುವ ಈ ಸಮಾಜದಲ್ಲಿ ಹಿರಿಯರಿಗೆ ಸಲ್ಲಬೇಕಾದ ಎಲ್ಲ ಗೌರವಗಳೂ ಅವರವರ ಕುಟುಂಬಗಳಲ್ಲಿಯೇ, ವಿಶೇಷವಾಗಿ ಅವರ ಸಂತಾನದಿಂದಲೇ ಸಲ್ಲಿಕೆಯಾಗುತ್ತವೆ. ಆದ್ದರಿಂದ ಅವರ ಬದುಕಿನ ಸಂಧ್ಯಾ ಕಾಲವನ್ನು ಅಮು ನೆಮ್ಮದಿಯಿಂದ ಕಳೆಯಬಹುದು ಎಂಬ 'ಆದರ್ಶ ಮಾದರಿ'ಯೊಂದು ಬಹುಕಾಲ ಚಾಲ್ತಿಯಲ್ಲಿತ್ತು. ಕೂಡು ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಂಥ ಕಾಲಘಟ್ಟದಲ್ಲಿ ಪ್ರಾಯಶಃ ಇಂಥ ಭಾವನೆ–ಆಚರಣೆಗಳಿಗೆ ಅವಕಾಶಗಳಿದ್ದವೇನೋ, ಅಥವಾ ಈಗಲೂ ಕೆಲವೆಡೆಗಳಲ್ಲಿ ಹಿರಿಯರು ತಮ್ಮ ಕುಟುಂಬದ ಭದ್ರಕೋಟೆಗಳಲ್ಲಿ ಸುರಕ್ಷಿತ ಬದುಕನ್ನು ನಡೆಸುತ್ತಿರಬಹುದು. ಆದರೆ ಉದ್ಯೋಗಗಳ ಸ್ವರೂಪ ಬದಲಾಗುತ್ತಿರುವ ಈ ಹೊತ್ತಿನಲ್ಲಿ ಕುಟುಂಬದ ರಚನೆಯೂ ಬದಲಾಗುತ್ತಿದೆ, ಉದ್ಯೋಗ ಸಂಬಂಧಿ ನಿರೀಕ್ಷೆಗಳೂ ನಡವಳಿಕೆಗಳೂ ಬದಲಾಗುತ್ತಿವೆ. ಇಂದಿನ ತಲೆಮಾರು ಒಳಗಾಗಿರುವ ಒತ್ತಡಗಳು ಹಾಗೂ ಅವರ ಬದುಕನ್ನು ಕಾಡುತ್ತಿರುವ ಅನಿಶ್ಚಿತತೆಗಳು ಅವರಲ್ಲನೇಕರನ್ನು ತಮ್ಮ ಮನೆಯ ಹಿರಿಯರಿಂದ ದೂರ ಕರೆದೊಯ್ದಿವೆ. ಅನೇಕ ಬಾರಿ ಭೌತಿಕ ದೂರ

> “ಹಿರಿಯರ ಜೀವಿತಾವಧಿ ಹೆಚ್ಚಾಗುತ್ತಾ ಹೋಗುವುದು ಸಾಮಾಜಿಕ ಪ್ರಗತಿಯ ಸೂಚಕವಾದರೂ ಅವರಲ್ಲಿ ಬಹು ಮಂದಿಗೆ ಸುರಕ್ಷಿತ ಬದುಕನ್ನು ನಡೆಸಲು ಆಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ಆರ್ಥಿಕ ಪರಾವಲಂಬನೆ, ವಯಸ್ಸಾಗುವಿಕೆಯ ಪ್ರಕ್ರಿಯೆ ತರಬಲ್ಲ ಆರೋಗ್ಯ ಸಂಬಂಧಿ ಸಮಸ್ಯೆಗಳು ಹಾಗೂ ಸ್ವತಂತ್ರ ಬದುಕನ್ನು ನಡೆಸಲು ಪೂರಕವಾದ ಬೆಂಬಲ ವ್ಯವಸ್ಥೆ ಇಲ್ಲದಿರುವುದು.

ಸಾಮಾಜಿಕ ದೂರವಾಗಿಯೂ ಮಾರ್ಪಾಡಾಗುತ್ತದೆ. ಅದರಲ್ಲೂ ವೃತ್ತಿಯ ನಿಮಿತ್ತ ದೂರದ ದೇಶಗಳಿಗೋ ಊರುಗಳಿಗೋ ಹೋಗಬೇಕಾದಂಥ ಪರಿಸ್ಥಿತಿಗಳು, ಸೃಷ್ಟಿಯಾದಾಗ ಸಂಬಂಧಗಳು ತೀರಾ ಔಪಚಾರಿಕವಾದ ಸ್ವರೂಪವನ್ನು ಪಡೆದು ಹಿರಿಯರ ಭೌತಿಕ ಅವಶ್ಯಕತೆಗಳನ್ನು ಮಾತ್ರ ಪೂರೈಸುವಂಥ ಸ್ಥಿತಿಗೆ ಅನೇಕ ಕುಟುಂಬಗಳು ತಲುಪಿವೆ. ಭಾವನಾತ್ಮಕ ನೆಲೆಗಳು ಕಳಚಿದಾಗ ಬಹುತೇಕ ಹಿರಿಯರು ದೈಹಿಕ– ಮಾನಸಿಕ ತೊಂದರೆಗಳಿಗೆ ಒಳಗಾಗುತ್ತಾರೆ. ಇಂದು ಶೇ.70 ರಷ್ಟು ಹಿರಿಯರು ಒಂಟಿತನ ಅಥವಾ ನಿರ್ಲಕ್ಷ್ಯದಿಂದ ಆವೃತ್ತವಾದ ಬದುಕನ್ನು ನಡೆಸುತ್ತಿದ್ದಾರೆ ಎಂದು ಒಂದು ಅಧ್ಯಯನ ತಿಳಿಸಿದೆ.

ಇದು ನಮ್ಮ ಸಮಾಜದ ಅಸಮಾನತಾ ವ್ಯವಸ್ಥೆಯ ಪ್ರಹಾರಗಳನ್ನು ಅತ್ಯಂತ ಗಂಭೀರವಾಗಿ ಎದುರಿಸುತ್ತಿರುವಂಥ ಜನ ಸಮುದಾಯಗಳಲ್ಲಿ ಹಿರಿಯರ ಗುಂಪು ಎದ್ದು ಕಾಣುತ್ತದೆ. ದೇಶದ ಬಹು ಮಂದಿ ಹಿರಿಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಅವರಿಗೆ ಔಪಚಾರಿಕ ಉದ್ಯೋಗಗಳಲ್ಲಿದ್ದವರಿಗೆ ದೊರೆಯುವ ನಿವೃತ್ತಿ ವೇತನದ ಬೆಂಬಲವಿಲ್ಲ. ಪುರುಷರಿಗಿಂತ ಮಹಿಳೆಯರಿಗೆ ಇದು ಹೆಚ್ಚು ಅನ್ವಯಿಸುತ್ತದೆ. ಲಭ್ಯ ಮಾಹಿತಿ ಪ್ರಕಾರ ಈ ದೇಶದ ಶೇ.65ರಷ್ಟು ಹಿರಿಯ ನಾಗರಿಕರಿಗೆ ಯಾವುದೇ ಬೆಂಬಲ ಆದಾಯವಿಲ್ಲ. ದೈಹಿಕ ಶಕ್ತಿ ಕಡಿಮೆಯಾಗುತ್ತ ಹೋದ ಹಾಗೆ ವಯೋಸಹಜ ಸಮಸ್ಯೆಗಳೊಂದಿಗೆ ಆರೋಗ್ಯದಲ್ಲಿ ಗಂಭೀರವಾದ ಏರುಪೇರುಗಳೂ ಆಗಬಹುದು. ಆದ್ದರಿಂದ ವೈದ್ಯಕೀಯ ವೆಚ್ಚಗಳಿಗೆ ಅವರು ನಿರಂತರವಾಗಿ ಹಣ ಹೊಂದಿಸಬೇಕಾದ ಸ್ಥಿತಿಯನ್ನು ತಲುಪಿ ಅವರು ಪರಾವಲಂಬಿಗಳಾಗುತ್ತಾರೆ. ವೈದ್ಯಕೀಯ ಕ್ಷೇತ್ರ ಹೆಚ್ಚು–ಹೆಚ್ಚು ಖಾಸಗಿ ವಲಯಕ್ಕೆ ಸರಿಯುತ್ತಿರುವುದು, ಕೋವಿಡ್ ಕಾಲದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ತನ್ನ ಗಮನವನ್ನೆಲ್ಲ ಬೇರೆ ಕಡೆ ಹರಿಸಬೇಕಾಗಿದ್ದು ಹಿರಿಯರ ಆರೋಗ್ಯ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಯಿತು.

ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವ ಹಿರಿಯರಾದರೂ ಹಿರಿಯರ ಆಶ್ರಯ ತಾಣಗಳಿಗೆ ಹೋಗಬಹುದು, ಆದರೆ ಬಡವರು, ಅಸಂಘಟಿತ ಕಾರ್ಮಿಕರು, ದೈಹಿಕ–ಮಾನಸಿಕ ದೌರ್ಬಲ್ಯವನ್ನು ಎದುರಿಸುತ್ತಿರುವವರು, ಜಾತಿ ಶ್ರೇಣಿಯಲ್ಲಿ ತಳ ಸ್ತರಗಳಲ್ಲಿ ಇರುವವರು, ಭೂರಹಿತ ಕೃಷಿ ಕಾರ್ಮಿಕರು, ಆಹಾರ–ಆಶ್ರಯ–ಆರೋಗ್ಯ–ಶಿಕ್ಷಣ–ಆಸರೆ ಮುಂತಾದ ಜೀವನಾವಶ್ಯಕತೆಗಳಿಂದ ವಂಚಿಸಲ್ಪಟ್ಟವರು, ಲೈಂಗಿಕ ಅಲ್ಪಸಂಖ್ಯಾತರು– ಹೀಗೆ ಸಮಾಜದ ಅಂಚಿನಲ್ಲಿರುವ ವರ್ಗಗಳ ಹಿರಿಯರ ಪರಿಸ್ಥಿತಿಗಳೇನು?


ಜಾಗತಿಕ ದರಗಳಿಗೆ ಹೋಲಿಸಿದರೆ ಭಾರತದಲ್ಲಿ ಇಂದು ಹಿರಿಯರ ಸಂಖ್ಯೆ ಹೆಚ್ಚು ವೇಗದಲ್ಲಿ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಅವಲಂಬನೆಯ ಪ್ರಮಾಣವೂ ಹೆಚ್ಚುತ್ತಿದೆ. ದೇಶದ ಜನಸಂಖ್ಯೆಯಲ್ಲಿ ಶೇ.66ರಷ್ಟು 35 ವರ್ಷಗಳಿಗಿಂತ ಕಡಿಮೆ ವಯಸ್ಸಿನವರಾಗಿದ್ದು, ಇಡೀ ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಪ್ರಮಾಣದ ಯುವ ಜನತೆ ಇದಾಗಿದೆ. ಆದರೆ ಈ ವಯೋಗುಂಪಿನಲ್ಲಿರುವವರ ಪ್ರಮಾಣ ಕ್ರಮೇಣ ಇಳಿಮುಖವಾಗಲಿದ್ದು ಕೆಲ ರಾಜ್ಯಗಳಲ್ಲಿ 2036ರ ವೇಳೆಗೆ ಹಿರಿಯರ ಜನಸಂಖ್ಯೆ ಯುವ ಜನಸಂಖ್ಯೆಗಿಂತ ಹೆಚ್ಚಾಗಲಿದೆ. ಹಿರಿಯರ ಸಂಖ್ಯೆ ಬೆಳೆಯುತ್ತಿರುವುದು ನಮ್ಮ ಆಡಳಿತ ವ್ಯವಸ್ಥೆ ಮತ್ತು ನಾಗರಿಕ ಸಮಾಜ–ಇವುಗಳೆರಡರ ಮೇಲೂ ಜವಾಬ್ದಾರಿಗಳನ್ನು ಹೊರಿಸಿದೆ.

ಮೊದಲಿಗೆ ಹಿರಿಯರಿಗೆ ಆರ್ಥಿಕ ಸುರಕ್ಷತೆಯನ್ನು ನೀಡುವಂಥ ಒಂದು ವ್ಯವಸ್ಥೆ ಸೃಷ್ಟಿಯಾಗಬೇಕು. ಈಗಿರುವ ಪರಿಸ್ಥಿತಿಯಲ್ಲಿ ಶೇ.10ರಷ್ಟು ಹಿರಿಯ ನಾಗಕರಿಗೆ ಮಾತ್ರ ಸಮರ್ಪಕ ನಿವೃತ್ತಿ ವೇತನ ದೊರೆಯುತ್ತಿದ್ದು, 25%ಗೆ ಒಂದಿಷ್ಟು ಆರ್ಥಿಕ ನೆರವು ದೊರೆಯುತ್ತಿದ್ದರೂ ಜೀವನ ನಿರ್ವಹಣೆಗೆ ಕೂಡ ಕಷ್ಟ ಪಡಬೇಕಾದಂಥ ಸ್ಥಿತಿಯಲ್ಲಿದ್ದಾರೆ. ಇನ್ನುಳಿದ ಶೇ.65ರಷ್ಟು ಹಿರಿಯರಿಗೆ ಯಾವುದೇ ಬಗೆಯ ನಿವೃತ್ತಿ ಸೌಕರ್ಯಗಳು ದೊರೆಯುತ್ತಿಲ್ಲ. ಇನ್ನು ಯಾವುದೇ ಉದ್ಯೋಗ ರಕ್ಷಣಾ ಕಾಯಿದೆಗಳ ಪರಿಧಿಯೊಳಗೆ ಸೇರ್ಪಡೆಯಾಗದ ಅಸಂಘಟಿತ ವಲಯದಲ್ಲಿ ಜೀವನವಿಡೀ ದುಡಿಯುತ್ತಿರುವ ಹಿರಿಯರನೇಕರು ತಮ್ಮ ಕುಟುಂಬವನ್ನೇ ಅವಲಂಬಿಸಿಕೊಂಡು ಬಂದಿದ್ದು, ಅವರಿಂದ ಯಾವ ನೆರವೂ ದೊರೆಯದಂಥ ಸ್ಥಿತಿಯನ್ನು ತಲುಪಿ, ಸಾಂಸ್ಥಿಕ ಬೆಂಬಲವೂ ಇಲ್ಲದೆ ನಿರಾಶ್ರಿತರಾಗಿರುವವರಿಗೆ ಆಶ್ರಯ–ಆರೋಗ್ಯ ರಕ್ಷಣೆ, ಪೌಷ್ಟಿಕ ಆಹಾರ ಮತ್ತು ಗುಣಮಟ್ಟದ ಸಾರ್ಥಕ ಬದುಕನ್ನು ನಡೆಸುವ ಅವಕಾಶ–ಇವುಗಳನ್ನು ಒದಗಿಸಲು ಸರ್ಕಾರ ಮತ್ತು ನಾಗರಿಕ ಸಮಾಜ ಕೈ ಜೋಡಿಸಬೇಕು. ಎಲ್ಲಕ್ಕಿಂತ ಮಿಗಿಲಾಗಿ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯಿದೆ 2007ಅನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಹಿರಿಯರ ವಿರುದ್ಧ ದೌರ್ಜನ್ಯ ನಡೆಸಿ ಅವರ ಬದುಕಿಗೆ ನೆರವು ನೀಡದಂಥ ಮಕ್ಕಳು ಹಾಗೂ ಉತ್ತರಾಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಸಮಾಜಕ್ಕೆ ಸ್ಪಷ್ಟ ಸಂದೇಶ ಕಳುಹಿಸುವ ವಾತಾವರಣ ನಿರ್ಮಾಣವಾಗಬೇಕು.

# ರಾಜ್ಯದಲ್ಲಿ ಬಿಜೆಪಿಯನ್ನು ಬೇರು ಸಹಿತ ಕಿತ್ತು ಹಾಕಿದರೆ ಮಾತ್ರ ಜನರಿಗೆ ನೆಮ್ಮದಿ

- ಮಾಜಿ ಸಿಎಂ ಕುಮಾರಸ್ವಾಮಿ ಕಿಡಿನುಡಿ
- ಸಾಮರಸ್ಯ ಕಾಯ್ದುಕೊಳ್ಳದೇ ಸಾವಿನ ಸಮಾವೇಶಕ್ಕೆ ಮುಂದಾಗಿದ್ದರು
- 70 ಲಕ್ಷದಿಂದ ಕೋಟಿ ಕೊಟ್ಟು ಬರುವ ಡಿವೈಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್ ಕಾನೂನು ಸುವ್ಯವಸ್ಥೆ, ಜನರ ಕಾಪಾಡ್ತಾರಾ?

ಮೈಸೂರು,ಜು.28(ಎಸ್‌ಬಿಡಿ)–ಮೊದಲು ಕರ್ನಾಟಕದಲ್ಲಿ ಬಿಜೆಪಿಯನ್ನು ಬೇರುಸಹಿತ ಕಿತ್ತು ಹಾಕಿದರೆ ಮಾತ್ರ ಜನ ನೆಮ್ಮದಿಯಾಗಿ ಬದುಕಲು ಸಾಧ್ಯ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.



ಮೈಸೂರಿನಲ್ಲಿ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಬಿಜೆಪಿ ಮತ ಫಸಲು ರಾಜಕಾರಣ ಮಾಡುತ್ತಿದೆ. ಹಿಂದೂ ಸಮಾಜ ನಿರ್ಮಾಣ ಕಾಳಜಿಯುಳ್ಳ ಯುವಕರ ಹತ್ಯೆಯಾದಷ್ಟು ಅಧಿಕಾರ ಹಿಡಿಯುವುದು ಸುಲಭವಾಗುತ್ತದೆ ಎನ್ನುವ ಕೆಟ್ಟ ಭಾವನೆ ಇದೆ. ಉತ್ತರಪ್ರದೇಶದಲ್ಲಿ 2016ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಅಲ್ಲಿನ ಮುಜಾಫರ್‌ನಗರದಲ್ಲಾದ ಕೋಮು ಸಂಘರ್ಷಗಳ ಬಗ್ಗೆ ಸತ್ಯ ಹೊರ ಬೀಳಲೇ ಇಲ್ಲ. ಹಲವು ಚುನಾವಣೆಗಳಲ್ಲಿ ನಡೆದಿರುವ ಇಂತಹ ಘಟನೆಗಳನ್ನು ಉದಾಹರಿಸಬಹುದು. ಕಾನೂನು ಸುವ್ಯವಸ್ಥೆಯೇ ಇಲ್ಲ, ಜೀವಕ್ಕೆ ಬೆಲೆಯಿಲ್ಲ, ಯಾವ ಸಂದರ್ಭದಲ್ಲಿ ಏನಾಗುವುದೋ? ಎನ್ನುವ ವಾತಾವರಣ ನಿರ್ಮಾಣವಾಗಿದೆ. ಜನರ ಬದುಕು ಕಟ್ಟುವುದಕ್ಕಿಂತ ಸಾವಿನ ಮೇಲೆ ಅಧಿಕಾರದ ಸೌಧ ಕಟ್ಟುತ್ತಿದ್ದಾರೆ. ಜನ ಇದೆಲ್ಲವನ್ನೂ ಅರ್ಥ ಮಾಡಿಕೊಳ್ಳಬೇಕು. ಬಣ್ಣ ಬಣ್ಣದ ಜಾಹೀರಾತು ನೋಡಿಕೊಂಡು ಮುಂದುವರೆದರೆ ಈ ದೇಶಕ್ಕೆ, ರಾಜ್ಯಕ್ಕೆ ಇನ್ನೂ ಕೆಟ್ಟ ದಿನಗಳು ಬರುತ್ತವೆ. ಶಾಂತಿಯುತ ವಾತಾವರಣದಲ್ಲಿ ಜೀವನ ನಡೆಸಬೇಕು ಎನ್ನುವುದಾದರೆ ಮೊದಲು ರಾಜ್ಯದಿಂದ ಬಿಜೆಪಿಯನ್ನು ಬೇರು ಸಹಿತ ಕಿತ್ತೊಗೆಯಬೇಕು ಎಂದರು.

**ಸಾವಿನ ಸಮಾವೇಶವೇ:** ರಾಜ್ಯದಲ್ಲಿ ನಿರಂತರ ಹತ್ಯೆ ನಡೆಯುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒಂದು ವರ್ಷ ಆಡಳಿತ ಪೂರೈಸಿದಕ್ಕಾಗಿ ಸಾಧನಾ ಸಮಾವೇಶ ಹಮ್ಮಿಕೊಂಡಿದ್ದನ್ನು ನಾನು ಖಂಡಿಸಿದ್ದೆ. ಮುಖ್ಯಮಂತ್ರಿಗಳಿಗೆ ಜ್ಞಾನೋದಯ ಆಗಿದೆಯೋ? ಕಾರ್ಯಕರ್ತರ ಆಕ್ರೋಶದ ಪರಿಣಾಮವೋ? ಅಥವಾ ಇಂತಹ ಸಂದರ್ಭದಲ್ಲಿ ಸಮಾವೇಶದಲ್ಲಿ ಭಾಗಿಯಾಗಲು ಬಿಜೆಪಿ ರಾಷ್ಟ್ರೀಯ ನಾಯಕರು ನಿರಾಕರಿಸಿದ್ದಾರೋ? ಗೊತ್ತಿಲ್ಲ. ಒಟ್ಟಾರೆ ನಿನ್ನೆ ಮಧ್ಯರಾತ್ರಿ ವಿಜೃಂಭಣೆಯ ಸಮಾವೇಶವನ್ನು ರದ್ದುಮಾಡುವ ಮೂಲಕ ಸರ್ಕಾರದ ಮಾನರಕ್ಷಣೆ ಮಾಡಿಕೊಂಡಿದ್ದಾರೆ. ದಕ್ಷಿಣಕನ್ನಡದ ಪ್ರವೀಣ್ ಹತ್ಯೆಯಾಗಿದೆ, ಆದರೆ ವಯಸ್ಸಾದ ತಂದೆ–ತಾಯಿ, ಚಿಕ್ಕವಯಸ್ಸಿನ ಪತ್ನಿ ಆತನ ಕುಟುಂಬದ ಪರಿಸ್ಥಿತಿ ಏನು?. ಶಿವಮೊಗ್ಗದ ಹರ್ಷ ಕೊಲೆ ಪ್ರಕರಣದ ಆರೋಪಿಗಳಿಗೆ ಪರಪ್ಪನ ಅಗ್ರಹಾರದಲ್ಲಿ ಎಲ್ಲಾ ಸೌಲಭ್ಯ ನೀಡಿದ್ದಾರೆ. ಹಾಗಾದರೆ ಯಾವ ರೀತಿಯ ಆಡಳಿತ ನಡೆಸುತ್ತಿದ್ದೀರಿ? ನಿಮ್ಮದು ಸಾಧನೆ ಸಮಾವೇಶವೋ? ಸಾವಿನ ಸಮಾವೇಶವೋ? ಇನ್ನೂ ಎಷ್ಟು ಅಮಾಯಕರ ಬಲಿಯಾಗಬೇಕು? ಯಾವ ಸಂಘಟನೆ ಅಥವಾ ಪಕ್ಷ ಎನ್ನುವುದು ಮುಖ್ಯವಲ್ಲ. ಎಲ್ಲರೂ ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿಯಾಗಬೇಕಿದೆ ಎಂದು ಕುಮಾರಸ್ವಾಮಿ ಹೇಳಿದರು.

**ಸಾಮರಸ್ಯ ಕಾಯಬೇಕಿತ್ತು:** ಕೋಮು ವಿಚಾರ ಸೇರಿದಂತೆ ವಿವಿಧ ಕಾರಣಗಳಿಗೆ ರಾಜ್ಯದಲ್ಲಿ ನಿರಂತರ ಹತ್ಯೆ ನಡೆಯುತ್ತಿವೆ. ಶಿವಮೊಗ್ಗ, ಕರಾವಳಿಯಲ್ಲಾಯ್ತು ಮುಂದೆ ಇನ್ನೆಲ್ಲೋ? ಎನ್ನುವ ಆತಂಕ ಸೃಷ್ಟಿಯಾಗಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಾದ ಸಾವಿನ ಲೆಕ್ಕಾ ಹಾಕುವ ಜೊತೆಗೆ ಮುಖ್ಯಮಂತ್ರಿಗಳು ತಮ್ಮ ಕಾಲದಲ್ಲಿ ಎಷ್ಟು ಘಟನೆ ನಡೆದಿವೆ, ಅದಕ್ಕೆ ಕಾರಣವೇನು? ಎಂಬುದನ್ನು ತಿಳಿಯುವ ಪ್ರಯತ್ನ ಮಾಡಬೇಕಿತ್ತು. ಆದರೆ ಸಂಘರ್ಷ ಸೃಷ್ಟಿ ಮಾಡಿ 7–8 ತಿಂಗಳಿಂದ ಮೌನಕ್ಕೆ ಶರಣಾಗಿದ್ದಾರೆ. ಎಲ್ಲಾ ಧರ್ಮಗುರುಗಳ ಸಭೆ ಆಯೋಜಿಸಿ, ಅವರೊಂದಿಗೆ ಚರ್ಚೆ ನಡೆಸಿ. ಧರ್ಮಗಳನ್ನು ಯಾವ ರೀತಿ ರಕ್ಷಣೆ ಮಾಡಬೇಕೆಂದು ಅವರಿಂದಲೇ ಮಾಹಿತಿ ಪಡೆದುಕೊಂಡು ರಾಜ್ಯದಲ್ಲಿ ಸಾಮರಸ್ಯ ಸೃಷ್ಟಿಸುವ ಕೆಲಸ ಮಾಡುವಂತೆ ಕೆಲ ತಿಂಗಳ ಹಿಂದೆಯೇ ಹೇಳಿದ್ದೆ. ಆದರೆ ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ತಿಳಿಸಿದರು.

**ಕೃತಕ ಸಾಂತ್ವನ:** ಬಿಜೆಪಿಯವರದ್ದು ಕೃತಕ ಸಾಂತ್ವನ. ಹತ್ಯೆಯಾದ ಸಂದರ್ಭದಲ್ಲಿ ಆಕ್ರೋಶದ ಮಾತುಗಳನ್ನಾಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳುತ್ತಾರೆ. ಆದರೆ ಅಂತಹ ಘಟನೆಗಳನ್ನು ತಡೆಯುವ ನಿಟ್ಟಿನಲ್ಲಿ ಆಡಳಿತದಲ್ಲಿ ಏನಾದರೂ ಬದಲಾವಣೆ ಆಗಿದೆಯೇ?. ನಾನು 2 ಬಾರಿ ಸಿಎಂ ಆಗಿದ್ದೆ. ಕಳೆದ ಬಾರಿ 14 ತಿಂಗಳು ಸಿಎಂ ಆಗಿದ್ದಾಗ ಯಾವುದೇ ಸಾವು–ನೋವಾಗಲಿಲ್ಲ. ಆದರೆ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಶುರುವಾಗಿದ್ದೇಕೆ?. ಸರ್ಕಾರದ ತೆವಲು, ಅಧಿಕಾರ ಹಿಡಿಯುವ ಸಲುವಾಗಿ ಇಂತಹ ಪರಿಸ್ಥಿತಿ ಹುಟ್ಟುಹಾಕಿದ್ದಾರೆ. ಪ್ರತಿಯೊಬ್ಬರಿಗೂ ಗನ್‌ಮ್ಯಾನ್ ನೀಡಲು ಸಾಧ್ಯವೇ? ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಪ್ರಶ್ನಿಸುತ್ತಾರೆ. ಆದರೆ ಯಾರೂ ಗನ್‌ಮ್ಯಾನ್ ಕೇಳಿಲ್ಲ. ಜನ ಜೀವಕ್ಕೆ ಅಪಾಯವಿಲ್ಲದೆ ಶಾಂತಿಯುತವಾಗಿ ಬದುಕುವಂತೆ ಆಡಳಿತ ನಡೆಸಿ ಎಂದು ಕೇಳಿದ್ದಾರೆ. ತೇಜಸ್ವಿ ಸೂರ್ಯ ರಾಜ್ಯಕ್ಕೆ, ಬೆಂಗಳೂರು ನಗರಕ್ಕೆ ಏನು ಕೊಡುಗೆ ಕೊಟ್ಟಿದ್ದಾರೋ ನನಗಂತೂ ಗೊತ್ತಿಲ್ಲ. ಅಂತಹವರನ್ನೆಲ್ಲಾ ಮತ ನೀಡಿ ಆಯ್ಕೆ ಮಾಡಿದ್ದಕ್ಕೆ ಜನ ಈ ರೀತಿಯ ಹೇಳಿಕೆ ಸಹಿಸಿಕೊಳ್ಳುವ ದುಸ್ಥಿತಿ ಎದುರಾಗಿದೆ ಎಂದು ಕಿಡಿಕಾರಿದರು.


**ಭ್ರಷ್ಟತೆಯಿಂದ ವಿಶ್ವಾಸ ಹಾಳು:** ಈ ಸರ್ಕಾರದಲ್ಲಿ 70 ಲಕ್ಷ, ಒಂದು ಕೋಟಿ ಹಣ ನೀಡಿ ಓರ್ವ ಸರ್ಕಲ್ ಇನ್ಸ್‌ಪೆಕ್ಟರ್, ಡಿವೈಎಸ್ಪಿ ಸ್ಥಳ ನಿಯುಕ್ತಿ ಮಾಡಿಸಿಕೊಳ್ಳುತ್ತಾರೆ ಎಂದ ಮೇಲೆ ಬಿಗಿಯಾದ ಆಡಳಿತ ನಿರೀಕ್ಷಿಸಲು ಸಾಧ್ಯವೇ?. ಈ ಬಗ್ಗೆ 3ನೇ ಮಹಡಿಯಲ್ಲಿ ಕುಳಿತಿರುವವರು ಉತ್ತರಿಸಬೇಕು. ನಾನು ಮುಖ್ಯಮಂತ್ರಿಯಾಗಿದ್ದಾಗ ಬಿಡಿಎ ಕಮಿಷ್ನರ್ ಹುದ್ದೆಗೆ ನಿಯೋಜಿಸಲು 15 ಕೋಟಿ ರೂ. ಆಫರ್ ಇಟ್ಟಿದ್ದ. ನಾನಾಗ ಇಷ್ಟು ಹಣ ನೀಡುವವನು ಬಿಡಿಎ ಉಳಿಸುತ್ತೀಯಾ? ಎಂದು ಉಗಿದು ಕಳುಹಿಸಿದ್ದೆ. ಕಾರ್ಯಕರ್ತನ ಮೂಲಕ ಓರ್ವ ತಹಸೀಲ್ದಾರ್ ಒಂದೂವರೆ ಕೋಟಿ ಆಫರ್ ಇಟ್ಟಿದ್ದ. ನಾನು ಸರಿಯಾಗಿ ಬುದ್ಧಿ ಹೇಳಿದ್ದೆ. ಆದರೆ ಮುಂದೆ ಯಡಿಯೂರಪ್ಪನವರು ಸಿಎಂ ಆದಾಗ ಆತ ಅದೇ ಸ್ಥಳಕ್ಕೆ ನಿಯುಕ್ತಿಯಾದ. ಹೀಗೆ ಸಾರ್ವಜನಿಕವಾಗಿ ವಿಶ್ವಾಸ ಕಳೆದುಕೊಂಡಿದ್ದಾರೆ. ಇದನ್ನೆಲ್ಲಾ ಜನ ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್‌ನವರು ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಬಿಜೆಪಿಗೆ ಪೋಷಕರೂ ನೀವೆ. 5 ವರ್ಷ ನಿಮ್ಮ ಸರ್ಕಾರದ ಬಂಡವಾಳ ಬೇಕಾದಷ್ಟು ಇದೆ. ಯಾವ ನೈತಿಕತೆಯಿಂದ ಮಾತನಾಡುತ್ತೀರಿ ಎಂದು ಕಾಂಗ್ರೆಸ್ ವಿರುದ್ಧವೂ ಹರಿಹಾಯ್ದರು.

### ಮೈಸೂರಿಂದಲೇ ಪಂಚರತ್ನ ಯಾತ್ರೆ

**ಶಾಸಕ ಜಿ.ಟಿ.ದೇವೇಗೌಡರು ಜೆಡಿಎಸ್‌ನಲ್ಲೇ ಇದ್ದಾರೆ...!**

ಮೈಸೂರು: ತಾಯಿ ಚಾಮುಂಡೇಶ್ವರಿ ಆಶೀರ್ವಾದದೊಂದಿಗೆ ಮೈಸೂರಿಂದಲೇ ಜೆಡಿಎಸ್‌ನ 'ಪಂಚರತ್ನ ರಥಯಾತ್ರೆ' ಆರಂಭಿಸಲಾಗುವುದು ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಮೈಸೂರಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಜೆಡಿಎಸ್‌ನ ಪಂಚರತ್ನ ಕಾರ್ಯಕ್ರಮಗಳನ್ನು ಜನರ ಮುಂದಿಟ್ಟು, ರಾಜ್ಯದ ಆಡಳಿತ ವ್ಯವಸ್ಥೆ ಸರಿಪಡಿಸಲು ಅವಕಾಶ ನೀಡುವಂತೆ ಮನವಿ ಮಾಡಲು ತೀರ್ಮಾನಿಸಲಾಗಿದೆ. ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ 'ಕುಮಾರಪರ್ವ' ಆರಂಭಿಸಿದ ರೀತಿಯೇ ಮುಂದಿನ ಚುನಾವಣೆ ಪ್ರಚಾರವೂ ಮೈಸೂರಿನಿಂದಲೇ ಶುರುವಾಗಲಿದೆ. ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ, ಪಂಚರತ್ನ ರಥಯಾತ್ರೆ ಆರಂಭಿಸುತ್ತೇವೆ. 100 ದಿನ 100 ಹಳ್ಳಿಗಳಲ್ಲಿ ಗ್ರಾಮ ವಾಸ್ತವ್ಯ, 100 ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿದಿನ 14–15 ಸಭೆಯಲ್ಲಿ ಮಾತನಾಡುತ್ತೇವೆ ಎಂದರು.




**ಜಿಟಿಡಿ ಜೆಡಿಎಸ್‌ನಲ್ಲೇ ಇದ್ದಾರೆ:** ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ರಾಜಕೀಯ ನಡೆ ಬಗ್ಗೆ ಪ್ರತಿಕ್ರಿಯಿಸಿ, ನಾನು ಜೆಡಿಎಸ್‌ನಲ್ಲೇ ಇದ್ದೇನೆ ಎಂದು ಜಿಟಿಡಿ ಬಹಳಷ್ಟು ಸಾರಿ ಹೇಳಿದ್ದಾರೆ. ಅವರು ಆಗಲೇ ಮಾನಸಿಕವಾಗಿ ತೀರ್ಮಾನ ಮಾಡಿಕೊಂಡಿದ್ದಾರೆ. ಅದನ್ನು ಪ್ರಕಟಿಸಲು ಉತ್ತಮ ಸಮಯಕ್ಕಾಗಿ ಕಾದಿದ್ದಾರೆ ಅಷ್ಟೇ. ನಾನೂ ಅವರೊಂದಿಗೆ 2–3 ಬಾರಿ ಮಾತನಾಡಿದ್ದೇನೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

# ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ






## ಭರ್ಜರಿ ಓಪನಿಂಗ್

ವಿಶ್ವವ್ಯಾಪಿ ತೀವ್ರ ಕುತೂಹಲ ಹುಟ್ಟಿಸಿದ್ದ ಬಹು ನಿರೀಕ್ಷಿತ ಚಿತ್ರ 'ವಿಕ್ರಾಂತ್ ರೋಣ' ನಿನ್ನೆ ವಿಶ್ವಾದ್ಯಂತ 3500ಕ್ಕೂ ಹೆಚ್ಚು ಥಿಯೇಟರುಗಳಲ್ಲಿ ಅದ್ದೂರಿ ಬಿಡುಗಡೆ ಕಂಡಿದೆ. ಅಲ್ಲದೆ ಕರ್ನಾಟಕದಲ್ಲೇ 450 ಚಿತ್ರಮಂದಿರಗಳಲ್ಲಿ ರಿಲೀಸಾಗಿದೆ. ಬಹಳ ದಿನಗಳ ನಂತರ 3ಡಿ ವರ್ಷನ್ ಅನುಭವ ಜನರಿಗೆ ಇಷ್ಟವಾಗಿದೆ. ಇದೊಂದು ರಿವೆಂಜ್ ಕಥೆಯಾದರೂ ತಂದೆ ಮಗಳ ನಡುವಿನ ಸಂಬಂಧವನ್ನು ಭಾವನಾತ್ಮಕವಾಗಿ ಹೇಳಿರುವ ಹೊಸ ಪ್ರಯತ್ನ ಎಲ್ಲರಿಗೂ ಇಷ್ಟವಾಗುತ್ತದೆ.

ಬೆಂಗಳೂರಿನಲ್ಲಿ ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ 3 ದಿನಗಳ ಹಿಂದೆ ಅದ್ದೂರಿಯಾಗಿ ನೆರವೇರಿತು. ಬೆಳಿಗ್ಗೆಯಷ್ಟೇ ಮುಂಬೈನಲ್ಲಿ ಬಾಲಿವುಡ್ ಸೂಪರ್ ಸ್ಟಾರ್ ಸಲ್ಮಾನ್ ಖಾನ್, ಜಾಕ್ವೆಲಿನ್ ಫರ್ನಾಂಡೀಸ್ ಮೊದಲಾದವರ ಜೊತೆ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಸುದೀಪ್ ಸಂಜೆ ಬೆಂಗಳೂರಿನಲ್ಲಿ ಅಷ್ಟೇ ಉತ್ಸಾಹದಿಂದ ತೊಡಗಿಕೊಂಡರು. ಆಂಧ್ರಪ್ರದೇಶ, ತಮಿಳುನಾಡಿನಲ್ಲೂ ನಡೆದ ಕಾರ್ಯಕ್ರಮಕ್ಕೆ ನಾಗಾರ್ಜುನ, ವಿಶಾಲ್ ಸೇರಿದಂತೆ ಅಲ್ಲಿನ ಸೂಪರ್‌ಸ್ಟಾರ್‌ಗಳು ಆಗಮಿಸಿ ಸುದೀಪ್‌ಗೆ ಸಾಥ್ ನೀಡಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದವರು ರಿಯಲ್ ಸ್ಟಾರ್ ಉಪೇಂದ್ರ ಅವರು ಚಿತ್ರತಂಡದ ಜೊತೆಗೆ ಮಗುವಿನಂತೆಯೇ ಬೆರೆತರು. ಯಾವುದೇ ಚಿತ್ರವಿರಲಿ.. ಈ ಥರಾ ಒಂದು ದೊಡ್ಡ ಸೌಂಡ್ ಇದ್ದರೆ ಅದು ಗೆಲುವಿನ ಪತಾಕೆಯಾಗಿರುತ್ತದೆ ಎಂದರು. ಮೊದಲಿಗೆ ಶಾಸಕ ಉದಯ ಗರುಡಾಚಾರ್ ಆಗಮಿಸಿ ಚಿತ್ರಕ್ಕೆ ಶುಭ ಕೋರಿದರು. ಬಳಿಕ ಚಿತ್ರದ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್, ಕಲಾ ನಿರ್ದೇಶಕ ಶಿವಕುಮಾರ್, ನಟ ನಿರೂಪ್ ಭಂಡಾರಿ, ನಿರ್ದೇಶಕ ಅನೂಪ್ ಭಂಡಾರಿ ಮಾತನಾಡಿದರು. ನೃತ್ಯ ನಿರ್ದೇಶಕ ಜಾನಿ ಮಾಸ್ಟರ್ ಎಲ್ಲರಿಂದ ನೃತ್ಯಕ್ಕೆ ಹೆಜ್ಜೆ ಹಾಕಿಸಿದರು. 'ರಾ ರಾ ರಕ್ಕಮ್ಮ..' ಹಾಡು ಸಾಕಷ್ಟು ಬಾರಿ ಬಂದು ಹೋಯಿತು. ವೇದಿಕೆಯಲ್ಲಿ ಕಿಚ್ಚ ಸುದೀಪ್ ಹಾಗೂ ಉಪೇಂದ್ರ ಪರಸ್ಪರ ಮೆಚ್ಚಿ ಮಾತನಾಡಿದರು. ನಿರ್ದೇಶನದಲ್ಲಿ ದಾಖಲೆ ಮಾಡಿದವರು; ಎಲ್ಲಾ ಟ್ರೆಂಡ್ ಹುಟ್ಟು ಹಾಕಿದವರು ಉಪೇಂದ್ರ ಎಂದು ಸುದೀಪ್ ಹೊಗಳಿದರೆ; ನೀವು ಆರು ಕಾಲಡಿ ಇದ್ದು ಹೀರೋ ಆಗಿ ನಿರ್ದೇಶನ ಬೇಡ ಎಂದು ತಾವು ಹೇಳಿದ್ದಾಗಿ ಉಪೇಂದ್ರ ನೆನಪಿಸಿಕೊಂಡರು.

ನಿರೂಪಕಿ ಅನುಶ್ರೀ ಉಪ್ಪಿ ದಾಟಿಯ ಡ್ಯಾನ್ಸ್ ಮಾಡಿಸಿದ್ದೂ ವಿಶೇಷವಾಗಿತ್ತು. ನಿರ್ಮಾಪಕ ಜಾಕ್ ಮಂಜು ಮತ್ತು ಅವರ ಕಾರ್ಯ ವೈಖರಿಯನ್ನು ಸುದೀಪ್ ಹೊಗಳಿದರು. ಮುಂದೆ ಕುಳಿತಿದ್ದ ಮಗಳಿಗಾಗಿ ಒಂದು ಹಾಡನ್ನೂ ಹಾಡಿದರು. ಅಲ್ಲದೆ ಗಡಂಗ್ ರಕ್ಕಮ್ಮ ಹಾಡಿಗೆ ಪುಟ್ಟ ಬಾಲಕಿಯೊಬ್ಬಳು ಹೆಜ್ಜೆ ಹಾಕಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು.



## ಲಂಕಾಸುರನ ಟೈಟಲ್ ಸಾಂಗ್



ಮರಿಟೈಗರ್ ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸುವುದರೊಂದಿಗೆ, ನಿರ್ಮಾಣವನ್ನು ಮಾಡುತ್ತಿರುವ ಚಿತ್ರ "ಲಂಕಾಸುರ". ಇದು ಟೈಗರ್ ಟಾಕೀಸ್ ಸಂಸ್ಥೆಯ ಮೊದಲ ಚಿತ್ರವೂ ಹೌದು. ಅವರ ಪತ್ನಿ ನಿಶಾ ವಿನೋದ್‌ಪ್ರಭಾಕರ್ ಈ ಚಿತ್ರದ ನಿರ್ಮಾಪಕರು. ಪ್ರಮೋದ್‌ಕುಮಾರ್ ಅವರ ಕಥೆ-ಚಿತ್ರಕಥೆ ಹಾಗೂ ನಿರ್ದೇಶನವಿರುವ ಈ ಚಿತ್ರವು ಹಲವಾರು ವಿಶೇಷತೆಗಳನ್ನು ಒಳಗೊಂಡಿದೆ. ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ ಚಿತ್ರದ ಟೈಟಲ್‌ಸಾಂಗ್ ಈಗ ಎಲ್ಲಾ ಕಡೆ ವೈರಲ್ ಆಗಿದೆ.

**"ಅಣ್ಣ ಗನ್‌ಹಿಡ್ದು ನಿಂತ ಅಂದ್ರೆ ಭಸ್ಮಾಸುರ. ಲಾಂಗ್ ಹಿಡ್ದು, ನಡ್ಕೊಂಡು ಬಂದ್ರೆ ಲಂಕಾಸುರ. ಲಂಕಾಸುರ.. ಲಂಕಾಸುರ..** ಎನ್ನುವ ಸಾಹಿತ್ಯವಿರುವ ಈ ಹಾಡು ಟೈಟಲ್ ಟ್ರ್ಯಾಕ್ ಎ2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದ್ದು, ಅತೀ ಹೆಚ್ಚು ವೀಕ್ಷಣೆಯಾಗಿದೆ. ಭರ್ಜರಿ ಚೇತನ್ ಕುಮಾರ್ ಅವರು ಬರೆದಿರುವ ಈ ಹಾಡನ್ನು ವಿಜೇತ್‌ಕೃಷ್ಣ ಹಾಡಿದ್ದಾರೆ. ಮೋಹನ್‌ಕುಮಾರ್ ಅವರ ನೃತ್ಯ ನಿರ್ದೇಶನವಿರುವ ಈ ಹಾಡಿನಲ್ಲಿ ನಾಯಕ ವಿನೋದ್ ಪ್ರಭಾಕರ್ ಅಭಿನಯಿಸಿದ್ದಾರೆ. ಹೆಚ್.ಎಂ.ಟಿ, ಟೊರಿನೊ ಫ್ಯಾಕ್ಟರಿ ಹಾಗೂ ಮಲ್ಲೇಶ್ವರಂ ದೋಬಿಘಾಟ್‌ನಲ್ಲಿ ನಿರ್ಮಿಸಲಾಗಿದ್ದ ಆರು ಅದ್ದೂರಿ ಸೆಟ್‌ಗಳಲ್ಲಿ ಇದರ ಚಿತ್ರೀಕರಣ ನಡೆಸಲಾಗಿದೆ. ವಿಶೇಷವಾಗಿ ವಿನೋದ್ ಪ್ರಭಾಕರ್ ಹಾಗೂ ಲೂಸ್‌ಮಾದ ಯೋಗಿ ಮೊದಲ ಬಾರಿಗೆ ಒಟ್ಟಾಗಿ ನಟಿಸಿರುವ ಈ ಚಿತ್ರದ ನಾಯಕಿಯಾಗಿ ಪಾರ್ವತಿ ಅರುಣ್ ಅಭಿನಯಿಸಿದ್ದಾರೆ. ಹಿರಿಯ ನಟರಾದ ದೇವರಾಜ್ ನಾಯಕನ ತಂದೆಯಾಗಿ ಕಾಣಿಸಿಕೊಂಡಿದ್ದು, ಖಳನಾಯಕನಾಗಿ ರವಿಶಂಕರ್ ನಟಿಸಿದ್ದಾರೆ. ಮೈನವಿರೇಳಿಸುವ ಐದು ಸಾಹಸ ಸನ್ನಿವೇಶಗಳನ್ನು ಡಿಫರೆಂಟ್ ಡ್ಯಾನಿ, ವಿನೋದ್, ಚೇತನ್ ಡಿಸೋಜ, ಅರ್ಜುನ್‌ರಾಜ್, ಕುಂಗ್ಫೂ ಚಂದ್ರು ಕಂಪೋಜ್ ಮಾಡಿದ್ದಾರೆ.

## ಅಯುಕ್ತ ಟೀಸರ್ ಬಿಡುಗಡೆ




ಕನಸು ರಮೇಶ್ ಅವರ ನಿರ್ದೇಶನದಲ್ಲಿ ಮೂಡಿ ಬಂದಿರುವ ಚಿತ್ರ 'ಅಯುಕ್ತ'. ಬಿಡುಗಡೆಗೆ ಸಿದ್ದವಾಗುತ್ತಿರುವ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್ ಟೀಸರ್ ರಿಲೀಸ್ ಮಾಡಿದರು. ಲಹರಿ ವೇಲು ಮಾತನಾಡಿ ಈ ಚಿತ್ರದ ಟೀಸರ್ ನೋಡಿದಾಗ ಇದು ಖಂಡಿತ ಹೊಸ ಬರ ಸಿನಿಮಾ ಅನಿಸುವುದಿಲ್ಲ, ತುಂಬಾ ಚೆನ್ನಾಗಿ ಮಾಡಿದ್ದಾರೆ ಎಂದು ಮೆಚ್ಚಿಕೊಂಡರು.

ಕನಸು ರಮೇಶ್ ಕಥೆ-ಚಿತ್ರಕಥೆ ಬರೆದು, ನಿರ್ದೇಶನವನ್ನೂ ಮಾಡಿರುವ ಈ ಚಿತ್ರವನ್ನು ವಿಶ್ವಾಸ್ ಆರ್. ಗಂಗಡ್ಕರ್ ಅವರು ನಿರ್ಮಾಣ ಮಾಡಿದ್ದಾರೆ. ನಿರ್ದೇಶಕ ರಮೇಶ್ ಮಾತನಾಡುತ್ತ ಈ ಹಿಂದೆ ಸುಮಾರು 250ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದೇನೆ, ಇದೇ ಮೊದಲ ಬಾರಿಗೆ ಸಿನಿಮಾ ನಿರ್ದೇಶನಕ್ಕೆ ಕೈ ಹಾಕಿದ್ದು, ನಾಟಕದ ಅನುಭವ ಇಲ್ಲಿ ನನಗೆ ಸಹಕಾರಿಯಾಯಿತು. ಹಣ ಸಂಪಾದನೆಗೋಸ್ಕರ ಪದವಿ ಓದಬೇಡಿ. ತಿಳುವಳಿಕೆ, ಜ್ಞಾನಾರ್ಜನೆಗೋಸ್ಕರ ವಿದ್ಯೆ ಕಲಿಯಬೇಕು, ತಮ್ಮ ಮಕ್ಕಳಿಗೆ ಪೋಷಕರು ನೀನು ಇದನ್ನೇ ಓದಬೇಕೆಂದು ಒತ್ತಡ ಹಾಕದೆ, ಮಕ್ಕಳು ಇಷ್ಟಪಡುವಂಥ ವಿಷಯದತ್ತ ಅವರನ್ನು ಪ್ರೇರೇಪಿಸಬೇಕು. ಅವರಿಗೆ ಸ್ವಾತಂತ್ರ ನೀಡಬೇಕು. ಅದನ್ನು ಮಾಡದೆ ತಮ್ಮಿಷ್ಟದಂತೆ ಬಾಳಲು ಅವರನ್ನು ಬಲವಂತ ಮಾಡಿದಾಗ, ಆ ಮಕ್ಕಳು ಯಾವ ರೀತಿ ದಾರಿ ತಪ್ಪುತ್ತಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ. ಅಂಥ ಮಕ್ಕಳು ಕೊನೆಗೆ ಏನಾಗುತ್ತಾರೆ ಎಂಬುದನ್ನು ಸಸ್ಪೆನ್ಸ್, ಥ್ರಿಲ್ಲರ್ ಕಥೆಯೊಂದಿಗೆ ಹೇಳಿದ್ದೇನೆ, ಈ ಚಿತ್ರದಲ್ಲಿ ಸಾಕಷ್ಟು ಟ್ವಿಸ್ಟ್ ಅಂಡ್ ಟರ್ನ್ಸ್ ಇದ್ದು, ಒಂದೊಂದು ತಿರುವಿಗೂ ಒಂದು ಕಥೆ ಇದೆ ಮಂಡ್ಯ ಕಿರುಗಾವಲು. ಮಳವಳ್ಳಿ, ಬೆಳಕವಾಡಿ ಮುಂತಾದ ಲೊಕೇಶನ್‌ಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ ಎಂದು ಹೇಳಿದರು.

ಯುಸುಪಿಯಾನ್, ಅದ್ದೂರಿ ಬಸವ, ರಮೇಶ್, ಜಾನ್ಸನ್, ರುತ್ವಿಕಾ, ಸೌಂದರ್ಯಗೌಡ, ಚನ್ನಬಸಪ್ಪ ಮುಂತಾದವರು ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಬಾಲಾಜಿ ಕ್ರಿಯೇಷನ್ಸ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ವಿಲಿಯಂದ್ರುತ್ ಅವರ ಸಂಗೀತ ಸಂಯೋಜನೆ, ಅರಸೀಕೆರೆ ದೀಪು ಛಾಯಾಗ್ರಹಣ, ನಿಶಿತ್ ಪೂಜಾರಿ ಸಂಕಲನವಿದೆ.

## ಸಿನಿಪದಬಂಧ-018

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________________

ವಿಳಾಸ ____________________

____________________

ದೂರವಾಣಿ ಸಂಖ್ಯೆ ____________________

**ಎಡದಿಂದ ಬಲಕ್ಕೆ**

1. ಗುರುಪ್ರಸಾದ್ ನಿರ್ದೇಶನ ಜಗ್ಗೇಶ್ ಅಭಿನಯದ ಚಿತ್ರ (5)
4. ಟೈಗರ್ ಪ್ರಭಾಕರ್-ವಿನಯಾ ಪ್ರಸಾದ್ ನಟಿಸಿದ 1993ರ ಚಿತ್ರ (5)
7. -- ನಾನೇ, ಉಪೇಂದ್ರ-ಸಾಕ್ಷಿ ಶಿವಾನಂದ್ ಜೋಡಿಯ ಚಿತ್ರ (2)
8. ಜೀತ ಪದ್ಧತಿಯ ಕುರಿತಾದ ಕುಂ. ವೀರಭದ್ರಪ್ಪ ಕಥೆ ಆಧಾರಿತ ಚಿತ್ರ (2)
9. 2011ರ ಯಶ್ ಚಿತ್ರ (4)
11. 1983ರ ಶಂಕರನಾಗ್-ಮಾಧವಿ ಅಭಿನಯದ ಚಿತ್ರ (4)
12. ಮೂಗನ ಪಾತ್ರದಲ್ಲಿ ಜಗ್ಗೇಶ್, 1994ರ ಚಿತ್ರ (3)
13. ಪುನೀತ್ ರಾಜಕುಮಾರ್-ಕಿಟ್ಟಿ- ಲೂಸ್ ಮಾದ ಅಭಿನಯದ ಚಿತ್ರ (4)
14. ಶಂಕರನಾಗ್-ಮಂಜುಳಾ ಅಭಿನಯದ 1979ರ ಚಿತ್ರ (4)
18. --ಕನ್ಯೆ, ಡಾ॥ ರಾಜಕುಮಾರ್ ಅಭಿನಯದ 1977ರ ಚಿತ್ರ (2)
19. --ಗೀತೆ, ಶ್ರೀನಾಥ್-ಸರಿತಾ-ಶ್ರೀಧರ್ ಅಭಿನಯದ 1986ರ ಚಿತ್ರ (2)
22. ವಿಜಯಕುಮಾರ್-ತ್ರಿವೇಣಿ ಅಭಿನಯದ 1991ರ ಚಿತ್ರ (5)
23. ಗೀತಪ್ರಿಯ ನಿರ್ದೇಶನದಲ್ಲಿ ಅಶೋಕ್ ಅಭಿನಯದ 1981ರ ಚಿತ್ರ (5)

**ಮೇಲಿನಿಂದ ಕೆಳಕ್ಕೆ**

1. ಆರತಿ ಅಭಿನಯದಲ್ಲಿ 1981ರಲ್ಲಿ ಮತ್ತು ಅದಿತಿ ಪ್ರಭುದೇವರ 2019ರ ಚಿತ್ರ (5)
2. -- ಮುನಿದರೆ ಮಾರಿ, ಕಲ್ಪನಾ ನಟಿಸಿದ 1972ರ ಚಿತ್ರ (2)
3. ವಿಷ್ಣು-ದ್ವಾರಕೀಶ್ ಜೋಡಿಯ 1975ರ ಚಿತ್ರ (4)
4. ಮಹಾಲಕ್ಷ್ಮಿ-ತಾರಾ ಅಭಿನಯದ 1987ರ ಚಿತ್ರ (4)
5. -- ಭರ್ಜರಿ ಬೇಟೆ, ಅಂಬರೀಶ್-ಜಯಮಾಲಾ-ಶಂಕರನಾಗ್ ಚಿತ್ರ (2)
6. ಜಗ್ಗೇಶ್ ಅಭಿನಯದಲ್ಲಿ ಉಪೇಂದ್ರ ನಿರ್ದೇಶಕನಾಗಿ ಮೊದಲ ಚಿತ್ರ (5)
10. ವಿಷ್ಣುವರ್ಧನರ ಪತ್ನಿ ಖ್ಯಾತ ನಟಿ (3)
13. ರಾಧಿಕಾ ಕುಮಾರಸ್ವಾಮಿ ಅವರ 2003ರ ಚಿತ್ರ (5)
15. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ವಿಷ್ಣು-ಸುಹಾಸಿನಿ ಚಿತ್ರ (5)
16.---- ಸವಾಲ್, ರಾಜಕುಮಾರ್-ಮಂಜುಳಾ ಚಿತ್ರ (4)
17. ಓಂ ಚಿತ್ರದಲ್ಲಿ ಮನೊ ಹಾಡಿದ ಹಾಡು (4)
20. ರಾಮ ಶಾಮ -- (2)
21 ಶ್ರಾವಣ --, ತಲೆಕೆಳಗಾಗಿದೆ (2)



### ಸಿನಿ ಪದಬಂಧ 017ರ ಸರಿ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಕಾ | ಕ | ನ | ಕೋ | ಟೆ | | ಭ | ಲೇ | ಹು | ಡು | ಗ |
| ಲೇ | | ಳಿ | | | | | | ಲಿ | | ರು |
| ಜು | | ಬಾ | ಲಾ | ಜೀ | | ಮ | ರಿ | ಯಾ | | ಡ |
| ರಂ | | | | ರ್ಜಿಂ | | ಲ್ಲಿ | | | | ರೇ |
| ಗ | | | | ಬೆ | ಸು | ಗೆ | | | | ಖೆ |
| | | | | | ಬ್ಬ | | | | | |
| ತಾ | | | | ಚಿ | ಕ್ಕ | ಮ್ಮ | | | | ಯು |
| ಯಿ | | | | ತ್ತಾ | | ರ | | | | ಗ |
| ಸಾ | | ಸಿ | ತಾ | ರ | | ಗೌ | ತ | ಮಿ | | ಪು |
| ಹೇ | | ಕ್ಸ | | | | | | ಥು | | ರು |
| ಬ | ಜಾ | ರ್ | ಭೀ | ಮ | | ಹಾ | ವಿ | ನ | ದ್ವೇ | ಷ |

**ವಿಜೇತರು:** ಶಿವಮೂರ್ತಿ.ಪಿ
ನಂ.13/1, ಐಶ್ವರ್ಯ ನಿಲಯ, ಎನ್ ಬ್ಲಾಕ್,
ಕುಂಬಾರಕೊಪ್ಪಲು, ಮೈಸೂರು ಜಿಲ್ಲೆ

## ಪಂಚ ಭಾಷೆಗಳಲ್ಲಿ ಲೆಜೆಂಡ್




ಯುವಪ್ರತಿಭೆ ಅರುಲ್ ಸರವಣನ್ ಅವರು ಲೆಜೆಂಡ್ ಎಂಬ ಚಿತ್ರದ ಮೂಲಕ ಬಣ್ಣದ ಲೋಕದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಇದೇ ತಿಂಗಳ 28ರಂದು ದೇಶಾದ್ಯಂತ ಬಿಡುಗಡೆಯಾಗುತ್ತಿರುವ ಈ ಚಿತ್ರದ ಬಿಡುಗಡೆಪೂರ್ವ ಪತ್ರಿಕಾಗೋಷ್ಠಿ ಬೆಂಗಳೂರಿನಲ್ಲಿ ನಡೆಯಿತು. ವರ್ಲ್ಡ್ ವೈಡ್ ಅದ್ದೂರಿಯಾಗಿ ಪ್ರಚಾರ ನಡೆಸಿರುವ ಸರವಣನ್ ಮತ್ತವರ ತಂಡ ಮಾಧ್ಯಮದ ಜೊತೆ ಮಾತನಾಡುತ್ತ ಚಿತ್ರದ ಬಗ್ಗೆ ಕೆಲವಾರು ಮಾಹಿತಿಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಚಿತ್ರದ ನಾಯಕ ಸರವಣನ್, ನಾಯಕಿಯರಾದ ಊರ್ವಶಿ ರೌಟೇಲ ಹಾಗೂ ಲಕ್ಷ್ಮೀರೈ ಹಾಜರಿದ್ದು ತಮ್ಮ ಪಾತ್ರಗಳ ಕುರಿತಂತೆ ಹೇಳಿಕೊಂಡರು.

ನಟ ಸರವಣನ್ ಮಾತನಾಡಿ, ಸಿನಿಮಾ ಮಾಡಬೇಕೆಂಬ ಕನಸು ನನಗೆ ಚಿಕ್ಕ ವಯಸ್ಸಿನಿಂದಲೂ ಇತ್ತು. ನಿರ್ಮಾಣಕ್ಕೆ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಂಡು ಲೆಜೆಂಡ್ ಚಿತ್ರವನ್ನು ನೂರಾರು ಕೋಟಿ ಬಜೆಟ್‌ನಲ್ಲಿ ನಿರ್ಮಿಸಿದ್ದೇನೆ. ಕಳೆದ ಹದಿನೈದು ವರ್ಷದಿಂದ ನಿರ್ದೇಶಕ ಜೆರಿನ್ ನನ್ನ ಜೊತೆ ಕೆಲಸ ಮಾಡುತ್ತಿದ್ದಾರೆ. ಪ್ರಾರಂಭದಿಂದಲೂ ಚಿತ್ರದ ಪ್ರತಿ ದೃಶ್ಯವನ್ನು ಅದ್ಭುತವಾಗಿ ಶೂಟ್ ಮಾಡಿದ್ದಾರೆ ಎಂದು ಹೇಳಿದರು. ಈ ಚಿತ್ರವನ್ನು ವಿತರಿಸುತ್ತಿರುವ ಹಾರಿಜನ್ ಸ್ಟುಡಿಯೋಸ್‌ನ ಟೋನಿ ರಾಜ್ ಮಾತನಾಡಿ ಕನ್ನಡ ಭಾಷೆಯಲ್ಲೇ ಹೆಚ್ಚಿನ ಚಿತ್ರಮಂದಿರಗಳಲ್ಲಿ ರಿಲೀಸ್ ಮಾಡುವುದಾಗಿ ಹೇಳಿದರು. ಈಗಾಗಲೇ ತನ್ನ ಟ್ರೇಲರ್ ಹಾಗೂ ಹಾಡುಗಳ ಮೂಲಕವೇ ಸದ್ದು ಮಾಡುತ್ತಿರುವ ದಿ ಲೆಜೆಂಡ್ ಚಿತ್ರಕ್ಕೆ ಜೆ.ಡಿ. ಜೆರಿನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಬೆಡಗಿ ಊರ್ವಶಿ ರೌಟೇಲಾ ಸರವಣನ್ ಜೊತೆ ನಾಯಕಿಯಾಗಿ ಬಣ್ಣ ಹಚ್ಚುವ ಮೂಲಕ ಮೊದಲ ಬಾರಿಗೆ ದಕ್ಷಿಣ ಭಾರತ ಚಿತ್ರರಂಗ ಪ್ರವೇಶಿಸಿದ್ದಾರೆ. ಪ್ರಭು, ಸುಮನ್. ವಿವೇಕ್, ಯಶಿಕಾ ಆನಂದ್ ಸೇರಿದಂತೆ ಹಲವಾರು ಕಲಾವಿದರು ಲೆಜೆಂಡ್ ಚಿತ್ರದಲ್ಲಿ ನಟಿಸಿದ್ದಾರೆ. ಹ್ಯಾರಿಸ್ ಜಯರಾಜ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದ್ದು, ಪ್ರಪಂಚದಾದ್ಯಂತ 2000ಕ್ಕೂ ಹೆಚ್ಚು ಥೇಟರ್‌ಗಳಲ್ಲಿ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳಂ ಸೇರಿ 5 ಭಾಷೆಯಲ್ಲಿ ಲೆಜೆಂಡ್ ಚಿತ್ರವು ತೆರೆಕಾಣುತ್ತಿದೆ.

## ಭರತ್ ಫಿಲಂಸ್ ಮೂರು ಚಿತ್ರಗಳಿಗೆ ಚಾಲನೆ



ಪಾರ್ವತಮ್ಮ ರಾಜ್‌ಕುಮಾರ್ ಅವರ ಸಹೋದರನ ಪುತ್ರ ಧ್ರುವನ್ ನಾಯಕನಾಗಿ ನಟಿಸಿರುವ ಭಗವಾನ್ ಶ್ರೀಕೃಷ್ಣ ಪರಮಾತ್ಮ ಸೇರಿದಂತೆ ಒಟ್ಟಿಗೇ 3 ಚಿತ್ರಗಳ ನಿರ್ಮಾಣಕ್ಕೆ ನಿರ್ಮಾಪಕ ಭರತ್ ವಿಷ್ಣುಕಾಂತ್ ಕೈ ಹಾಕಿದ್ದಾರೆ. ಇತ್ತೀಚೆಗೆ ಇವರ ಭರತ್ ಫಿಲಂ ಪ್ರೊಡಕ್ಷನ್ ಸಂಸ್ಥೆಯ ಲೋಗೋವನ್ನು ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ ಅವರು ಬಿಡುಗಡೆ ಮಾಡಿದರು. ಇತ್ತೀಚೆಗೆ ಖಾಸಗಿ ಹೋಟೆಲ್‌ವೊಂದರಲ್ಲಿ ನಡೆದ ಈ ಕಾರ್ಯ ಕ್ರಮದಲ್ಲಿ ನಿರ್ಮಾಪಕರಾದ ಉಮಾಪತಿ ಶ್ರೀನಿವಾಸ್ ಗೌಡ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ.ಹರೀಶ್, ಎನ್. ಕುಮಾರ್, ಸುಂದರರಾಜ್ ಹಾಜರಿದ್ದು ಭರತ್ ಅಂಡ್ ಟೀಂಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಉಮಾಪತಿಗೌಡ, ಮಾತನಾಡಿ ಒಬ್ಬ ನಿರ್ಮಾಪಕ ಯಾವಾಗಲೂ ಮುಂದೆ ಇರಬೇಕು. ಸಿನಿಮಾ ಶುರುವಾಗುವುದಕ್ಕೂ ಮುನ್ನ ನಿರ್ದೇಶಕರು ಕಥೆ ಮಾಡಿಕೊಳ್ಳುತ್ತಾರೆ. ಆ ಬಳಿಕ ನಿರ್ಮಾಪಕರ ಬಳಿ ಹೋಗುತ್ತಾರೆ. ಪ್ರೊಡ್ಯೂಸರ್ ಇಡೀ ಟೀಂ ಸಾಕ್ತಾರೆ. ಆ ಬಳಿಕ ಏಕಾಂಗಿಯಾಗುವುದು ನಿರ್ಮಾಪಕ. ಥಿಯೇಟರ್‌ನಲ್ಲಿ ದುಡ್ಡು ಕಲೆಕ್ಟ್ ಮಾಡಿಕೊಡುವವರಿಗೆ ದೊಡ್ಡ ಗೌರವ ಕೊಡಬೇಕು. ಸಿನಿಮಾ ಅಂತ ಬಂದಾಗ ಚಿಕ್ಕದು, ದೊಡ್ಡದು ಇಲ್ಲಿ ಲೆಕ್ಕಕ್ಕೆ ಬರು ವುದಿಲ್ಲ. ಆ ಸಿನಿಮಾ ಹೊರೆಹೊತ್ತವರಿಗೆ ಮಾತ್ರ ಅದರ ಕಷ್ಟ ಗೊತ್ತಾಗುತ್ತದೆ. ಸಿನಿಮಾಗೆ ನಿರ್ಮಾಪಕನೇ ಮೊದಲ ಹೀರೋ. ಸಿನಿಮಾ ಎನ್ನುವುದು ಆಲದಮರ. ಭರತ್ ಅಂಡ್ ಟೀಂಗೆ ಒಳ್ಳೆದಾಗಲಿ ಎಂದರು.

# ಪ್ರವೀಣ್ ನೆಟ್ಟಾರು ಹತ್ಯೆಗೆ ಕೊಡಗಲ್ಲಿ ವ್ಯಾಪಕ ಆಕ್ರೋಶ

## 'ನಾವು ಆರಿಸಿದ ರಾಜ್ಯದ ಬಿಜೆಪಿ ಸರ್ಕಾರ ಹಿಂದೂ ರಕ್ಷಣೆಗೆ ಮುಂದಾಗದಿದ್ದಲ್ಲಿ, ಅಧಿಕಾರದಿಂದ ಹೊರ ನಡೆಯಲಿ': ಘೋಷಣೆ




ಮಡಿಕೇರಿ,ಜು.28– ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಭದ್ರಕೋಟೆ ಕೊಡಗು ಜಿಲ್ಲೆಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಜಿಲ್ಲೆಯ ವಿರಾಜಪೇಟೆ, ಕುಶಾಲನಗರ, ಪೊನ್ನಂಪೇಟೆ, ಮಾದಾಪಟ್ಟಣ ಸೇರಿದಂತೆ ಇನ್ನಿತರ ಕಡೆ ಪ್ರತಿಭಟನೆಗಳು ನಡೆದಿವೆ.

'ನಾವು ಆರಿಸಿದ ರಾಜ್ಯದ ಬಿಜೆಪಿ ಸರ್ಕಾರ 'ಹಿಂದೂ'ಗಳ ರಕ್ಷಣೆಗೆ ಮುಂದಾಗದಿದ್ದಲ್ಲಿ, ಅಧಿಕಾರದಿಂದ ಹೊರ ನಡೆಯಲಿ' ಎನ್ನುವ ಘೋಷಣೆಗಳು ಪ್ರತಿಭಟನೆಯಲ್ಲಿ ಮೊಳಗಿವೆ. ಹತ್ಯಾ ಪ್ರಕರಣದಲ್ಲಿ ರಾಜ್ಯ ಬಿಜೆಪಿ ಸರ್ಕಾರದ ನಿರ್ಲಕ್ಷ್ಯವನ್ನು ತೀವ್ರವಾಗಿ ಖಂಡಿಸಿ, ಹಿಂದೂ ಪರ ಸಂಘಟನೆ ಮಡಿಕೇರಿಯಲ್ಲಿ ಪ್ರತಿಭಟಿಸುವ ಮೂಲಕ ತನ್ನ ಆಕ್ರೋಷ ಹೊರಹಾಕಿದೆ. ವಿಶ್ವ ಹಿಂದೂ ಪರಿಷತ್, ಬಜರಂಗ ದಳ, ದುರ್ಗಾವಾಹಿನಿ ಮತ್ತು ಮಾತೃ ಮಂಡಳಿಯ ಸಂಯುಕ್ತಾಶ್ರಯದಲ್ಲಿ ನಗರದ ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಮೊಳಗಿಸಿ 'ಹಿಂದೂ'ಗಳಿಗೆ ರಕ್ಷಣೆ ಎಲ್ಲಿದೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು. ಹಿಂದೂಗಳ ಮತವನ್ನು ಪಡೆದು ಹಿಂದೂ ಕಾರ್ಯಕರ್ತರನ್ನು ಚುನಾವಣೆ ಸಂದರ್ಭ ಬಳಸಿಕೊಂಡು ಅವರಿಗೆ ರಕ್ಷಣೆ ನೀಡಲು ಸರಕಾರ ಮತ್ತು ಮಂತ್ರಿಗಳು ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ವಿ.ಹಿಂ.ಪ ಮುಖಂಡ ವಿನಯ್, ಬೆಳ್ಳಾರೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಅವರನ್ನು ಹಿಂದಿನಿಂದ ಬಂದು ರಣ ಹೇಡಿಗಳು ಹತ್ಯೆ ಮಾಡಿದ್ದಾರೆ. ಇಂತಹ ಸಂದರ್ಭ ಕಠಿಣ ನಿಲುವುಗಳನ್ನು ತಳೆದು ಹಂತಕರನ್ನು ಬಗ್ಗು ಬಡಿಯಬೇಕಾದ ಸರ್ಕಾರ 'ಕಠಿಣ ಕ್ರಮ'ದ ಹೇಳಿಕೆಗೆ ಸೀಮಿತವಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಪ್ರಸ್ತುತ ರಾಜ್ಯದಲ್ಲಿರುವ ಗೃಹ ಸಚಿವರು ಏನನ್ನೂ ಮಾಡಲಾಗದ ಅಸಹಾಯಕ ಸಚಿವರಾಗಿದ್ದರೆ, ಮುಖ್ಯಮಂತ್ರಿಗಳು ನಿಷ್ಕ್ರೀಯರಾಗಿದ್ದಾರೆ. ಅವರನ್ನು ಅಧಿಕಾರಕ್ಕೆ ತಂದ ಹಿಂದು ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾದಲ್ಲಿ, ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಲಿ. ಕಾಂಗ್ರೆಸ್ ಮತ್ತು ಗೂಂಡಾಗಳನ್ನು ಎದುರಿಸುವುದು ಹೇಗೆಂದು ತಮಗೆ ತಿಳಿದಿದೆಯೆಂದು ಎಚ್ಚರಿಕೆಯ ಮಾತುಗಳನ್ನಾಡಿದರು. ಪ್ರತಿಭಟನೆಯಲ್ಲಿ ವಿ.ಹಿಂ.ಪ ಪ್ರಮುಖರಾದ ಪುದಿಯೊಕ್ಕಡ ರಮೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಸುನೀಲ್ ಸುಬ್ರಮಣಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಉಣ್ಣಿ ಕೃಷ್ಣ, ಮನು ಮಹೇಶ್, ಅರುಣ್ ಶೆಟ್ಟಿ, ಸವಿತಾ ರಾಕೇಶ್, ಜಗದೀಶ್, ಅರುಣ್ ಕುಮಾರ್, ಸಬಿತಾ, ಶ್ವೇತ ಇತರರು ಪಾಲ್ಗೊಂಡಿದ್ದರು.

### ಇಂದು ಮಡಿಕೇರಿಯಲ್ಲಿ ಪ್ರತಿಭಟನೆ

**ಮಡಿಕೇರಿ:** ಬೆಳ್ಳಾರೆಯಲ್ಲಿ ನಡೆದ ಪ್ರವೀಣ್ ಹತ್ಯಾ ಪ್ರಕರಣ, ಅಕ್ರಮ ಬಾಂಗ್ಲಾ ವಲಸಿಗರ ಗಡಿ ಪಾರು, ಹಿಂದೂ ಸಂಘಟನೆಗಳ ಕಾರ್ಯಕರ್ತರ ಮೇಲೆ ಹೂಡಲಾಗಿರುವ ಗೂಂಡಾ ಪ್ರಕರಣಗಳ ಹಿಂಪಡೆತ, ಗೋ ಸಾಗಾಟಕ್ಕೆ ತಡೆ ಸೇರಿದಂತೆ ವಿವಿಧ ಬೇಡಿಕೆಗಳ ಆಗ್ರಹಕ್ಕಾಗಿ ಜು.29ರಂದು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಹಿಂದೂ ಪರ ಸಂಘಟನೆಗಳ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆಯೆಂದು ವಿಹಿಂಪ ಪ್ರಮುಖ ವಿನಯ್ ತಿಳಿಸಿದ್ದಾರೆ.

## ವಿರಾಜಪೇಟೆಯಲ್ಲೂ ಪ್ರತಿಭಟನೆ

ವಿರಾಜಪೇಟೆ, ಜು.28– ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಹಿಂದೂ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ನೇತೃತ್ವದಲ್ಲಿ ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ವಿರಾಜಪೇಟೆ ಪಟ್ಟಣದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿದರು.

ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿಗಳನ್ನು ಈ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರ ಮತ್ತು ಗೃಹ ಸಚಿವ ಅರಗ ಜ್ಞಾನೇಂದ್ರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಹಿಂದೂ ಸಂಘಟನೆಯ ಪ್ರಮುಖರಾದ ಮಾಳೇಟಿರ ಶ್ರೀನಿವಾಸ್ ಮಾತನಾಡಿ, ಪಕ್ಷದ ಕಾರ್ಯಕರ್ತರ ನಿರಂತರ ಹತ್ಯೆಯನ್ನು ಖಂಡಿಸಿದರಲ್ಲದೆ ಕಾರ್ಯಕರ್ತರಿಗೆ ರಕ್ಷಣೆ ನೀಡಲು ಸರ್ಕಾರ ವಿಫಲವಾಗಿದೆ. ಇಂಥ ಸರಕಾರವನ್ನು ನಾವುಗಳು ಆಯ್ಕೆ ಮಾಡಿರುವುದಕ್ಕೆ ಪಶ್ಚಾತಾಪ ಪಡುವಂತಾಗಿದೆ ಎಂದರು.

ರಾಜ್ಯ ಸರಕಾರ ಇಂತ ಘಟನೆಗಳನ್ನು ತಡೆಯದೆ ಹೋದರೆ ನಾವೇ ತಡೆಯಲು ಮುಂದಾಗಬೇಕಾಗುತ್ತದೆ. ಕೇರಳದ ಜಿಹಾದಿಗಳು ಇಲ್ಲಿ ಈ ಕೃತ್ಯ ನಡೆಸಿದರೆ ಮುಂದೆ ಹಿಂದೂ ಕಾರ್ಯಕರ್ತರೆ ಉತ್ತರ ಹೇಳಲಿದ್ದಾರೆ ಎಂದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ್ದ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಅವರಿಗೆ ಮನವಿ ಸಲ್ಲಿಸಿ ಆರೋಪಿಗಳನ್ನು 24 ಗಂಟೆಯೊಳಗೆ ಬಂಧಿಸುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಿಶ್ವಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ಬಿ.ಎಂ.ಕುಮಾರ್, ಬಜರಂಗದಳದ ಸಂಚಾಲಕ ವಿವೇಕ್ ರೈ, ಕುಶಾಲಪ್ಪ, ಹಿಂದೂ ಜಾಗರಣ ವೇದಿಕೆಯ ಪ್ರಮುಖ ದಿನೇಶ್ ನಾಯರ್, ಪುರಸಭೆ ಅಧ್ಯಕ್ಷೆ ಸುಸ್ಮಿತಾ ಮತ್ತು ಬಿಜೆಪಿ ಸದಸ್ಯರು, ನಗರ ಅಧ್ಯಕ್ಷ ಟಿ.ಪಿ. ಕೃಷ್ಣ ಹಾಗೂ ಸಂಘಟನೆಯ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

**ರಾಜೀನಾಮೆ:** ಈ ಸಂದರ್ಭ ಬಿಜೆಪಿ ತಾಲೂಕು ಸಮಿತಿಯ ಸಾಯಿನಾಥ್ ನಾಯಕ್, ದರ್ಶನ್ ಕುಮಾರ್, ನಗರ ಬಿಜೆಪಿ ಅಧ್ಯಕ್ಷ ಟಿ.ಪಿ. ಕೃಷ್ಣ, ಕಾರ್ಯದರ್ಶಿ ಪ್ರದೀಪ್ ರೈ, ಸಹ ಕಾರ್ಯದರ್ಶಿ ಟಿ.ಕೆ. ಶಶಿ, ಮತ್ತು ಶಕ್ತಿ ಕೇಂದ್ರದ ಮನೋಜ್, ಸೋಮಶೇಖರ್, ಕೆ.ವಿ. ಸಂತೋಷ್, ಬಿ.ಸಿ.ಈಶ್ವರ್, ಕೆ.ಟಿ.ವೆಂಕಟೇಶ್ ಹಾಗೂ ಇತರರು ಪಕ್ಷದ ಸ್ಥಾನಕ್ಕೆ ರಾಜಿನಾಮೆ ನೀಡುವುದಾಗಿ ಎಚ್ಚರಿಸಿದರು.



## ನಕ್ಷತ್ರ ಆಮೆಗಳ ಅಕ್ರಮ ಮಾರಾಟಕ್ಕೆ ಯತ್ನ

### ಮಡಿಕೇರಿಯಲ್ಲಿ ಇಬ್ಬರ ಬಂಧನ, ಆಮೆಗಳ ವಶ

ಮಡಿಕೇರಿ ಜು.28– ಎರಡು ಜೀವಂತ ನಕ್ಷತ್ರ ಆಮೆಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಪ್ರಕರಣವನ್ನು ಬೇಧಿಸುವಲ್ಲಿ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕ ಯಶಸ್ವಿಯಾಗಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.



ಸುರೇಶ್ ಹಾಗೂ ಶರವಣನ್ ಬಂಧಿತ ಆರೋಪಿಗಳಾಗಿದ್ದು, ಎರಡು ನಕ್ಷತ್ರ ಆಮೆಗಳನ್ನು ವಶಕ್ಕೆ ಪಡೆಯಲಾಗಿದೆ. ನಗರದ ಬಸ್ ತಂಗುದಾಣವೊಂದರ ಬಳಿ ಆಮೆಗಳನ್ನು ಮಾರಾಟ ಮಾಡಲು ಹೊಂಚು ಹಾಕುತ್ತಿದ್ದ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿದರು.

ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪ್ರಬಾರ ಪೊಲೀಸ್ ಅಧೀಕ್ಷಕ ಶ್ರೀನಿವಾಸ್‌ರೆಡ್ಡಿ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು.ಸವಿ, ಮುಖ್ಯಪೇದೆಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಪೇದ ಮಂಜುನಾಥ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ದಂತಗಳ ಮಾರಾಟಕ್ಕೆ ಯತ್ನ: ಮೂವರ ಬಂಧನ

ಮಡಿಕೇರಿ,ಜು.28– ಎರಡು ಆನೆ ದಂತಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು, ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿ ದಂತಗಳನ್ನು ವಶಪಡಿಸಿಕೊಂಡಿದೆ.



ಮಹದೇವಸ್ವಾಮಿ, ಗುರು.ಜಿ ಹಾಗೂ ಹೇಮಂತ್ ರಾಜ್ ಪಿ. ಬಂಧಿತ ಆರೋಪಿಗಳು. ನಗರದ ಫೀ.ಮಾ.ಕಾರ್ಯಪ್ಪ ಕಾಲೇಜು ರಸ್ತೆಯ ಬಸ್ ತಂಗುದಾಣದ ಬಳಿ ಆನೆ ದಂತಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿ ಮಾಲು ಸಹಿತ ಆರೋಪಿಗಳನ್ನು ಬಂಧಿಸಿದರು.

ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪ್ರಬಾರ ಪೊಲೀಸ್ ಅಧೀಕ್ಷಕ ಶ್ರೀನಿವಾಸ್ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ, ಹೆಡ್ ಕಾನ್ಸ್‌ಟೇಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಕಾನ್ಸ್‌ಟೇಬಲ್ ಮಂಜುನಾಥ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

### ಧರ್ಮಪ್ಪ ನಿಧನ

ಸೋಮವಾರಪೇಟೆ, ಜು.28– ಯಡೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಗ್ರಂಥಪಾಲಕ ವೈ.ಎನ್. ಧರ್ಮಪ್ಪ(58) ಬುಧವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ. ಮೃತರ ಸ್ವಗ್ರಾಮ ಎರಗಳ್ಳಿಯಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಿತು.



# ಚಾಮರಾಜನಗರ: ದೇವಾಲಯಗಳಲ್ಲಿ ಭೀಮನ ಅಮಾವಾಸ್ಯೆ ವಿಶೇಷ ಪೂಜೆ, ಅನ್ನಸಂತರ್ಪಣೆ





ಚಾಮರಾಜನಗರ, ಜು.28– ಭೀಮನ ಅಮಾವಾಸ್ಯೆ ಅಂಗವಾಗಿ ಜಿಲ್ಲೆಯ ಎಲ್ಲಾ ದೇವಾಲಯಗಳಲ್ಲಿ ಗುರುವಾರ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಿತು.

ಮಲೆಮಹದೇಶ್ವರ ಬೆಟ್ಟ, ಸಂತೇಮರಳ್ಳಿಯ ಮಹದೇಶ್ವರ ದೇವಸ್ಥಾನ, ಯಳಂದೂರು ತಾಲೂಕಿನ ಕಂದಹಳ್ಳಿಯ ಶ್ರೀ ಮಹದೇಶ್ವರ ದೇವಸ್ಥಾನ, ಮಂಗಲ ಗ್ರಾಮದ ಶ್ರೀ ಶಂಕರೇಶ್ವರಬೆಟ್ಟ, ನಗರದ ಹೊರವಲಯದಲ್ಲಿರುವ ಯಡಬೆಟ್ಟದ ಶ್ರೀ ಮಹದೇಶ್ವರ ದೇವಸ್ಥಾನ, ಬದನಗುಪ್ಪೆಯ ಶ್ರೀ ಜವನ ಮಲೆ ಮಹದೇಶ್ವರ ದೇವಸ್ಥಾನ, ಕೂಡ್ಲೂರಿನ ಶ್ರೀ ಮಹದೇಶ್ವರ ದೇವಸ್ಥಾನ, ಅಯ್ಯನಪುರದ ಶ್ರೀ ಮಹದೇಶ್ವರ ದೇವಸ್ಥಾನ, ಚಂದಕವಾಡಿಯ ಶ್ರೀ ಲಕ್ಷ್ಮೀದೇವಿ ಅಮ್ಮನವರ ದೇವಸ್ಥಾನ ಸೇರಿದಂತೆ ಜಿಲ್ಲೆಯ ಎಲ್ಲಾ ದೇವಾಲಯಗಳಲ್ಲಿ ಬೆಳಗ್ಗೆಯಿಂದ ಸಂಜೆ ತನಕ ವಿಶೇಷ ಪೂಜೆಗಳು ನಡೆದವು.

ಭೀಮನ ಅಮಾವಾಸ್ಯೆ ಹಿನ್ನೆಲೆಯಲ್ಲಿ ದೇವಾಲಯಗಳನ್ನು ಸ್ವಚ್ಛಗೊಳಿಸಿ ಶೃಂಗರಿಸಲಾಗಿತ್ತು. ಬಾಳೆಕಂದು, ಮಾವಿನ ಸೊಪ್ಪು ಕಟ್ಟಲಾಗಿತ್ತು. ಬಣ್ಣ ಬಣ್ಣದ ಹೂಗಳಿಂದ ದೇವಸ್ಥಾನವನ್ನು ಅಲಂಕರಿಸಲಾಗಿತ್ತು. ಭಕ್ತರು ಬೆಳಗ್ಗೆಯಿಂದಲೇ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು.

**ಅನ್ನಸಂತರ್ಪಣೆ:** ಜಿಲ್ಲೆಯ ಬಹುತೇಕ ದೇವಸ್ಥಾನಗಳಲ್ಲಿ ಅನ್ನ ಸಂತರ್ಪಣೆ ಹಾಗೂ ಪ್ರಸಾದ ವಿನಿಯೋಗ ನಡೆಯಿತು. ಬೆಳಗ್ಗೆಯಿಂದ ಸಂಜೆ ತನಕ ಭಕ್ತರು ಪ್ರಸಾದ ಸ್ವೀಕರಿಸುವ ಮೂಲಕ ಭಕ್ತಿ ಸಮರ್ಪಿಸಿದರು. ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಪ್ರಮುಖ ದೇವಸ್ಥಾನಗಳಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

## ಭೀಮನ ಅಮಾವಾಸ್ಯೆ ಹಿನ್ನೆಲೆಯಲ್ಲಿ ಜ್ಯೋತಿರ್ಭೀಮೇಶ್ವರ ವ್ರತ ಆಚರಣೆ

ಗುಂಡ್ಲುಪೇಟೆ, ಜು.28– ಇಲ್ಲಿನ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿರುವ ಪುರಾತನ ಶಿವನ ದೇವಸ್ಥಾನವಾದ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಭೀಮನ ಅಮಾವಾಸ್ಯೆ ಹಿನ್ನೆಲೆಯಲ್ಲಿ ಪ್ರತಿವರ್ಷ ನಡೆಯುವಂತೆ ಈ ವರ್ಷವೂ ಸಹ ಜ್ಯೋತಿರ್ಭೀಮೇಶ್ವರ ಸ್ವಾಮಿ ವ್ರತ ಆಚರಿಸಲಾಯಿತು.

ಬೆಳಗಿನ ಜಾವ ರಾಮೇಶ್ವರ ಸ್ವಾಮಿ ಮೂಲ ಶಿವಲಿಂಗಕ್ಕೆ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಶಂಕರ ನಾರಾಯಣ ಜೋಯಿಸರು ರುದ್ರ ಅಭಿಷೇಕ ನಡೆಸಿ. ನಾಗಾಭರಣ ಹಾಗೂ ವಿವಿಧ ಬೆಳೆಗಳಿಂದ ಅಲಂಕಾರ ಮಾಡಿ ಜ್ಯೋತಿಗೆ ಈಶ್ವರನ ಆವಾಹನೆ ಮಾಡಿ ಮಹಾ ಮಂಗಳಾರತಿ ನೆರವೇರಿಸಿದರು. ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ದೇವಸ್ಥಾನಕ್ಕೆ ಭೇಟಿ ನೀಡಿ ಈಶ್ವರನ ದರ್ಶನ ಪಡೆದರು. ದೇವಸ್ಥಾನದ ವತಿಯಿಂದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

## ಪಿಕಪ್ ವಾಹನ ಡಿಕ್ಕಿ: ಬೈಕ್ ಸವಾರನಿಗೆ ಗಾಯ


ಕೊಳ್ಳೇಗಾಲ, ಜು.28– ಬೈಕ್‌ಗೆ ಬೊಲೆರೋ ಪಿಕಪ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ತೀವ್ರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ಜರುಗಿದೆ.

ಶಂಕನಪುರ ಬಡಾವಣೆಯ ಬೈಕ್ ಮೆಕಾನಿಕ್ ರೇವಣ್ಣ ಎಂಬುವರು ಗಾಯಗೊಂಡ ಬೈಕ್ ಸವಾರ. ರಮೇಶ್ ಪಿಕಪ್ ವಾಹನ ಮೈಸೂರು ಕಡೆಯಿಂದ ವೇಗವಾಗಿ ಬಂದು ಜು.25 ರಂದು ರಾತ್ರಿ ರೇವಣ್ಣ ಕೆಲಸ ಮುಗಿಸಿಕೊಂಡು ಶಂಕನಪುರಕ್ಕೆ ಹೋಗುವಾಗ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಘಟನೆ ಜರುಗಿದ್ದು ತೀವ್ರ ಗಾಯಗೊಂಡ ಗಾಯಾಳುವನ್ನು ತಕ್ಷಣ ಸ್ಥಳೀಯರು ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಾಯಾಳು ಚೇತರಿಸಿಕೊಳ್ಳುತ್ತಿದ್ದಾರೆ.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರಘು ಎರಡು ವಾಹನವನ್ನು ಜಪ್ತಿ ಮಾಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಎರಡು ದಶಕಗಳ ನಂತರ ತುಂಬಿದ ದೊಡ್ಡಕೆರೆ, ಚಿಕ್ಕಕೆರೆ, ಸಿಂಡಿಗೆರೆ

### ಬಾಗಿನ ಅರ್ಪಿಸಲು ಸಿದ್ಧತೆ, ರೈತರಲ್ಲಿ ಹರ್ಷ



ಚಾಮರಾಜನಗರ, ಜು.28– ತಾಲೂಕಿನ ಪ್ರಮುಖ ಕೆರೆಗಳಾದ ದೊಡ್ಡಕೆರೆ, ಚಿಕ್ಕಕೆರೆ ಹಾಗೂ ಸಿಂಡಿಗೆರೆ ಇಪ್ಪತ್ತು ವರ್ಷಗಳ ಬಳಿಕ ಭರ್ತಿ ಆಗಿದ್ದು, ಇದು ಈ ಭಾಗದ ರೈತರಲ್ಲಿ ಹರ್ಷವನ್ನುಂಟು ಮಾಡಿದೆ.

ಚಾಮರಾಜನಗರ ತಾಲೂಕಿನ ದೊಡ್ಡಮೋಳೆ ಬಳಿ ಇರುವ ಈ ಮೂರು ಪ್ರಮುಖ ಕೆರೆಗಳು ಸಂಪೂರ್ಣವಾಗಿ ತುಂಬಿದ್ದು, ಈ ಭಾಗದ ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಮಂದಹಾಸ ಮೂಡುವಂತೆ ಮಾಡಿದೆ. ಸುಮಾರು ಎರಡು ದಶಕದ ಬಳಿಕ ಪ್ರಮುಖ ಕೆರೆಗಳು ಭರ್ತಿ ಆಗಿರುವುದರಿಂದ ಕೆರೆಗಳಿಗೆ ಬಾಗಿನ ಅರ್ಪಿಸಲು ಸಿದ್ಧತೆಗಳು ನಡೆಯುತ್ತಿದೆ.

ಸುವರ್ಣಾವತಿ ಜಲಾಶಯ ಸಂಪೂರ್ಣ ಭರ್ತಿ ಆದ ಹಿನ್ನೆಲೆಯಲ್ಲಿ ನೀರನ್ನು ಹೊರಬಿಡಲಾಗಿತ್ತು. ಇದರಿಂದ ದೊಡ್ಡಕೆರೆ, ಚಿಕ್ಕಕೆರೆ ಹಾಗೂ ಸಿಂಡಿಗೆರೆಗೆ ನೀರು ಬಂದಿದ್ದು, ಈ ಕೆರೆಗಳೂ ಭರ್ತಿ ಆಗಿವೆ. ದೊಡ್ಡಕೆರೆಯಿಂದ ನೀರನ್ನು ಹೊರಬಿಡಲಾಗಿದ್ದು, ಕೋಡಿಮೋಳೆ ಕೆರೆಗೆ ನೀರು ಹೋಗುತ್ತಿತ್ತು. ಇದನ್ನು ಬುಧವಾರದಿಂದ ನಿಲ್ಲಿಸಲಾಗಿದೆ.

ಈ ಮೂರು ಪ್ರಮುಖ ಕೆರೆಗಳು ಭರ್ತಿ ಆಗಿರುವುದರಿಂದ ಸಾವಿರಾರು ಎಕರೆ ಪ್ರದೇಶಗಳಲ್ಲಿ ಅಂತರ್ ಜಲಮಟ್ಟ ಹೆಚ್ಚಲಿದೆ. ದೊಡ್ಡಮೋಳೆ, ರಾಮಸಮುದ್ರ ಕರಿನಂಜನಪುರ, ಬಸವನಪುರ, ಹೆಬ್ಬಸೂರು, ದೊಡ್ಡಕೆರೆ, ಚಿಕ್ಕಕೆರೆ, ಸಿಂಡಿಗೆರೆ ಭರ್ತಿ ಆಗಿರುವ ವಿಷಯ ತಿಳಿದಿದೆ. ಈ ಕೆರೆಗಳ ಅಚ್ಚುಕಟ್ಟು ಪ್ರದೇಶ, ನಾಲೆಗಳು ಹಾಗೂ ಕೆರೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗೆ ಗಮನ ಹರಿಸಲಾಗುವುದು. ಈ ಮೂಲಕ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದು ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು ತಿಳಿಸಿದ್ದಾರೆ.



## ಅಪಘಾತದಲ್ಲಿ ಮೃತಪಟ್ಟವರ ಮನೆಗೆ ಮಲ್ಲೇಶ್ ಭೇಟಿ, ಸಾಂತ್ವನ

ಚಾಮರಾಜನಗರ, ಜು.28– ತಾಲೂಕಿನ ಮಾದಾಪುರ ಗ್ರಾಮದ ಬಳಿ ಬೈಕಿಗೆ ಅಡ್ಡ ಬಂದ ನಾಯಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದಾಗ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದ ತಾಲೂಕಿನ ಕಟ್ನವಾಡಿಯ ಮಹದೇವಪ್ಪ ಹಾಗೂ ಶಿವಮೂರ್ತಿ ಅವರ ಮನೆಗೆ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಅವರು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಕುಟುಂಬ ಸದಸ್ಯರನ್ನು ಖುದ್ದು ಭೇಟಿ ಮಾಡಿದ ಮಲ್ಲೇಶ್ ಅವರು ವೈಯಕ್ತಿಕವಾಗಿ ಧನ ಸಹಾಯ ಮಾಡಿದರಲ್ಲದೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಭರವಸೆ ನೀಡಿದರು.

# ರೈತರ ಜಮೀನಿನ ದಾಖಲೆ ಕಂಪ್ಯೂಟರೀಕರಣಕ್ಕೆ ಒತ್ತಾಯಿಸಿ ಪ್ರತಿಭಟನೆ




ಮಂಡ್ಯ, ಜು.28– ರೈತರ ಜಮೀನಿನ ದಾಖಲೆಗಳನ್ನು ಕಂಪ್ಯೂಟರೀಕರಣ ಮಾಡಬೇಕು ಎಂದು ಒತ್ತಾಯಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಗುರುವಾರ ತಾಲೂಕಿನ ಹೊನಗಳ್ಳಿ ಮಠ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸಮಾವೇಶಗೊಂಡ ಗ್ರಾಮಸ್ಥರು, ಜಮೀನಿಗೆ ಆರ್‌ಟಿಸಿ ನೀಡಿ ಸಂಕಷ್ಟದಲ್ಲಿರುವ ರೈತರ ಉಳಿವಿಗೆ ಅಧಿಕಾರಿಗಳು ಮುಂದಾಗಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದ ಮುಖಂಡ ಅಶೋಕ್ ಮಾತನಾಡಿ, ಹೊನಗಳ್ಳಿ ಮಠ ಗ್ರಾಮದಲ್ಲಿರುವ ಜಮೀನುಗಳಿಗೆ ಕೈ ಬರಹದ ಪಹಣಿ ನೀಡಲಾಗಿದೆ. ಇದರಿಂದ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಬ್ಯಾಂಕ್‌ಗಳಲ್ಲಿ ರೈತರಿಗೆ ಸಾಲ ಸೌಲಭ್ಯ ದೊರೆಯುತ್ತಿಲ್ಲ. ಸಹಕಾರ ಬ್ಯಾಂಕ್‌ಗಳಲ್ಲಿ ದೊರೆಯುವ ಸವಲತ್ತುಗಳು ನಮ್ಮ ರೈತರಿಗೆ ಸಿಗದಂತಾಗಿದೆ. ಹಾಗಾಗಿ, ಕೂಡಲೇ ಇದರ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರು ಬೆಳೆದಿರುವ ಬೆಳೆಗಳಿಗೆ ಸಮರ್ಪಕವಾಗಿ ಬೆಲೆ ಸಿಗದ ಕಾರಣ ತೀವ್ರ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ. ಕಳೆದ ನಾಲ್ಕೈದು ವರ್ಷಗಳಿಂದ ನಾವು ಬೆಳೆದ ಬೆಳೆ ನಮ್ಮ ಕೈಗೆ ಸಿಗದಂತಾಗಿದೆ. ಒಮ್ಮೆ ಮಳೆ ಕಡಿಮೆಯಾಗಿ ಸಂಕಷ್ಟ ಎದುರಾದರೆ, ಮತ್ತೊಮ್ಮೆ ಮಳೆ ಹೆಚ್ಚಾಗಿ ಬೆಳೆ ನಾಶವಾಗುತ್ತಿದೆ. ಇದರಿಂದ ನಾವು ತುಂಬಾ ನಷ್ಟವನ್ನು ಅನುಭವಿಸುತ್ತಿದ್ದೇವೆ ಈ ಬಗ್ಗೆಯೂ ಅಧಿಕಾರಿಗಳು ಗಮನ ಹರಿಸಬೇಕು ಎಂದು ಹೇಳಿದರು.

ರೈತರ ಜಮೀನುಗಳಿಗೆ ಕಂಪ್ಯೂಟರೀಕರಣ ಮಾಡಿದರೆ ಸರ್ಕಾರದ ಸವಲತ್ತುಗಳು ರೈತರು ಪಡೆದುಕೊಂಡು ಉತ್ತಮ ಜೀವನ ನಡೆಸಲು ಅನುಕೂಲವಾಗುತ್ತದೆ. ಜೊತೆಗೆ ರೈತರ ಸಂಕಷ್ಟಕ್ಕೆ ನೆರವಾದಂತಾಗುತ್ತದೆ. ದಯ ಮಾಡಿ ಅಧಿಕಾರಿಗಳು ಆರ್‌ಟಿಸಿ ಮಾಡಿಕೊಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ಮಂಜುಶ್ರೀ ಅವರು ನಮ್ಮ ಗ್ರಾಮಕ್ಕೆ ಆರ್‌ಟಿಸಿ ನೀಡಲು ಮುತುವರ್ಜಿ ವಹಿಸಿದ್ದರು. ಕಾಲಕ್ರಮೇಣ ಅವರ ವರ್ಗಾವಣೆಯಾದ ನಂತರ, ನಮ್ಮ ಗ್ರಾಮವನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿ ಅಶ್ವತಿ ಅವರು ಹೊನಗಳ್ಳಿ ಮಠ ಗ್ರಾಮದಲ್ಲಿ 'ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ ಕಾರ್ಯಕ್ರಮ' ಆಯೋಜಿಸಿ ರೈತರ ಸಮಸ್ಯೆ ಇತ್ಯರ್ಥಪಡಿಸಬೇಕು ಎಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಶೇಖರ್, ಅಂಗಡಿ ರಾಜಣ್ಣ, ರಾಮಣ್ಣ, ಮಂಜು, ನಾಗರಾಜು, ಸರೋಜಮ್ಮ, ಕೆಂಪಮ್ಮ, ಮೊಟಮ್ಮ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಚಾಮನಹಳ್ಳಿಯ ಶ್ರೀಬಂಡೆ ಮುನೇಶ್ವರ, ಶ್ರೀಶನೈಶ್ಚರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ



ಮದ್ದೂರು, ಜು.28– ತಾಲೂಕಿನ ಚಾಮನಹಳ್ಳಿಯ ಶ್ರೀಬಂಡೆ ಮುನೇಶ್ವರ ಹಾಗೂ ಶ್ರೀಶನೈಶ್ಚರಸ್ವಾಮಿ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ಅಂಗವಾಗಿ ಗುರುವಾರ ವಿಶೇಷ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ಅಮಾವಾಸ್ಯೆ ಅಂಗವಾಗಿ ದೇಗುಲದಲ್ಲಿ ಶನಿ ಶಾಂತಿ, ನವಗ್ರಹ ಹೋಮ, ಹವನ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಸಲಾಯಿತು. ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ದೇವಸ್ಥಾನಕ್ಕೆ ಆಗಮಿಸಿದ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಬಳಿಕ, ಶನೈಶ್ವರಸ್ವಾಮಿ ಉತ್ಸವ ನೆರವೇರಿತು. ದೇಗುಲದ ಪ್ರಧಾನ ಅರ್ಚಕ ಕೃಷ್ಣಪ್ಪ, ರಾಮಚಂದ್ರ ಭಟ್ ಇತರರು ಇದ್ದರು.

**ವಿಶೇಷ ಪೂಜಾ ಕೈಂಕರ್ಯ:** ಪಟ್ಟಣದ ಪುರಾಣ ಪ್ರಸಿದ್ಧ ಶ್ರೀಮದ್ದೂರಮ್ಮ, ಶ್ರೀಯಲಮ್ಮ ತಾಯಿ, ಶ್ರೀನರಸಿಂಹಸ್ವಾಮಿ, ಶ್ರೀಹೊಳೆ ಆಂಜನೇಯಸ್ವಾಮಿ ದೇವಾಲಯಗಳು ಸೇರಿದಂತೆ ತಾಲೂಕಿನ ವಿವಿಧ ದೇವಾಲಯಗಳಲ್ಲಿ ಭೀಮನ ಅಮವಾಸ್ಯೆ ಅಂಗವಾಗಿ ವಿಶೇಷ ಪೂಜಾ ಕೈಕಂರ್ಯ ನಡೆಯಿತು. ಭಕ್ತರಿಗೆ ತೀರ್ಥ, ಪ್ರಸಾದ ವಿತರಿಸಲಾಯಿತು.



ಕೆ.ಎಂ.ದೊಡ್ಡಿಯ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯ, ಶ್ರೀವೆಂಕಟೇಶ್ವರಸ್ವಾಮಿ ಸೇವಾ ಟ್ರಸ್ಟ್ ಭಾರತಿನಗರದಿಂದ ಜಾನಪದ ಉತ್ಸವ ಅದ್ದೂರಿಯಾಗಿ ನಡೆಯಿತು.

## ಕೆ.ಆರ್.ಪೇಟೆ: ಫುಟ್‌ಪಾತ್ ವ್ಯಾಪಾರಿಗಳ ಪ್ರತಿಭಟನೆ




ಕೆಆರ್.ಪೇಟೆ, ಜು.28– ಪಟ್ಟಣದ ಟಿ.ಬಿ.ಸರ್ಕಲ್ ಬಳಿಯ ಫುಟ್‌ಪಾತ್‌ನಲ್ಲಿ ಹಲವು ವರ್ಷಗಳಿಂದ ಸಣ್ಣ–ಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದ ವ್ಯಾಪಾರಿಗಳಿಗೆ ಬದಲಿ ಸ್ಥಳದಲ್ಲಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿ ಪಟ್ಟಣದ ಪುರಸಭೆ ಕಚೇರಿ ಮುಂಭಾಗ ಗುರುವಾರ ಕರ್ನಾಟಕ ರಕ್ಷಣಾವೇದಿಕೆ ಸ್ವಾಭಿಮಾನಿ ಬಣದ ನೇತೃತ್ವದಲ್ಲಿ ವ್ಯಾಪಾರಿಗಳು ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಪಟ್ಟಣದಲ್ಲಿ ನಡೆದ ಮುಖ್ಯಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಟಿ.ಬಿ.ಸರ್ಕಲ್ ಬಳಿಯ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ತೆರವುಗೊಳಿಸಲಾಯಿತು. ಕಾರ್ಯ ಕ್ರಮ ಮುಕ್ತಾಯವಾದ ಬಳಿಕ ಮತ್ತೆ ಅದೇ ಸ್ಥಳದಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡುತ್ತಿಲ್ಲ. ಇದರಿಂದ ಜೀವನ ನಡೆಸಲು ಕಷ್ಟಕರವಾಗುತ್ತಿದೆ. ಹಾಗಾಗಿ, ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಆಲಿಸಿದ ಪುರಸಭಾ ಅಧಿಕಾರಿಗಳು ಪರ್ಯಾಯ ವ್ಯವಸ್ಥೆ ಮಾಡಿಕೊಡುವ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣದ ಜಿಲ್ಲಾ ಉಪಾಧ್ಯಕ್ಷ ಸಮೀರ್, ತಾಲೂಕು ಅಧ್ಯಕ್ಷ ಅಮ್ಜದ್, ಯುವ ಘಟಕದ ಅಧ್ಯಕ್ಷ ಸಲ್ಮಾನ್‌ಖಾನ್, ಸಹ ಕಾರ್ಯದರ್ಶಿ ಸಮೀ, ಆಟೋ ಜಾವಿದ್, ಫುಟ್‌ಪಾತ್ ವ್ಯಾಪಾರಿಗಳಾದ ಗುಲಾಬ್‌ಜಾನ್, ಇಮ್‌ದಾದ್, ಅಫ್ರೀಜ್ ಖಾನ್, ಫಯಾಜ್ ಷರೀಫ್, ಜುನೇದ್ ಷರೀಫ್, ರಷಿದ್, ಕಲೀಮ್, ಅಜ್ಮಲ್‌ಪಾಷಾ ಮತ್ತಿತರರಿದ್ದರು.

## ಅತ್ತೆಯೊಂದಿಗೆ ಅನುಚಿತ ವರ್ತನೆ: ಮನೆ ಮಾಲೀಕನ ಕೊಚ್ಚಿ ಕೊಂದ ಬಾಡಿಗೆದಾರ


ರವಿ

ಶ್ರೀರಂಗಪಟ್ಟಣ, ಜು.28– ತನ್ನ ಅತ್ತೆ ಜೊತೆ ಅನುಚಿತವಾಗಿ ವರ್ತಿಸಿದನೆಂಬ ಕಾರಣಕ್ಕಾಗಿ ಮನೆ ಮಾಲೀಕನನ್ನು ಬಾಡಿಗೆದಾರ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಶ್ರೀರಂಗಪಟ್ಟಣ ತಾಲೂಕು ಬೆಳಗೊಳ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಇದೇ ಗ್ರಾಮದ ರವಿ(30) ಹತ್ಯೆಗೀಡಾದವನಾಗಿದ್ದು, ಈತನ ಮನೆಯಲ್ಲಿ ಬಾಡಿಗೆಗೆ ಇರುವ ಶರತ್(30) ಮನೆ ಮಾಲೀಕನನ್ನೇ ಹತ್ಯೆ ಮಾಡಿದವನು. ಶರತ್ ಕಟ್ಟಡ ಕಾರ್ಮಿಕನಾಗಿದ್ದ ರವಿ ಬೆಳಗೊಳ ಗ್ರಾಮದ ವೈನ್‌ಸ್ಟೋರ್ ವೊಂದರ ಸರ್ವರ್ ಆಗಿ ಕೆಲಸ ಮಾಡುತ್ತಿದ್ದಾನೆ. ಶರತ್‌ನ ಅತ್ತೆ ಜೊತೆ ರವಿ ಅನುಚಿತವಾಗಿ ವರ್ತಿಸಿದನೆಂದು ಹೇಳಲಾಗಿದ್ದು, ಇದರಿಂದ ರೊಚ್ಚಿಗೆದ್ದ ಶರತ್ ಬುಧವಾರ ರಾತ್ರಿ ವೈನ್‌ಸ್ಟೋರ್ ಬಳಿ ಬಂದು ರವಿಯನ್ನು ಹೊರಗೆ ಕರೆದು ಏಕಾಏಕಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಶರತ್‌ನನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ ಎಂದು ಹೇಳಲಾಗಿದೆ.

## ಆಗಸ್ಟ್‌ನಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

### ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರು



ಮೈಸೂರು, ಜು.28(ಜಿಎ)– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ, ಮೈಸೂರು ಮಹಾನಗರ ಪಾಲಿಕೆ ಮತ್ತು ವಿವಿಧ ಇಲಾಖೆ ವತಿಯಿಂದ ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು. ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ ನೇತೃತ್ವದಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಆಗಸ್ಟ್‌ನಲ್ಲಿ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಿದ್ದು, ಅದರಂತೆ ಗುರುವಾರ ಸಂಜೆ ಮೈಸೂರು ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳ ಜೊತೆ ಪೂರ್ವಭಾವಿ ಸಭೆ ನಡೆಸಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ನಡೆಸಲು ಚಿಂತಿಸಿದ್ದು, ಈ ಹಿನ್ನೆಲೆ ಮೈಸೂರಿನಲ್ಲಿ ಆಗಸ್ಟ್‌ನಲ್ಲಿ ಮೊದಲ ಕಾರ್ಯಕ್ರಮ ಮಾಡಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಕೈಜೋಡಿಸಬೇಕು. ಮಕ್ಕಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಜಿಲ್ಲೆಯಲ್ಲಿರುವ ಪೌರಕಾರ್ಮಿಕರ ಪ್ರತಿಭಾವಂತ ಮಕ್ಕಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದುಕೊಂಡಿರುವ ವಿದ್ಯಾರ್ಥಿಗಳ ಪಟ್ಟಿ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪೌರಕಾರ್ಮಿಕರಿಗೆ ಅರಿವು ಮೂಡಿಸಲೆಂದು ಪೌರಕಾರ್ಮಿಕರಿದ್ದಲ್ಲೇ ಅವರ ಜೀವನಾಧರಿತ ಒಂದು ವಿಶೇಷ ನಾಟಕವನ್ನು ಮಾಡಿಸುವ ಸಲುವಾಗಿ ಅದರ ತಯಾರಿ ಈಗಾಗಲೇ ಆರಂಭವಾಗಿದೆ. ಈ ನಾಟಕ ಪ್ರದರ್ಶವು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ತಿಳಿಸಿದರು. ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಉಪ ಆಯುಕ್ತೆ ರೂಪ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಅಧಿಕಾರಿಗಳು ಭಾಗಿಯಾಗಿದ್ದರು.

## ಯುವ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಗೆ ಮನನೊಂದು ರಾಜೀನಾಮೆಗೆ ಮುಂದಾದ ಚಾಮುಂಡೇಶ್ವರಿ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು




ಮೈಸೂರು, ಜು.28(ಜಿಎ)–ಬಿಜೆಪಿಯ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯಿಂದ ಮನನೊಂದಿರುವ ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಲು ತೀರ್ಮಾನಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಮಂಗಳವಾರ ರಾತ್ರಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದ್ದು, ಇದನ್ನು ಖಂಡಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯುವ ಮೋರ್ಚಾದ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಲು ಮುಂದಾಗಿರುವ ಬೆನ್ನ ಹಿಂದೆಯೇ ಗುರುವಾರ ಸಂಜೆ ಚಾಮುಂಡೇಶ್ವರಿ ಕ್ಷೇತ್ರದ ಯುವ ಮೋರ್ಚಾ ಪದಾಧಿಕಾರಿಗಳು ಮತ್ತು ಅಧ್ಯಕ್ಷರು ನಗರ ಬಿಜೆಪಿ ಕಚೇರಿಗೆ ಭೇಟಿ ನೀಡಿ ಜಿಲ್ಲಾ ಅಧ್ಯಕ್ಷ ಶ್ರೀವತ್ಸ ಅವರಿಗೆ ರಾಜೀನಾಮೆ ನೀಡಲು ತೆರಳಿದ್ದರು. ಆದರೆ ಅಧ್ಯಕ್ಷರು ಇರಲಿಲ್ಲ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಗೋರೂರು ಚೇತನ್, ಪ್ರಧಾನ ಕಾರ್ಯದರ್ಶಿ ಶಿವು, ನಂದೀಶ್, ಕಾರ್ಯದರ್ಶಿ ರಿತೇಶ್ ಪದಾಧಿಕಾರಿಗಳಾದ ಮೋಹನ್, ಸಂಜು, ಮಹದೇವಸ್ವಾಮಿ, ಉಪಾಧ್ಯಕ್ಷ ಉದಯ್ ಕಿರಣ್, ಮಾಜಿ ಜಿಲ್ಲಾ ಕಾರ್ಯದರ್ಶಿ ನೇಹಾ, ನಗರ ಸಾಮಾಜಿಕ ಜಾಲತಾಣ ಒಬಿಸಿ ಮೋರ್ಚಾ ಜೀವನ್, ಶಿವಾ ನಂದ್ ರಾವ್, ಎಂ.ಪಿ. ನಾಗರಾಜ್, ಮಂಜುನಾಥ್, ಸತೀಶ್, ರವಿಕುಮಾರ್ ಸೇರಿದಂತೆ 30ಕ್ಕೂ ಹೆಚ್ಚು ಮಂದಿ ರಾಜೀನಾಮೆ ನೀಡಲು ನಿರ್ಧರಿಸಿದ್ದು, ಅಧ್ಯಕ್ಷರು ಸಿಗದ ಕಾರಣ ನಾಳೆ(ಶುಕ್ರವಾರ) ರಾಜೀನಾಮೆ ನೀಡಲು ತೀರ್ಮಾನಿಸಿದ್ದಾರೆ.

## ಸುಯೋಗ್ ಆಸ್ಪತ್ರೆಯಲ್ಲಿ ಬ್ರೈನ್ ಸ್ಟ್ರೋಕ್ ಯೂನಿಟ್ ಆರಂಭ

### ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಉದ್ಘಾಟನೆ



ಮೈಸೂರು, ಜು.28(ಎಸ್‌ಬಿಡಿ)– ಮೈಸೂರಿನ ಪ್ರತಿಷ್ಠಿತ ಸುಯೋಗ್ ಆಸ್ಪತ್ರೆಯಲ್ಲಿ ಮೆದುಳಿನ ಪಾರ್ಶ್ವವಾಯು ಚಿಕಿತ್ಸಾ ಘಟಕ(ಬ್ರೈನ್ ಸ್ಟ್ರೋಕ್ ಯೂನಿಟ್)ವನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗುರುವಾರ ಉದ್ಘಾಟಿಸಿದರು.

ಬಳಿಕ ಅವರು ಮಾತನಾಡಿ, ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಅಧ್ಯಕ್ಷ ಎಸ್.ಪಿ.ಯೋಗಣ್ಣನವರ ಸಾಧನೆಯನ್ನು ಮೆಚ್ಚಲೇಬೇಕು. ಕಾರ್ಪೋರೇಟ್ ಕಂಪನಿಗಳು ಆಸ್ಪತ್ರೆಗಳನ್ನು ನಡೆಸುತ್ತಿರುವ ಈ ಸ್ಪರ್ಧಾತ್ಮಕ ಸಂದರ್ಭದಲ್ಲಿ ಕೆ.ಆರ್.ನಗರದ ಪುಟ್ಟ ಗ್ರಾಮದಿಂದ ಬಂದಿರುವ ಡಾ.ಯೋಗಣ್ಣನವರು ಆಸ್ಪತ್ರೆ ತೆರೆದು ಈ ಮಟ್ಟಕ್ಕೆ ಬೆಳೆದಿರುವುದು ಶ್ಲಾಘನೀಯ. 400 ಬೆಡ್ ವ್ಯವಸ್ಥೆಯ ಆಸ್ಪತ್ರೆ ಆರಂಭಿಸುವುದೇ ಒಂದು ದೊಡ್ಡ ಸಾಧನೆ. ಅದರಲ್ಲೂ 'ಮೊದಲು ಚಿಕಿತ್ಸೆ, ನಂತರ ಹಣ' ಸಂಕಲ್ಪದೊಂದಿಗೆ ಆರೋಗ್ಯ ಸೇವೆ ನೀಡುತ್ತಿರುವುದು ಆದರ್ಶನೀಯ. ಆರೋಗ್ಯ ಸೇವೆ ಜೊತೆಗೆ 200 ಜನರಿಗೆ ಉದ್ಯೋಗವಕಾಶ ಕಲ್ಪಿತವಾಗಿದೆ. ವೈದ್ಯಕೀಯ ಸೇವೆ ವಿಸ್ತರಣೆಗೆ ಡಾ.ಯೋಗಣ್ಣನವರಿಗೆ ತಾಯಿ ಚಾಮುಂಡೇಶ್ವರಿ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಆಸ್ಪತ್ರೆಯ ಸುಸಜ್ಜಿತ ಬ್ರೈನ್ ಸ್ಟ್ರೋಕ್ ಯೂನಿಟ್ ಅನ್ನು ಮಾಜಿ ಸಿಎಂ ಕುಮಾರಸ್ವಾಮಿ ಅವರು ಉದ್ಘಾಟಿಸಿದ್ದು ನಮ್ಮ ಬಹುದಿನಗಳ ಸಂಕಲ್ಪ ಈಡೇರಿದೆ. ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರು, ವಿಧಾನಸೌಧ ನಿರ್ಮಿಸಿದ್ದು ಕೆಂಗಲ್ ಹನುಮಂತಯ್ಯನವರು, ವಿಕಾಸಸೌಧ ಕಟ್ಟಿದ್ದು ಎಸ್.ಎಂ.ಕೃಷ್ಣ ಅವರು ಹಾಗೆಯೇ ಕುಮಾರಸ್ವಾಮಿಯವರು ಸುವರ್ಣಸೌಧ ಕಟ್ಟಿದ್ದಾರೆ. ದೇಶದ ಜನಪ್ರಿಯ ಮುಖ್ಯಮಂತ್ರಿಯಾಗಿದ್ದ ಇವರು ಅದೇ ದಾರಿಯಲ್ಲಿ ನಡೆದಿದ್ದರೆ ಈವರೆಗೂ ಅವರನ್ನು ಯಾರೂ ಅಲುಗಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಹೆಂಗರುಳಿನ ಕುಮಾರಸ್ವಾಮಿ ಅವರು ಸ್ವಲ್ಪ ಕಠಿಣ ಹೃದಯಿಯೂ ಆಗಬೇಕು. ಅಚಾನಕ್ ಆಗಿ ಮುಖ್ಯಮಂತ್ರಿಯಾದವರು ನಾಲ್ಕೈದು ದಶಕಗಳ ಅನುಭವಿ ರಾಜಕಾರಣಿಗಿಂತ ಉತ್ತಮವಾಗಿ ಆಡಳಿತ ನೀಡಿದರು. ಬದ್ಧತೆ, ಹೃದಯವಂತಿಕೆ, ಕಾಳಜಿ ಇದ್ದವರಿಗೆ ಸಾಮರ್ಥ್ಯ ತಾನಾಗಿಯೇ ಬರುತ್ತದೆ ಎಂಬುದಕ್ಕೆ ಇವರೇ ಸಾಕ್ಷಿ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬ ಗ್ರಾಮೀಣ ಭಾಗದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅವಿಸ್ಮರಣೀಯ. ಬದ್ಧತೆಯ ರಾಜಕಾರಣಿ ಕುಮಾರಸ್ವಾಮಿ ತಮ್ಮ ತಂದೆ ದೇವೇಗೌಡರ ಅನುಕರಣೆಯೊಂದಿಗೆ ರಾಷ್ಟ್ರನಾಯಕರಾಗಿ ಬೆಳೆಯಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಉಪಾಧ್ಯಕ್ಷ ಸುಧಾಕರ್ ಶೆಟ್ಟಿ, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ನ್ಯೂರೋ ಸರ್ಜನ್ ಡಾ.ರಾಜೇಶ್, ತಜ್ಞ ವೈದ್ಯರಾದ ಡಾ.ಸುಹಾಸ್, ಡಾ.ರೂಪಾ ಶೇಷಾದ್ರಿ ಮತ್ತಿತರರು ಉಪಸ್ಥಿತರಿದ್ದರು.

### ಸುಳ್ಯದಲ್ಲಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ

# ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ಮೈಸೂರು,ಜು.28(ಪಿಎಂ)– ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಬಿಜೆಪಿ ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಹಂತಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹಂತಕರು ದೇಶದ್ರೋಹಿಗಳು ಎಂದು ಕಿಡಿಕಾರಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಮೇಯರ್ ಸಂದೇಶ ಸ್ವಾಮಿ, ಇಂದು ಹಿಂದೂ ಪರ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಬಗ್ಗೆ ಹಂತಕ ಸಮುದಾಯದವರು ಈ ರೀತಿಯ ಕ್ರೌರ್ಯ ಎಷ್ಟು ಸರಿ ಎಂದು ಯೋಚನೆ ಮಾಡಬೇಕು. ಈ ಹತ್ಯೆ ವಿರುದ್ಧ ಜಾತ್ಯಾತೀತ ಮತ್ತು ಧರ್ಮಾತೀತ ಹೋರಾಟ ನಡೆಯಬೇಕು. ಅಲ್ಪಸಂಖ್ಯಾತರು, ಹಿಂದುಳಿದವರು ಸೇರಿದಂತೆ ಎಲ್ಲರೂ ಈ ಹತ್ಯೆಯನ್ನು ಒಕ್ಕೊರಲಿನಿಂದ ಖಂಡಿಸಬೇಕು ಎಂದು ಮನವಿ ಮಾಡಿದರು.

ಎಷ್ಟೇ ಕಠಿಣ ಕಾನೂನು ಕ್ರಮ ಕೈಗೊಂಡರು ಹಾಗೂ ಮುನ್ನೆಚ್ಚರಿಕೆ ವಹಿಸಿದರೂ ಹಿಂದೂಪರ ಕಾರ್ಯಕರ್ತರ ಹತ್ಯೆ ನಡೆಯುತ್ತಲೇ ಇರುವುದು ದುರ್ದೈವ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಎನ್‌ಆರ್ ವಿಧಾನಸಭಾ ಕ್ಷೇತ್ರದ ನಮ್ಮ ಕಾರ್ಯಕರ್ತರು ಜಾಗೃತರಾಗಿ ಇರಬೇಕು ಎಂದು ಕೋರಿದರು. ಸರ್ಕಾರ ಹಂತಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ನಮ್ಮ ಸರ್ಕಾರ ಇದ್ದರೂ ಈ ಹತ್ಯೆ ನಡೆದಿರುವುದು ಆತಂಕಕಾರಿ. ಮೈಸೂರು ಸೇರಿದಂತೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ಹಂತಕರು ಅಡಗಿ ಕುಳಿತಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಮೈಸೂರಿನ ಗಾಂಧಿಚೌಕದಲ್ಲಿ ಬಿಜೆಪಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಪ್ರವೀಣ್ ಹತ್ಯೆ ಹಿನ್ನೆಲೆಯಲ್ಲಿ ಬೇಸತ್ತು ಎನ್‌ಆರ್ ಕ್ಷೇತ್ರದ ಪಕ್ಷದ ಕಾರ್ಯಕರ್ತರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಅವರ ನೋವು ನನಗೆ ಅರ್ಥವಾಗುತ್ತದೆ ರಾಜೀನಾಮೆ ನೀಡಿರುವ ಎಲ್ಲರೂ ಹಿಂಪಡೆಯಬೇಕು ಎಂದು ಕೋರಿದರು.

ಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್ ಮಾತನಾಡಿ, ಇಂದು ಅತ್ಯಂತ ನೋವಿನಿಂದ ಇಲ್ಲಿ ಸೇರಿದ್ದೇವೆ. ಒಂದು ಸತ್ಯ ಸಂಗತಿಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಪ್ರವೀಣ್ ಕೊಲೆ ಕೇವಲ ಬಿಜೆಪಿ ಮುಖಂಡ ಎನ್ನುವ ಕಾರಣಕ್ಕೆ ನಡೆದಿಲ್ಲ. ಒಬ್ಬ ಹಿಂದೂ ಕೊಲೆ ಮೂಲಕ ಹಿಂದೂಪರ ಹೋರಾಟ ಹತ್ತಿಕ್ಕಬೇಕು ಎಂಬ ಉದ್ದೇಶ ಇಲ್ಲಿ ಅಡಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಬಿಜೆಪಿಯಲ್ಲಿ ಒಂದು ಸಿದ್ಧಾಂತಕ್ಕೆ ಬದ್ಧವಾಗಿ ಕಾರ್ಯಕರ್ತರು ಹಿಂದೂ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಹಿಂದೂಪರವಾಗಿ ಹೋರಾಟ ಮಾಡುವವರ ಹತ್ಯೆಗಳು ಆಗಾಗ್ಗೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಕಾರ್ಯಕರ್ತರಲ್ಲಿ ಆಕ್ರೋಶವಿದೆ. ಹಾಗಾಗಿ ಈ ಹತ್ಯೆಯಿಂದ ಬೇಸತ್ತು ಎನ್‌ಆರ್ ಕ್ಷೇತ್ರದ ಯುವ ಮೋರ್ಚಾದ ಏಳೆಂಟು ಮಂದಿ ವಿವಿಧ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಅವರ ಮನವೊಲಿಸಿ ಮತ್ತೆ ಅದೇ ಸ್ಥಾನಗಳಲ್ಲಿ ಮುಂದುವರೆಯುವಂತೆ ಮಾಡುತ್ತೇವೆ ಎಂದು ತಿಳಿಸಿದರು.

> “ಮೈಸೂರಿನಲ್ಲಿ ಶನಿವಾರ (ಜು.30) ಬೃಹತ್ ಪ್ರತಿಭಟನೆ ನಡೆಸಲಿದ್ದೇವೆ. ಬೇರೆ ಪಕ್ಷಗಳ ಎಲ್ಲಾ ಹಿಂದೂ ಬಾಂಧವರು ಈ ಹತ್ಯೆ ಖಂಡಿಸಿ ಪ್ರತಿಭಟನೆ ನಡೆಸಬೇಕು. ಪ್ರವೀಣ್ ಹತ್ಯೆಯು ಮತೀಯ ಸಂಘರ್ಷ. ಹಂತಕರು ಭಯೋತ್ಪಾದಕರ ಸಂಪರ್ಕ ಸೇರಿದಂತೆ ಬೇರೆ ಬೇರೆ ಸಮಾಜಘಾತುಕ ಶಕ್ತಿಗಳೊಂದಿಗೂ ಸಂಪರ್ಕ ಹೊಂದಿರಬಹುದು. ಹಾಗಾಗಿ ಈ ವಿಚಾರದಲ್ಲಿ ಮೃದು ಧೋರಣೆ ತಾಳದೇ ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ಪ್ರಕರಣ ಒಪ್ಪಿಸಲು ಮುಖ್ಯಮಂತ್ರಿಗಳು, ಗೃಹ ಸಚಿವರು ಶೀಘ್ರವೇ ಕ್ರಮ ಕೈಗೊಳ್ಳಬೇಕು.
>
> –ಶಿವಕುಮಾರ್, ಪಾಲಿಕೆ ಆಡಳಿತ ಪಕ್ಷದ ನಾಯಕ.

ನಮ್ಮ ಗಡಿ ಪ್ರದೇಶಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್‌ಗೆ ಕ್ರಮ ಕೈಗೊಳ್ಳಬೇಕು. ಆ ಮೂಲಕ ಸಮಾಜಘಾತುಕ ಶಕ್ತಿಗಳನ್ನು ಮಟ್ಟ ಹಾಕಿ, ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂಬುದು ನಮ್ಮ ಪ್ರತಿಭಟನೆ ಒತ್ತಾಯವಾಗಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಪಾಲಿಕೆ ಬಿಜೆಪಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ಪ್ರಮೀಳಾ ಭರತ್, ರಂಗಸ್ವಾಮಿ, ಡಾ.ಅಶ್ವಿನಿ, ನಾಮನಿರ್ದೇಶಿತ ಸದಸ್ಯರಾದ ರಮೇಶ್, ಜಗದೀಶ್, ಮುಖಂಡರಾದ ಬಿ.ಎಂ.ರಘು, ಜಯಪ್ರಕಾಶ್ (ಜೆಪಿ), ಗಿರಿಧರ್, ಜೋಗಿ ಮಂಜು, ಸು.ಮುರಳಿ, ಡಾ.ಅನಿಲ್ ಥಾಮಸ್, ಕುಮಾರ್‌ಗೌಡ ಮತ್ತಿತರ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ವಿದ್ಯಾರ್ಥಿನಿಯರು ಹಡೆದವರ ಆಸೆ, ಆಕಾಂಕ್ಷೆ ಈಡೇರಿಸಬೇಕು

- ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು
- ಬಾಲಕಿಯರ ಹಾಸ್ಟೆಲ್ ಉದ್ಘಾಟನೆ
- ಗುರಿಯೊಂದಿಗೆ ಚೆನ್ನಾಗಿ ಓದಿ; ವಿಧಾನಪರಿಷತ್ ಸದಸ್ಯ ಮಂಜೇಗೌಡರ ಸಲಹೆ

ಮೈಸೂರು.ಜು.28(ಎಂಟಿವೈ)– ವಿದ್ಯಾರ್ಥಿನಿಯರು ಶಿಕ್ಷಣದೊಂದಿಗೆ ಪ್ರದರ್ಶಕ ಕಲೆಗಳ ಬಗ್ಗೆಯೂ ಆಸಕ್ತಿ ಬೆಳೆಸಿಕೊಂಡು, ಸಾಧನೆ ಮಾಡುವತ್ತ ಗಮನ ಹರಿಸುವಂತೆ ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿನಿಯರು ಓದಿನೊಂದಿಗೆ ಪ್ರದರ್ಶಕ ಕಲೆಗಳಾದ ಸಂಗೀತ, ಕಲೆ, ಭರತನಾಟ್ಯ ಕಲಿಯಲು ಮುಂದಾಗಬೇಕು. ಇದರೊಂದಿಗೆ ಯೋಗ, ಧ್ಯಾನ ಮಾಡುವ ಹವ್ಯಾಸ ಬೆಳೆಸಿಕೊಂಡು ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ತಂದೆ–ತಾಯಿಗೆ, ಶಾಲೆಗೆ ಜೊತೆಗೆ ಶಿಕ್ಷಕರು, ನಾಡಿಗೆ ಕೀರ್ತಿ ತರಬೇಕು. ಪೋಷಕರು ನಿಮ್ಮನ್ನು ಡಾಕ್ಟರ್, ಇಂಜಿನಿಯರ್ ಆಗಬೇಕೆಂಬ ಕನಸನ್ನು ಕಟ್ಟಿಕೊಂಡು ಓದಲು ಕಳುಹಿಸಿದ್ದಾರೆ. ಇಲ್ಲಿ ಎಲ್ಲರೂ ಒಂದೇ ಕುಟುಂಬದವರಂತೆ, ಅಕ್ಕತಂಗಿಯರೆಂದು ಭಾವಿಸಿ, ಯಾವುದೇ ಜಾತಿ, ಭೇದ ಮಾಡದೆ ಹಾಸ್ಟೆಲ್ ಮುಂದೆ ಕೈತೋಟ, ಹೂವಿನಗಿಡ ನೆಟ್ಟು ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಪ್ರತಿಯೊಬ್ಬರನ್ನು ಮಾನವೀಯತೆಯಿಂದ ನೋಡಬೇಕು. ಪ್ರೀತಿಯಿಂದ ಬದುಕಬೇಕು. ಬಸವಣ್ಣ, ಶರಣರ, ವಿದ್ವಾಂಸರ ಬಗ್ಗೆ ಚೆನ್ನಾಗಿ ಓದಿ, ತಿಳಿದುಕೊಳ್ಳಬೇಕು. ನಾನು ಜಿಲ್ಲಾ ಪಂಚಾಯತ್ ಅಧ್ಯಕ್ಷನಾಗಿದ್ದಾಗ ವಾರ್ಡನ್‌ಗಳಿಗೆ ಸ್ವಾಮೀಜಿಗಳನ್ನು ಕರೆಸಿ ತರಬೇತಿ ಕಾರ್ಯಾಗಾರ ಆಯೋಜಿಸುತ್ತಿದ್ದೆ. ಎಲ್ಲರೂ ಚೆನ್ನಾಗಿ ಓದಿ ನಿಮ್ಮ–ನಿಮ್ಮ ಬದುಕನ್ನು ಕಟ್ಟಿಕೊಂಡು, ಉತ್ತಮ ಪ್ರಜೆಗಳಾಗಬೇಕು ಎಂದು ತಿಳಿಸಿದರು.



ಇದೇ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ತಳಮಟ್ಟದ ಜನರ ಮಕ್ಕಳು ಸಹ ಚೆನ್ನಾಗಿ ಓದಿ ಆರ್ಥಿಕವಾಗಿ ಸಬಲರಾಗಿ, ಸಮಾಜದಲ್ಲಿ ಮುಖ್ಯವಾಹಿನಿಗೆ ಬರಬೇಕೆಂಬ ಆಶಯದೊಂದಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಿದರು. ಆ ಇಲಾಖೆ ಮೂಲಕ ರಾಜ್ಯದಾದ್ಯಂತ ಹಾಸ್ಟೆಲ್‌ಗಳನ್ನು ನಿರ್ಮಿಸಿದರು. ಆದರೆ ಸರ್ಕಾರ ನಿಮಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟರು ಸಹ ನೀವು ಉತ್ತಮ ಅಂಕಗಳನ್ನು ಪಡೆಯುತ್ತಿಲ್ಲ. ಪರೀಕ್ಷೆಗಳಲ್ಲಿ ರ‍್ಯಾಂಕ್ ಪಡೆಯುತ್ತಿಲ್ಲವೇಕೆ? ಎಂದು ಪ್ರಶ್ನಿಸಿದರು.

ಮೈಸೂರು ಜಿಲ್ಲೆಯಲ್ಲಿ 93 ಹಾಸ್ಟೆಲ್‌ಗಳಿದ್ದು, ಅವುಗಳ ನಿರ್ವಹಣೆಗೆ ಸರ್ಕಾರ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದೆ. ನೀವು ಮುಂದಿನ ಭವ್ಯ ಭಾರತದ ಪ್ರಜೆಗಳಾಗಬೇಕು. ಚೆನ್ನಾಗಿ ಓದಿ ಕೆಎಎಸ್, ಐಎಎಸ್, ಐಪಿಎಸ್ ಸೇರಿದಂತೆ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ, ಅಧಿಕಾರಿಗಳಾಗಿ ಸಾರ್ವಜನಿಕ ಸೇವೆಗೆ ಬರಬೇಕು. ಆಗ ತಂದೆ–ತಾಯಿಗೆ ಸಂತೋಷವಾಗುತ್ತದೆ. ನೀವು ಸಮಾಜದ ಆಸ್ತಿ ಆಗುತ್ತೀರಿ, ಅಂಬೇಡ್ಕರ್ ಸಂವಿಧಾನದಲ್ಲಿ ಹೇಳಿರುವಂತೆ ಪ್ರತಿಯೊಬ್ಬರಿಗೂ ಶಿಕ್ಷಣ ಸಿಗಬೇಕು. ನಾನು ಸಹ ಹಾಸ್ಟೆಲ್‌ನಲ್ಲಿದ್ದು ಶಿಕ್ಷಣ ಪಡೆದಿದ್ದೆ. ಈಗ ಶಾಸಕನಾಗಿದ್ದೇನೆ. ಆದ್ದರಿಂದ ನೀವುಗಳು ಜೀವನದಲ್ಲಿ ಗುರಿ ಇಟ್ಟುಕೊಂಡು ಚೆನ್ನಾಗಿ ಓದಿ ಸಾಧನೆ ಮಾಡಬೇಕು. ದೇವರಾಜ ಅರಸುರವರ ಕನಸ್ಸನ್ನು ನನಸು ಮಾಡಬೇಕು ಎಂದರು.

ಸಮಾರಂಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್. ಬಿಂದ್ಯಾ ಸ್ವಾಗತಿಸಿದರು. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಹೆಚ್.ಬಿ. ಸತೀಶ್, ಸಹಾಯಕ ಇಂಜಿನಿಯರ್ ಕೆ.ಎಸ್. ರಮೇಶ್, ಬೋಗಾದಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿ ಶ್ಯಾಮಸುಂದರ್, ತಾಲ್ಲೂಕು ಕಲ್ಯಾಣ ಅಧಿಕಾರಿಗಳಾದ ಚಂದ್ರಕಲಾ, ವಿಶ್ವನಾಥ್, ಸ್ವರ್ಣಲತಾ, ಮಹೇಶ್, ಪ್ರೇಮ್‌ಕುಮಾರ್, ಸತೀಶ್, ಮೀನಾ, ಕಚೇರಿ ವ್ಯವಸ್ಥಾಪಕ ದೀಪಕ್ ಹಾಜರಿದ್ದರು. ಮಹಾಲಕ್ಷ್ಮಿ ನಿರೂಪಿಸಿದರು. ಎಲ್ಲಾ ನಿಲಯಪಾಲಕರು ಹಾಜರಿದ್ದರು.

## ರಾಜಸ್ಥಾನದಲ್ಲಿ ಯುದ್ಧ ವಿಮಾನ ಪತನ: ಇಬ್ಬರು ಪೈಲಟ್‌ಗಳು ದುರ್ಮರಣ

ರಾಜಸ್ಥಾನ: ಭಾರತೀಯ ವಾಯುಪಡೆಗೆ ಸೇರಿದ ಯುದ್ಧ ವಿಮಾನವೊಂದು ರಾಜಸ್ಥಾನದ ಬಾರ್ಮರ್ ಜಿಲ್ಲೆಯಲ್ಲಿ ಪತನಗೊಂಡಿದ್ದು, ಇಬ್ಬರು ಪೈಲಟ್‌ಗಳು ದುರಂತ ಅಂತ್ಯಕಂಡಿದ್ದಾರೆ. 'ಮಿಗ್ –21' ಹೆಸರಿನ ಯುದ್ಧ ವಿಮಾನ ರಾಜಸ್ಥಾನದಲ್ಲಿ ಗುರುವಾರ ರಾತ್ರಿ ಪತನಗೊಂಡಿದ್ದು, ಕ್ಷಣಾರ್ಧದಲ್ಲೇ ಬೆಂಕಿ ಹೊತ್ತಿಕೊಂಡಿದೆ. ವಿಮಾನದ ಅವಶೇಷಗಳು ಒಂದು ಕಿಲೋ ಮೀಟರ್ ದೂರದವರೆಗೂ ಹರಡಿವೆ ಎಂದು ತಿಳಿದು ಬಂದಿದೆ.

ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಮತ್ತು ವಾಯುಪಡೆ ಅಧಿಕಾರಿಗಳು ದೌಡಾಯಿಸಿದ್ದು, ಬೆಂಕಿ ನಂದಿಸುವ ಕಾರ್ಯ ಮುಂದುವರಿದೆ.

## ನಾಳೆ ವಿಶೇಷ ಪೂಜೆ

ಮೈಸೂರು, ಜು.28– ನಗರದ ವೀರನಗೆರೆ, ಸಂತ ಫಿಲೋಮಿನಾ ಚರ್ಚ್ ಹಿಂಭಾಗವಿರುವ ಶ್ರೀಶನೇಶ್ವರಸ್ವಾಮಿ ಸನ್ನಿಧಿಯಲ್ಲಿ ಜು.30ರಂದು ಸ್ವಾಮಿಗೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 7.30ಕ್ಕೆ ಕಳಸ ಸ್ಥಾಪನೆ, ಗಣಪತಿ ಪೂಜೆ, ಶ್ರೀಶನೇಶ್ವರಸ್ವಾಮಿ ಪೂಜೆ, ನವಗ್ರಹ ಪೂಜೆ, ಪುಣ್ಯಾಹ, ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ. ರಾತ್ರಿ 8.30ಕ್ಕೆ 'ರಾಜವಿಕ್ರಮ ಅಥವಾ ಶ್ರೀಶನೇಶ್ವರಸ್ವಾಮಿ ಮಹಾತ್ಮೆ ಪೌರಾಣಿಕ ನಾಟಕ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ನನ್ನ ಮಕ್ಕಳು ಅವರಿಗಿಷ್ಟ ಬಂದ ಪಕ್ಷದಿಂದ ಸ್ಪರ್ಧಿಸಲು ಸ್ವತಂತ್ರರು

### ಮಾಜಿ ಶಾಸಕ ವಾಸು ಸ್ಪಷ್ಟನೆ

ಮೈಸೂರು, ಜು.28(ಜಿಎ)– ನನ್ನ ಮಕ್ಕಳು ಚುನಾವಣೆಯಲ್ಲಿ ಸ್ಪರ್ಧಿಸುವುದು ಅವರ ವೈಯಕ್ತಿಕ ವಿಚಾರ. ಅವರಿಷ್ಟದ ಪಕ್ಷದ ಮೂಲಕ ಸ್ಪರ್ಧೆ ಮಾಡುವುದಕ್ಕೂ ಅವರಿಗೆ ಸ್ವಾತಂತ್ರ್ಯವಿದೆ ಎಂದು ಮಾಜಿ ಶಾಸಕ ವಾಸು ಹೇಳಿದರು.

ಕಾರ್ಯಕ್ರಮವೊಂದರಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಚಾಮರಾಜ ಕ್ಷೇತ್ರದಲ್ಲಿ ಸ್ಪರ್ಧಿಸಲು ಇತರೆ ಆಕಾಂಕ್ಷಿಗಳ ಜೊತೆಗೆ ತಮ್ಮ ಪುತ್ರರ ಹೆಸರು ಕೇಳಿ ಬರುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಎಲ್ಲಾ ಕ್ಷೇತ್ರಗಳಿಗೂ ಆಕಾಂಕ್ಷಿಗಳಿದ್ದಾರೆ. ಅಂತೆಯೇ ಇಲ್ಲಿಯೂ ಚಾಲ್ತಿಯಲ್ಲಿರುವವರು ಮತ್ತು ಚಾಲ್ತಿಯಲ್ಲಿಲ್ಲದವರು ಸಹ ಇದ್ದಾರೆ. ಚುನಾವಣೆ ಒಂದು ತಿಂಗಳು ಎಂಬಂತೆ ಎಲ್ಲರೂ ಹೊರಗೆ ಬರುತ್ತಾರೆ. ಮಕ್ಕಳು ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ ಎಂದರೆ ನಾನು ಏಕೆ ಬೇಡ ಎಂದು ಹೇಳಲಿ. ಮಕ್ಕಳು ಬೆಳೆದಿದ್ದಾರೆ. ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದು ಅವರ ವೈಯಕ್ತಿಕ ವಿಚಾರವಾಗಿದೆ ಎಂದರು.



ಕಾಂಗ್ರೆಸ್ ಪಕ್ಷದಿಂದ ನಾನು ಖಂಡಿತವಾಗಿ ಸ್ಪರ್ಧಿಸುತ್ತೇನೆ. ಅವರು ಯಾವುದೇ ಪಕ್ಷದಿಂದಲಾದರೂ ಸ್ಪರ್ಧಿಸಬಹುದು. ಅದು ಅವರ ನಿರ್ಧಾರ, ಅದಕ್ಕೆ ನಾನು ಅಡ್ಡಿಪಡಿಸುವುದಿಲ್ಲ. ನಾವು ಮನೆಯಲ್ಲಿ ರಾಜಕೀಯದ ಬಗ್ಗೆ ಚರ್ಚಿಸುವುದಿಲ್ಲ ಎಂದ ಅವರು, ಈ ಹಿಂದೆ ಮೈಸೂರಿನಲ್ಲಿಯೇ ಗಂಡ, ಹೆಂಡತಿ ಬೇರೆ ಬೇರೆ ಪಕ್ಷದ ಮೂಲಕ ಸ್ಪರ್ಧಿಸಿರುವ ದಾಖಲೆಯೂ ಇದೆ. ಈವರೆಗೂ ನಮ್ಮ ಮಕ್ಕಳು ಸಮಾಜಕ್ಕೆ ವಿರುದ್ಧವಾಗಿ ನಡೆದುಕೊಂಡಿಲ್ಲ. ಮುಂದೆಯು ಹಾಗೇ ಇರುತ್ತಾರೆ ಎಂಬ ಆಶಯವಿದೆ ಎಂದರು. ಸಿದ್ದರಾಮೋತ್ಸವದಲ್ಲಿ ನೀವು ಭಾಗವಹಿಸುತ್ತೀರಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಖಂಡಿತವಾಗಿ ಭಾಗವಹಿಸುತ್ತೇನೆ. ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ನನ್ನ ಬಗ್ಗೆ ಅಪಾರ್ಥ ಮಾಡಿಕೊಂಡಿದ್ದರು. ಆಮೇಲೆ ನಾನೇ ಅವರ ಜೊತೆ ಮಾತನಾಡಿ ಸರಿಪಡಿಸಿದೆ. ಈ ರೀತಿಯ ಸಣ್ಣ ಪುಟ್ಟ ಅಪಾರ್ಥಗಳು ಸರ್ವೇ ಸಾಮಾನ್ಯ ಎಂದರು.

## ಮೈಸೂರಲ್ಲಿ ದಂತ ವೈದ್ಯ ಆತ್ಮಹತ್ಯೆ

ಮೈಸೂರು, ಜು.28(ಜಿಎ)– ದಂತ ವೈದ್ಯ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜೆಪಿ ನಗರದಲ್ಲಿ ಗುರುವಾರ ನಡೆದಿದೆ. ಜೆಪಿನಗರದ ನಿವಾಸಿ ಡಾ.ಎಂ.ಪಿ. ರವಿಕುಮಾರ್(40) ಆತ್ಮಹತ್ಯೆ ಮಾಡಿಕೊಂಡವರು.




ಇವರು ನಗರದ ಸರಸ್ವತಿಪುರಂನಲ್ಲಿ ಸ್ವಂತ ಡೆಂಟಲ್ ಕ್ಲಿನಿಕ್ ಹೊಂದಿದ್ದರು. ಇಂದು ಬೆಳಗ್ಗೆ 11.30 ವೇಳೆಗೆ ಅವರ ತಂದೆ–ತಾಯಿ ದೇವಾಲಯಕ್ಕೆ ತೆರಳಿದ್ದು, ಮನೆಯಲ್ಲಿ ಅವರೊಬ್ಬರೇ ಇದ್ದರು. ದೇವಸ್ಥಾನಕ್ಕೆ ಹೋದವರು ವಾಪಸ್ ಮನೆಗೆ 1 ಗಂಟೆಗೆ ಬಂದಾಗ ಅವರ ಮಗ ಬಾಗಿಲು ತೆಗೆದಿಲ್ಲ. ಅನುಮಾನದಿಂದ ಕಿಟಕಿ ಮೂಲಕ ನೋಡಿದಾಗ ಮನೆಯ ವರಾಂಡದಲ್ಲಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಕಂಡು ಬಂದಿದೆ. ಎರಡು ವರ್ಷಗಳ ಹಿಂದೆ ಅವರ ಪತ್ನಿ ಮಗುವಿನೊಂದಿಗೆ ದೂರಾಗಿದ್ದಾರೆ. ಇದರಿಂದ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣವನ್ನು ವಿದ್ಯಾರಣ್ಯಪುರಂ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದು, ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ.

## ಕಬಿನಿ ಜಲಸ್ಥಾವರದಲ್ಲಿ ಹೊಸ ಯಂತ್ರೋಪಕರಣ ಅಳವಡಿಸಲು ನಿರ್ಧಾರ

- ಶಾಸಕ ರಾಮದಾಸ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಣಯ
- ವಾರದಲ್ಲಿ ಕೆ.ಆರ್.ಕ್ಷೇತ್ರದ ನೀರಿನ ಸಮಸ್ಯೆ ನಿವಾರಣೆ

ಮೈಸೂರು,ಜು.28(ಎಂಟಿವೈ)– ಮೈಸೂರಿಗೆ ಕುಡಿಯುವ ನೀರು ಪೂರೈಸುವ ಕಬಿನಿ ಪಂಪಿಂಗ್ ಕೇಂದ್ರದಲ್ಲಿ ಪದೇ ಪದೆ ಯಂತ್ರಗಳು ಕೈಕೊಡುತ್ತಿರುವ ಹಿನ್ನೆಲೆಯಲ್ಲಿ ಕೋಟಿ ರೂ. ವೆಚ್ಚದಲ್ಲಿ ಹೊಸ ಯಂತ್ರಗಳನ್ನು ಅಳವಡಿಸಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ಮೇಯರ್ ಸುನಂದಾ ಪಾಲನೇತ್ರ, ಉಪಮೇಯರ್ ಅನ್ವರ್ ಬೇಗ್, ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾಲಿಕೆ ಸದಸ್ಯರ ತುರ್ತು ಸಭೆ ನಡೆಸಿ, ಕೆ.ಆರ್.ಕ್ಷೇತ್ರದ ಹಲವೆಡೆ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ತುರ್ತಾಗಿ ಕಬಿನಿ ಜಲಸ್ಥಾವರದಲ್ಲಿ ಹೊಸ ಯಂತ್ರೋಪಕರಣ ಅಳವಡಿಸುವ ಸಂಬಂಧ ನಿರ್ಣಯ ಅಂಗೀಕರಿಸಲಾಯಿತು. ಬಳಿಕ ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ಕಬಿನಿ ಕುಡಿಯುವ ನೀರು ಸರಬರಾಜು ಕೇಂದ್ರದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಳ್ಳುತ್ತಿದೆ. ಇದರಿಂದ ಒಂದು ವಾರದಿಂದ ಕೆ.ಆರ್. ಕ್ಷೇತ್ರದ ಹಲವು ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ಇದರ ನಿವಾರಣೆಗೆ ಈಗಾಗಲೇ ಎರಡು ಬಾರಿ ಸಭೆ ನಡೆಸಲಾಗಿದೆ. ಸಮಸ್ಯೆ ಬಗೆಹರಿಸಲು ಸಾಕಷ್ಟು ಬಾರಿ ಪ್ರಯತ್ನಿಸಿದರೂ ತಾಂತ್ರಿಕ ದೋಷ ಪದೇ ಪದೆ ಕಾಣಿಸಿಕೊಳ್ಳುತ್ತಲೇ ಇದೆ. ಹೀಗಾಗಿ ಹೊಸದಾಗಿ ಯಂತ್ರೋಪಕರಣಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ವಾರದೊಳಗಾಗಿ ಈ ಕಾರ್ಯ ಪೂರ್ಣಗೊಳಿಸಲು ಸೂಚಿಸಿರುವುದಾಗಿ ತಿಳಿಸಿದರು.



ಹೊಸ ಯಂತ್ರೋಪಕರಣ ಅಳವಡಿಕೆ ನಂತರ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ಕ್ಷೇತ್ರಾದ್ಯಂತ ಆ.15 ರೊಳಗಾಗಿ ಸಂಪೂರ್ಣವಾಗಿ ಬೋರ್‌ವೆಲ್ ಸ್ಥಗಿತಗೊಳಿಸಿ ಶುದ್ಧವಾದ ಕಬಿನಿ ಕುಡಿಯುವ ನೀರನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. 75ನೇ ಸ್ವಾತಂತ್ರ್ಯ ದಿನಾಚರಣೆ 'ಶುದ್ಧ ಕುಡಿಯುವ ನೀರಿನ ಪೂರೈಕೆ'ಯೊಂದಿಗೆ ಆಚರಿಸಲು ನಿರ್ಧರಿಸಲಾಗಿದೆ. ಬೋರ್‌ವೆಲ್ ನೀರನ್ನು ಉದ್ಯಾನವನಗಳಿಗೆ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ನೂತನವಾಗಿ ಅಳವಡಿಸಿರುವ ನೀರಿನ ಮೀಟರ್‌ಗಳಲ್ಲಿ ಅತೀ ಹೆಚ್ಚು ಬಿಲ್ ಬರುತ್ತಿದೆ ಎಂದು ನಗರಪಾಲಿಕೆ ಸದಸ್ಯರು ಸಭೆಯಲ್ಲಿ ದೂರಿದರು. ಈ ಸಮಸ್ಯೆಯನ್ನು ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನೀರಿನ ಬಿಲ್ ಪಾವತಿಸದೇ ಇರುವ ಗ್ರಾಹಕರಿಗೆ ಬಡ್ಡಿ ಮನ್ನಾ ಮಾಡಿ, ನೀರಿನ ಬಿಲ್ ಪಾವತಿಸಲು ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕ್ಯಾಬಿನೆಟ್‌ನಲ್ಲಿ ವಿಷಯವನ್ನು ಮಂಡಿಸಿ, ಅನುಕೂಲ ಮಾಡಿಕೊಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಪಾಲಿಕೆಯ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಪಾಲಿಕೆ ಸದಸ್ಯರುಗಳಾದ ಬಿ.ವಿ.ಮಂಜುನಾಥ್, ಗೀತಾ ಶ್ರೀಯೋಗನಂದ್, ಚಂಪಕ, ಪಲ್ಲವಿ ಬೇಗಂ, ಶೋಭಾ ಸುನೀಲ್ ಹಾಗೂ ಜಲ ಮಂಡಳಿ ಅಧಿಕಾರಿಗಳು, ಚೆಸ್ಕಾಂ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು, ನಗರಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ದೇಶದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ 'ವಿಕ್ರಾಂತ್' ನೌಕಾಪಡೆಗೆ ಸೇರ್ಪಡೆ

ನವದೆಹಲಿ, ಜು.28–ದೇಶ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದು ಇದೇ ಸಮಯದಲ್ಲಿ ದೇಶದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ INS 'ವಿಕ್ರಾಂತ್' ಅನ್ನು ಗುರುವಾರ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ.

ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ (CSL) ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆಯನ್ನು ಗುರುವಾರ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಿದೆ. ನೌಕಾಪಡೆಯ ಆಂತರಿಕ ನೌಕಾ ವಿನ್ಯಾಸ ನಿರ್ದೇಶನಾಲಯದಿಂದ ವಿನ್ಯಾಸಗೊಳಿಸಲ್ಪಟ್ಟ ಮತ್ತು ಅಖಐ ನಿರ್ಮಿಸಿದ ವಿಮಾನವಾಹಕ ನೌಕೆಗೆ 1971ರ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಭಾರತದ ಮೊದಲ ವಿಮಾನವಾಹಕ ನೌಕೆ ವಿಕ್ರಾಂತ್ ಹೆಸರನ್ನೇ ನಾಮಕರಣ ಮಾಡಲಾಗಿದೆ. ವಿಕ್ರಾಂತ್ ವಿತರಣೆಯೊಂದಿಗೆ, ಭಾರತವು ಸ್ಥಳೀಯವಾಗಿ ವಿಮಾನವಾಹಕ ನೌಕೆಯನ್ನು ವಿನ್ಯಾಸಗೊಳಿಸುವ ಮತ್ತು ನಿರ್ಮಿಸುವ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪನ್ನು ಸೇರಿಕೊಂಡಿದೆ.

ಒಂದನೇ ಪುಟದಿಂದ

## ಬಂಪರ್ ಕೊಡುಗೆ

ಕಲ್ಪಿಸಿದಂತಾಗುತ್ತದೆ ಎಂದರು. ನೇಕಾರರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, 10 ರಿಂದ 12 ಸಾವಿರ ಮಕ್ಕಳಿಗೂ ಈ ಯೋಜನೆಯ ಲಾಭ ದೊರೆಯಲಿದೆ. ಟ್ಯಾಕ್ಸಿ ಚಾಲಕರ ಮಕ್ಕಳಿಗೂ ವಿದ್ಯಾನಿಧಿ ಯೋಜನೆಯನ್ನು ವಿಸ್ತರಿಸಲಾಗಿದ್ದು, 50,000 ಟ್ಯಾಕ್ಸಿ ಚಾಲಕರ ಮಕ್ಕಳಿಗೆ ಈ ಯೋಜನೆಯ ಲಾಭ ದೊರೆಯಲಿದೆ.

ಮೀನುಗಾರರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯನ್ನು ವಿಸ್ತರಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಸಂಬಂಧಿಸಿ ಸರ್ಕಾರದ ಆದೇಶ ಹೊರಡಿಸಲಾಗಿದ್ದು, ಅನುದಾನದ ವ್ಯವಸ್ಥೆಯನ್ನೂ ಮಾಡಲಾಗಿದೆ. ವಿದ್ಯಾನಿಧಿ ಯೋಜನೆಗಳಿಗೆ ಇಂದು ಚಾಲನೆ ನೀಡಲಾಗಿದೆ ಎಂದರು. ಪರಿಶಿಷ್ಟ ಜಾತಿ, ಪಂಗಡದ ಬಡ ಕುಟುಂಬಗಳಿಗೆ ಉಚಿತವಾಗಿ 75 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಯೋಜನೆಯಡಿ ಡಿಬಿಟಿ ವರ್ಗಾವಣೆ ಇಂದಿನಿಂದ ಪ್ರಾರಂಭವಾಗಲಿದೆ. ಸುಮಾರು 25 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ. ಇದಕ್ಕಾಗಿ 700 ಕೋಟಿ ರೂ. ಒದಗಿಸಲಾಗಿದೆ.

ಬಾಬು ಜಗಜೀವನ್ ರಾಂ ಹೆಸರಿನಲ್ಲಿ ಸ್ವಯಂ ಉದ್ಯೋಗ ಯೋಜನೆ ಆರಂಭಿಸಿದ್ದು, ಪ್ರತಿಯೊಂದು ಕ್ಷೇತ್ರದಲ್ಲಿ 100 ಪರಿಶಿಷ್ಟ ಜಾತಿ/ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ನೀಡುವ ಯೋಜನೆಗೆ ಚಾಲನೆ ನೀಡಲಾಗಿದೆ. ಶಿಕ್ಷಣ ಹಾಗೂ ಅದರ ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, 'ವಿವೇಕ' ಯೋಜನೆಯಡಿ ಮೊದಲ ಬಾರಿಗೆ 8000 ಶಾಲಾ ಕೊಠಡಿಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗುವುದು.

ರಾಜ್ಯದ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಣಗೊಳಿಸುವ ಯೋಜನೆಗೆ ಚಾಲನೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 71 ಪಿಹೆಚ್‌ಸಿಗಳನ್ನು ರಾಜ್ಯದ ಸರಾಸರಿಗಿಂತ ಕಡಿಮೆ ಸೂಚ್ಯಂಕ ಇರುವ ಪ್ರದೇಶಗಳಲ್ಲಿ ಸ್ಥಾಪಿಸಲಾಗುವುದು. ಸ್ತ್ರೀಶಕ್ತಿ ಸಂಘಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಉತ್ತೇಜನ ನೀಡುವ ನಿಟ್ಟಿನಲ್ಲಿ 1.50 ಲಕ್ಷ ರೂ. ನೀಡುವ ಜೊತೆಗೆ ಸುಲಭವಾಗಿ ಸಾಲ ಸೌಲಭ್ಯ ಒದಗಿಸಲು ಆಂಕರ್ ಬ್ಯಾಂಕ್ ಜೋಡಣೆ, ತರಬೇತಿ, ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ನೀಡುವ 'ಸ್ತ್ರೀ ಸಾಮರ್ಥ್ಯ ಯೋಜನೆ' ಗೆ ಚಾಲನೆ ನೀಡಲಾಗಿದೆ. ಸುಮಾರು 5 ಲಕ್ಷ ಮಹಿಳೆಯರ ಸ್ವಾವಲಂಬನೆಗೆ ಎಂಡ್ ಟು ಎಂಡ್ ನೆರವು ನೀಡಲಾಗುತ್ತಿದೆ. ಗೋವುಗಳ ಸಂರಕ್ಷಣೆಯಲ್ಲಿ ಜನರ ಪಾಲುದಾರಿಕೆಯನ್ನು ಉತ್ತೇಜಿಸಲು ಪುಣ್ಯಕೋಟಿ ದತ್ತು ಯೋಜನೆ ಜಾರಿ. ಈ ಯೋಜನೆಗೆ ಸಂಬಂಧಿಸಿದ ವೆಬ್‌ಸೈಟ್‌ನ ಲೋಕಾರ್ಪಣೆ. ಪ್ರತಿಯೊಬ್ಬ ವ್ಯಕ್ತಿಯೂ ವಾರ್ಷಿಕ 11000 ರೂ. ಪಾವತಿಸಿ, ಒಂದು ಗೋವನ್ನು ಒಂದು ವರ್ಷ ನಿರ್ವಹಣೆಯನ್ನು ಮಾಡಬಹುದಾಗಿದೆ. ಅವರೇ ಗೋವುಗಳನ್ನು ದತ್ತು ತೆಗೆದುಕೊಳ್ಳಬಹುದು, ಅಥವಾ 11,000 ಮೊತ್ತ ಪಾವತಿಸಿದ್ದಲ್ಲಿ ಸರ್ಕಾರದ ಗೋ ಶಾಲೆಗಳಲ್ಲಿ ಗೋವುಗಳ ರಕ್ಷಣೆಗೆ ಈ ಮೊತ್ತವನ್ನು ಬಳಸಿಕೊಳ್ಳಲಾಗುವುದು.

## 5 ನಗರಗಳಲ್ಲಿ ಮೆಗಾ ಹಾಸ್ಟೆಲ್ ನಿರ್ಮಾಣ

ಪ್ರಗತಿಯತ್ತ ಕೊಂಡೊಯ್ದಿದ್ದೇವೆ ಎಂದರು. ಕರ್ನಾಟಕಕ್ಕೆ ದೇಶದಲ್ಲೇ ಹೆಚ್ಚಿನ ವಿದೇಶಿ ಬಂಡವಾಳ ಹರಿದು ಬಂದಿದ್ದು, 1.18 ಲಕ್ಷ ಕೋಟಿ ರೂಪಾಯಿ ಬಂಡವಾಳ ಹರಿದು ಬರಲಿದೆ ಎಂದ ಅವರು, ಸದ್ಯದಲ್ಲೇ ನಡೆಯಲಿರುವ ಬಂಡವಾಳ ಹೂಡಿಕೆದಾರರ ಸಮಾವೇಶದ ಮೂಲಕ ಈ ಪ್ರಮಾಣ ಹೆಚ್ಚಳವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೂರು ಸಾವಿರ ಕೋಟಿ ರೂಪಾಯಿಗಳ ವೆಚ್ಚದ ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ.ಬಸವ ವಸತಿ ಯೋಜನೆಯಡಿ ಐದು ಲಕ್ಷ ಮನೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಈ ಹಿಂದೆ ಅನುಮತಿ ನೀಡಲಾಗಿದ್ದ ಮನೆಗಳ ನಿರ್ಮಾಣ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ ಎಂದರು. ಈ ಬಾರಿ ಬಜೆಟ್ ಮಂಡಿಸಿದ ನಾಲ್ಕೇ ತಿಂಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಆ ಮೂಲಕ ಆಡಳಿತಕ್ಕೆ ಚೈತನ್ಯ ನೀಡಲಾಗಿದೆ ಎಂದ ಅವರು, ಈ ಹಿಂದೆ ಬಜೆಟ್ ಮಂಡನೆಯಾಗಿ ಆರು ತಿಂಗಳು ಕಳೆದ ನಂತರ ಗೆಜೆಟ್ ಅಧಿಸೂಚನೆ ಹೊರಡುತ್ತಿತ್ತು.ಆದರೆ ಈ ಬಾರಿ ಬಜೆಟ್ ಮಂಡನೆಯಾದ ನಾಲ್ಕೇ ತಿಂಗಳಲ್ಲಿ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ.

ತಮ್ಮ ಸರ್ಕಾರದಂತೆ ಒಂದು ಭಾಗ್ಯವನ್ನೂ ಬೊಮ್ಮಾಯಿ ಸರ್ಕಾರ ಕರುಣಿಸಲಿಲ್ಲ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಹೇಳಿರುವ ಕುರಿತು ಕೇಳಿದಾಗ ಸಿಟ್ಟಿಗೆದ್ದ ಅವರು, ಸಿದ್ದರಾಮಯ್ಯ ಅವರ ಸರ್ಕಾರ ಕೊಟ್ಟ ಯಾವ ಭಾಗ್ಯಗಳೂ ಜನರಿಗೆ ತಲುಪಲಿಲ್ಲ. ಹೀಗಾಗಿ ಅವರ ಪಕ್ಷ ಕಳೆದ ಚುನಾವಣೆಯಲ್ಲಿ 125 ರಿಂದ 80 ಕ್ಕೆ ಕುಸಿಯಿತು ಎಂದರು. ಅವರ ಸರ್ಕಾರ ಕೊಟ್ಟಿದ್ದು ಭಾಗ್ಯವಲ್ಲ, ದೌರ್ಭಾಗ್ಯ ಎಂದು ವ್ಯಂಗ್ಯವಾಡಿದ ಅವರು, ನಮ್ಮ ಸರ್ಕಾರ ಎಲ್ಲ ರೀತಿಯ ಜನರ ಕಷ್ಟಗಳಿಗೆ ಸ್ಪಂದಿಸಿದೆ.ಅವರಿಗೆ ನೆರವು ಸಿಗುವಂತೆ ಮಾಡಿದೆ ಎಂದರು.

## ಮಹತ್ತರ ಯೋಜನೆ ಘೋಷಣೆಯಿಂದ ಕೊನೆ ಘಳಿಗೆಯಲ್ಲಿ ಹಿಂದೆ ಸರಿದ ಸಿಎಂ!

ಬೆಂಗಳೂರು, ಜು.28(ಕೆಎಂಶಿ)–ತಮ್ಮ ಆಡಳಿತಕ್ಕೆ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ಕೆಲವು ಮಹತ್ತರ ಯೋಜನೆಗಳನ್ನು ನೀಡಲು ಮುಂದಾಗಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೊನೆ ಘಳಿಗೆಯಲ್ಲಿ ಹಿಂದೆ ಸರಿದಿದ್ದಾರೆ. ದಕ್ಷಿಣ ಕನ್ನಡದಲ್ಲಿ ಹಿಂದೂ ಕಾರ್ಯಕರ್ತ ನೊಬ್ಬನ ಹತ್ಯೆಯಾದ

ಹಿನ್ನೆಲೆಯಲ್ಲಿ ಇಂದು ನಡೆಯಬೇಕಿದ್ದ ಜನೋತ್ಸವ ಮತ್ತು ಸರ್ಕಾರದ ಸಂಭ್ರಮದ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ತಡರಾತ್ರಿ ರದ್ದುಗೊಳಿಸಿದರು.

ಆದರೆ ಕೆಲವು ಕಾರ್ಯಕ್ರಮಗಳನ್ನು ಜನರ ಮುಂದಿಡಲು ಪತ್ರಿಕಾಗೋಷ್ಠಿ ಕರೆದು ಪ್ರಕಟಿಸಲು ತೀರ್ಮಾನಿಸಿದ್ದರು. ದೆಹಲಿ ವರಿಷ್ಠರು ಇಂದು ಬೆಳಗ್ಗೆ ಮುಖ್ಯಮಂತ್ರಿಯವರೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಪ್ರಮುಖ ಯೋಜನೆಗಳನ್ನು ಪ್ರಕಟಿಸುವುದರಿಂದ ಹಿಂದೆ ಸರಿದಿದ್ದಾರೆ ಎನ್ನಲಾಗಿದೆ. ಪತ್ರಿಕಾಗೋಷ್ಠಿಗೂ ಮುನ್ನ ಹಿರಿಯ ಅಧಿಕಾರಿಗಳ ಜೊತೆ 30 ನಿಮಿಷಗಳ ಕಾಲ ಚರ್ಚೆ ಮಾಡಿ, ನಂತರ ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಕಾಟಾಚಾರಕ್ಕೆ ಎಂಬಂತೆ ಈಗಾಗಲೇ ಪ್ರಕಟಣೆಯಾಗಿರುವ ಯೋಜನೆಗಳನ್ನೇ ಮತ್ತೊಮ್ಮೆ ತಿಳಿಸಿದ್ದಲ್ಲದೆ, ಒಂದೆರಡು ಹೊಸ ಯೋಜನೆಗಳನ್ನು ರಾಜ್ಯದ ಜನತೆಗೆ ನೀಡಿದರು. ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಸಹೋದ್ಯೋಗಿಗಳಲ್ಲಿ ಒಂದು ವರ್ಷದ ಆಚರಣೆಯ ಸಂಭ್ರಮದ ಲವಲೇಶವೂ ಇರಲಿಲ್ಲ. ಒಂದು ವರ್ಷದ ಸರ್ಕಾರದ ಸಾಧನೆಯ ನಾಲ್ಕು ಪುಸ್ತಕಗಳನ್ನು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆಗೊಳಿಸಲು ಸಿದ್ಧಪಡಿಸಿದ್ದರು. ಆದರೆ ಅವುಗಳನ್ನು ಸಹ ಬಿಡುಗಡೆ ಮಾಡಲಿಲ್ಲ. ತಾವು ಏನು ಹೇಳಬೇಕೆಂದಿದ್ದರು ಅದನ್ನು ಹೇಳಿ, ಪತ್ರಕರ್ತರ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸದೇ ಹೊರ ನಡೆದರು.

## ದುಷ್ಟ ಶಕ್ತಿ ಹತ್ತಿಕ್ಕಲು ಅಗತ್ಯಬಿದ್ದರೆ 'ಆದಿತ್ಯ' ಆಡಳಿತ ಜಾರಿ

ಬೆಂಗಳೂರು, ಜು.28(ಕೆಎಂಶಿ)–ದುಷ್ಟ ಶಕ್ತಿಗಳನ್ನು ಹತ್ತಿಕ್ಕಲು ಅಗತ್ಯಬಿದ್ದರೆ ಇಲ್ಲೂ ಉತ್ತರಪ್ರದೇಶದ ಮುಖ್ಯಮಂತ್ರಿಯೋಗಿ ಆದಿತ್ಯನಾಥ ಮಾದರಿ ಆಡಳಿತ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಎಚ್ಚರಿಸಿದ್ದಾರೆ.

ತಮ್ಮ ಸರ್ಕಾರಕ್ಕೆ ಒಂದು ವರ್ಷ ಪೂರೈಕೆ ಮಾಡಿದ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಶಕ್ತಿಗಳು ಆಗಿಂದಾಗ್ಗೆ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಹದಗೆಡಿಸುತ್ತಿವೆ. ಇಂತಹ ಶಕ್ತಿಗಳನ್ನು ಹತ್ತಿಕ್ಕಲು ಉತ್ತರಪ್ರದೇಶದ ಆಡಳಿತದ ಮಾದರಿಯನ್ನು ಅವಶ್ಯವಾದರೆ ಅದನ್ನೇ ಜಾರಿಗೊಳಿಸಲಾಗುವುದು.

ಉತ್ತರಪ್ರದೇಶ ಪರಿಸ್ಥಿತಿ ಬೇರೆ, ಇಲ್ಲಿನ ಪರಿಸ್ಥಿತಿಯೇ ಬೇರೆ. ಇಲ್ಲಿನ ಪರಿಸ್ಥಿತಿ ನಿಭಾಯಿಸಲು ಹಲವು ವಿಧಾನಗಳನ್ನು ಪ್ರಯೋಗ ಮಾಡುತ್ತೇವೆ. ಅದರಲ್ಲಿ ವಿಫಲವಾದರೆ ಯೋಗಿ ಆದಿತ್ಯನಾಥ್ ಆಡಳಿತ ಮಾದರಿಯನ್ನೇ ಜಾರಿಗೆ ತರಲಾಗುವುದು ಎಂದು ಎಚ್ಚರಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ದೇಶಾದ್ಯಂತ ಭಾರೀ ಸದ್ದು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾವು ಬಿಜೆಪಿ ಜನೋತ್ಸವ ಸಮಾರಂಭವನ್ನು ರದ್ದು ಮಾಡಿದ್ದೇವೆ.

ಕೋಮು ಗಲಭೆ ಹತ್ತಿಕ್ಕುವ ಸವಾಲು ನಮ್ಮ ಮುಂದಿದೆ. ರಾಜ್ಯದಲ್ಲಿ ಕಳೆದ 10 ವರ್ಷದಲ್ಲಿ ಈ ಶಕ್ತಿಗಳು ತಲೆ ಎತ್ತಿವೆ. ಪೊಲೀಸರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಪ್ರವೀಣ್ ಹತ್ಯೆ ಪ್ರಕರಣ ಸಂಬಂಧ ಐದು ಟೀಂ ಮಾಡಿ ಕೇರಳಕ್ಕೆ ಕಳುಹಿಸಲಾಗುತ್ತಿದೆ. ಹರ್ಷನ ಕೊಲೆಯಲ್ಲಿ ಯಾವ ರೀತಿ ಆದಷ್ಟು ಬೇಗ ಆರೋಪಿಗಳ ಬಂಧನ ಆಗಿತ್ತೋ.. ಅದೇ ರೀತಿ ಪ್ರವೀಣ್ ಪ್ರಕರಣದಲ್ಲೂ ಆಗಲಿದೆ. ಕೇವಲ ಮಾತಾಗಿ ಉಳಿಯಲ್ಲ, ನಾವು ಮಾಡಿ ತೋರಿಸುತ್ತೇವೆ. ಕಾನೂನು ಸುವ್ಯವಸ್ಥೆ ಕಾಪಾಡಲು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಪಿಎಫ್‌ಐ ಹಾಗೂ ಎಸ್‌ಡಿಪಿ ಸಂಘಟನೆಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರ ಶೀಘ್ರವೇ ತೀರ್ಮಾನ ಕೈಗೊಳ್ಳಲಿದೆ. ಇತರೆ ರಾಜ್ಯಗಳಲ್ಲಿ ಬ್ಯಾನ್ ಆದರೂ ಹೈಕೋರ್ಟ್ ತಡೆ ತಂದಿದೆ. ಈ ಬಗ್ಗೆ ವರದಿಗಳನ್ನು ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಇದರ ಪ್ರಕ್ರಿಯೆ ಆರಂಭವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರದಿಂದ ಆದಷ್ಟು ಬೇಗ ತೀರ್ಮಾನ ಹೊರಬೀಳಲಿದೆ. ದೇಶಾದ್ಯಂತ ಸಂಘಟನೆ ನಿಷೇಧ ಆಗಬೇಕಾಗಿದೆ. ಎಲ್ಲಾ ರಾಜ್ಯಗಳಿಂದ ಮಾಹಿತಿ ತರಿಸಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಒಳಗೊಳ್ಳುವಿಕೆಯ ಅಭಿವೃದ್ಧಿಯಡಿ ಪ್ರಗತಿ ಕಂಡ

# ಹಳೇ ಮೈಸೂರು ಉತ್ತಮ ಅಭಿವೃದ್ಧಿ ಮಾದರಿ


● ಇದರ ಬಗ್ಗೆ ಮಾತನಾಡದೇ ಗುಜರಾತ್, ಕೇರಳ ಮಾದರಿ ಬಗ್ಗೆ ಮಾತನಾಡುತ್ತೇವೆ ; ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸಾದಿ ವಿಷಾದ ● 'ಅರಸು ಚುಟುಕು ಹಿಲಾಲುಗಳು' ಕೃತಿ ಬಿಡುಗಡೆ

ಮೈಸೂರು,ಜು.28(ಪಿಎಂ)– ಒಳಗೊಳ್ಳುವಿಕೆ ಅಭಿವೃದ್ಧಿಯಡಿ ಪ್ರಗತಿ ಕಂಡ 'ಹಳೇ ಮೈಸೂರು' ಉತ್ತಮ ಅಭಿವೃದ್ಧಿ ಮಾದರಿ. ಇದರ ಬಗ್ಗೆ ನಾವು ಮಾತನಾಡದೇ ಕೇವಲ ಗುಜರಾತ್ ಮತ್ತು ಕೇರಳ ಅಭಿವೃದ್ಧಿ ಮಾದರಿಗಳ ಬಗ್ಗೆಯೇ ಹೆಚ್ಚು ಮಾತನಾಡುತ್ತಿದ್ದೇವೆ ಎಂದು ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸಾದಿ ವಿಷಾದಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇಅರಸ್ ಸಂಪಾದನೆಯ 'ಅರಸು ಚುಟುಕು ಹಿಲಾಲುಗಳು' (ಎಂಜಿಆರ್ ಅರಸ್ ಅವರ ಚುಟುಕುಗಳ ಸಂಪಾದನೆ) ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಒಳಗೊಳ್ಳುವಿಕೆಯ ಅಭಿವೃದ್ಧಿಯಡಿ ಸಮಾಜ ಕಟ್ಟಿದರೆ ಯಾವುದೇ ರಾಜ್ಯ, ದೇಶ ಸದೃಢವಾಗಲು ಸಾಧ್ಯ. ಇದೇ ಮಾದರಿಯಲ್ಲಿ ಹಳೇ ಮೈಸೂರು ಪ್ರಗತಿಯತ್ತ ದಾಪುಗಾಲು ಇಟ್ಟಿತು. ಆದರೆ ನಾವೀಗ ಕೇವಲ ಗುಜರಾತ್ ಮತ್ತು ಕೇರಳ ಅಭಿವೃದ್ಧಿ ಮಾದರಿಗಳ ಬಗ್ಗೆಯೇ ಹೆಚ್ಚು ಮಾತನಾಡುತ್ತಿದ್ದೇವೆ. ಆದರೆ ಇವುಗಳಿಗಿಂತಲೂ ಅತ್ಯುತ್ತಮ ಅಭಿವೃದ್ಧಿ ಮಾದರಿ ಎಂದರೆ ಅದು ಹಳೇ ಮೈಸೂರು (ಮೈಸೂರು ಸಂಸ್ಥಾನ) ಪ್ರಗತಿ ಕಂಡ ಪರಿಯಾಗಿದೆ ಎಂದು ಪ್ರತಿಪಾದಿಸಿದರು.

ಬಿಡುಗಡೆಗೊಂಡ ಪುಸ್ತಕ ಕುರಿತು ಮಾತನಾಡಿದ ಅವರು, ಬರವಣಿಗೆ ಎಂಬುದೇ ಒಂದು ಅಭಿವ್ಯಕ್ತಿ



ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಗುರುವಾರ 'ಅರಸು ಚುಟುಕು ಹಿಲಾಲುಗಳು' ಕೃತಿಯನ್ನು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು.

ಮತ್ತು ಪ್ರತಿಭಟನೆ. ಸಾಹಿತ್ಯ ಕ್ಲಿಷ್ಟಕರವಾಗಿ ಇರಬಾರದು. ಗಹನವಾಗಿ ಮನಸ್ಸಿಗೆ ತಟ್ಟುವಂತೆ ಸರಳವಾಗಿರಬೇಕು. ಪುಸ್ತಕದಲ್ಲಿನ ನಾಲ್ಕು ಸಾಲಿನ ಚುಟುಕುಗಳು ರಾಜಕೀಯ, ಪ್ರೇಮ ಮತ್ತು ಬದ್ಧತೆ ಸೇರಿದಂತೆ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿವೆ. ಇಲ್ಲಿನ ಎಲ್ಲಾ ಚುಟುಕುಗಳು ಭಾವನಾತ್ಮಕವಾಗಿ ಮೂಡಿಬಂದಿವೆ. ಇಲ್ಲಿ ರಾಜಕೀಯದ ಮೇಲೆ ರಚಿಸಿರುವ ಚುಟುಕುಗಳು ಬಹಳ ಗಮನ ಸೆಳೆಯುತ್ತವೆ ಎಂದು ಹೇಳಿದರು.

ಪುಸ್ತಕ ಬಿಡುಗಡೆ ಮಾಡಿದ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಎಂಜಿಆರ್ ಅರಸ್ ಅವರು ಕೇವಲ ಸಾಹಿತ್ಯ ಕೃಷಿಗೆ ಮಾತ್ರ ಸೀಮಿತಗೊಳ್ಳದೇ ನಮ್ಮ ಸಮುದಾಯದ ಶ್ರೇಯೋಭಿವೃದ್ಧಿಗೂ ಕೊಡುಗೆ ನೀಡುತ್ತಿದ್ದಾರೆ. ಅವರು ನಮ್ಮ ಸಮಾಜದ ಹಿರಿಯರು. ಅನ್ವೇಷಣಾ ಸೇವಾ ಟ್ರಸ್ಟ್ ಸಮಾಜಮುಖಿಯಾಗಿ ಮುನ್ನಡೆಯಲು ಎಂಜಿಆರ್ ಅರಸ್ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಟ್ರಸ್ಟ್ ಅತ್ಯಂತ ಕಳಕಳಿಯಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಇದರ ಕಾರ್ಯವೈಖರಿ ನಮ್ಮ ಯುವ ಜನತೆಗೆ ಆದರ್ಶವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆ.21ರಂದು ಅರಸು ಮಂಡಳಿಯ ಶತಮಾನೋತ್ಸವ ನಡೆಸಲು ಉದ್ದೇಶಿಸಲಾಗಿದೆ ಅದರಲ್ಲಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಭವಿಷ್ಯದಲ್ಲಿ ಸಮುದಾಯ ಮುಂದುವರೆಯಲು ಅಗತ್ಯವಿರುವ ಅಂಶಗಳ ಬಗ್ಗೆ ರೂಪುರೇಷೆ ಸಿದ್ಧಪಡಿಸಬೇಕು ಎಂದರು.

ಮೈಸೂರು ಮಾತ್ರವಲ್ಲದೆ, ಇಡೀ ಕರ್ನಾಟಕಕ್ಕೆ ನಮ್ಮ ಸಮುದಾಯದ ಕೊಡುಗೆ ಇದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಾರಿಗೊಳಿಸಿದ ಮೀಸಲಾತಿಯನ್ನು ಅಂದಿನ ದಿವಾನರಾಗಿದ್ದ ನಮ್ಮದೇ ಸಮುದಾಯದ ಕಾಂತರಾಜೇಅರಸ್ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಅರಸು ಸಮುದಾಯದ ಮಹನೀಯರು ಸಮಾಜ ಕಟ್ಟಲು ಮಹತ್ತರ ಕೊಡುಗೆ ನೀಡಿದ್ದು, ಇವು ಅರಸು ಮಂಡಳಿಯ ಶತಮಾನೋತ್ಸವದಲ್ಲಿ ಅನಾವರಣಗೊಳ್ಳಬೇಕು. 'ಮಾದರಿ ಮೈಸೂರು' ಕಟ್ಟಲು ಅರಸು ಸಮುದಾಯದ ಪಾತ್ರವೂ ಬಹಳ ದೊಡ್ಡದಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾತನಾಡಿ, ಯದುವೀರ್ ಅವರಿಂದ ಕೃತಿ ಬಿಡುಗಡೆ ಮಾಡಿಸಿದ್ದು ಶ್ಲಾಘನೀಯ. ಮುಖ್ಯಮಂತ್ರಿ ಅವರಿಂದ ಪುಸ್ತಕ ಬಿಡುಗಡೆ ಮಾಡಿಸಿದ್ದರೂ ಇಷ್ಟೊಂದು ಗೌರವ ಬರುತ್ತಿರಲಿಲ್ಲ. ಕರ್ನಾಟಕ ರಾಜ್ಯಕ್ಕೆ ದೇಶಾದ್ಯಂತ ಗೌರವಭಾವ ಮೂಡಲು ಮೈಸೂರು ಮಹಾರಾಜರ ಕೊಡುಗೆಗಳೇ ಕಾರಣ ಎಂದು ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಅಧ್ಯಕ್ಷ ಬಿ.ಆರ್.ನಟರಾಜ ಜೋಯಿಸ್ ಉದ್ಘಾಟಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಜಿ.ಆರ್. ಅರಸ್, ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಮತ್ತಿತರರು ಹಾಜರಿದ್ದರು.

ಖಾದಿ ಬಾವುಟದ ಪಾವಿತ್ರ್ಯತೆ

## ಜು.31ರಂದು ಧ್ವಜ ಸತ್ಯಾಗ್ರಹ

● ನಾಗರಿಕ ಸಮಿತಿ ನಿರ್ಧಾರ ● ಖಾದಿ ಹೊರತಾದ ಧ್ವಜ ಬಳಸದಂತೆ ಜಾಗೃತಿ



ಮೈಸೂರು,ಜು.28(ಎಂಟಿವೈ)– ಖಾದಿಯ ಬಾವುಟ ಬಳಕೆಗೆ ಉತ್ತೇಜಿಸಿ, ವಿದೇಶದಿಂದ ಆಮದು ಮಾಡಲಾದ ಸಿಂಥೆಟಿಕ್ ಬಾವುಟ ಬಳಕೆ ನಿರ್ಬಂಧಿಸುವಂತೆ ಆಗ್ರಹಿಸಿ ಜು.31ರಂದು ಮೈಸೂರಿನ ಮಹಾತ್ಮಗಾಂಧಿ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿ ಒಂದು ದಿನದ ಧ್ವಜ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ನಾಗರಿಕ ಸಮಿತಿ ಸಂಚಾಲಕ ಪ್ರೊ. ಕಾಳಚನ್ನೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರ್–ಘರ್–ತಿರಂಗಾ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕೇಳಿ ಬಂದ ಘೋಷಣೆಯಾಗಿದೆ. ಅಂದು ಪ್ರತಿಯೊಂದು ಮನೆಯ ಮೇಲೆ ಸ್ವದೇಶಿ ನಿರ್ಮಿತ ತ್ರಿವರ್ಣ ಧ್ವಜ ಹಾರಾಟ ಮಾಡಲೆಂಬ ಉದ್ದೇಶದೊಂದಿಗೆ ಗ್ರಾಮೀಣ ಪ್ರದೇಶದಲ್ಲಿದ್ದ ನೇಯ್ಗೆಕಾರರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಹರ್ ಘರ್ ತಿರಂಗಾ ಘೋಷಣೆ ಮಾಡಲಾಗಿತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿದ್ದ ನೇಯ್ಗೆಕಾರರ ಉದ್ಯಮಗಳು ಸ್ಥಗಿತಗೊಂಡಿವೆ. ಖಾದಿ ಬಾವುಟ ತಯಾರಿಕೆ ಕ್ಷೀಣಿಸಿದೆ. ಇದರಿಂದ ಗ್ರಾಮೀಣ ಪ್ರದೇಶದ ಆರ್ಥಿಕತೆ ಕುಗ್ಗಿದೆ. ವಿದೇಶದಿಂದ ಆಮದು ಮಾಡಿಕೊಳ್ಳಲಾದ ಸಿಂಥೆಟಿಕ್ ಬಾವುಟವನ್ನು ಹಾರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಕೈಮಗ್ಗದಿಂದ ತಯಾರಾದ ಖಾದಿ ಬಾವುಟ ಬಳಸುವುದಕ್ಕೆ ಪ್ರೇರಣೆ ನೀಡುವುದರೊಂದಿಗೆ ವಿದೇಶಗಳಿಂದ ಆಮದು ಮಾಡಿಕೊಂಡಿರುವ ಬಾವುಟ ಬಳಸದಂತೆ ಜಾಗೃತಿ ಮೂಡಿಸಲು ಧ್ವಜ ಸತ್ಯಾಗ್ರಹದೊಂದಿಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜು. 29ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಗೋಕುಲಂ ಕಾಂಟೂರ್ ರಸ್ತೆಯ ಶ್ಯಾಗಲೆ ಭವನದಲ್ಲಿ ಕಲಾಶಿಬಿರ, ಜು. 30 ರಂದು ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಸತ್ಯಾಗ್ರಹ ಸಮಿತಿಯ ಪ್ರತಿನಿಧಿ ಸಭೆ ಜರುಗಲಿದೆ. ಜು. 31 ರಂದು ಗಾಂಧಿವೃತ್ತದಿಂದ ಟೌನ್‌ಹಾಲ್ ಮಾರ್ಗವಾಗಿ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಉದ್ಯಾನದವರೆಗೆ ಪಾದಯಾತ್ರೆ ನಡೆಸಿ, ಅಲ್ಲಿ ಒಂದು ದಿನದ ಧ್ವಜ ಸತ್ಯಾಗ್ರಹ ನಡೆಸಲಾಗುತ್ತದೆ. ಇದರಲ್ಲಿ ನಾಗರಿಕ ಸಮಿತಿ ಸದಸ್ಯರಾದ ಲೀಲಾ ವೆಂಕಟೇಶ್, ರಂಗಕರ್ಮಿ ಪ್ರಸನ್ನ ಹಾಗೂ ಇನ್ನಿತರರು ಉಪವಾಸ ಸತ್ಯಾಗ್ರಹ ಕೈಗೊಳ್ಳಲಿದ್ದಾರೆ. ಅಂದು ಇತರರು ತಮ್ಮ ತಮ್ಮ ಮನೆಗಳಿಂದ ಬುತ್ತಿ ತಂದು, ಯಾವುದೇ ಭೇದ–ಭಾವವಿಲ್ಲದೇ ಪರಸ್ಪರ ಹಂಚಿಕೊಂಡು ಸೇವಿಸಲಿದ್ದಾರೆ ಎಂದರು.

ಆ.1ರಿಂದ ಬೆಂಗಳೂರು, ತುಮಕೂರು, ಚಾಮರಾಜನಗರ, ಸಾಗರ ಇನ್ನಿತರೆಡೆ ಸತ್ಯಾಗ್ರಹ ನಡೆಸಲಾಗುತ್ತದೆ, ಆ. 8ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಸರ್ವ ಸೇವಾ ಸಂಘದ ಸಭೆ, ಆ. 10 ಮತ್ತು11ರ ಸಂಜೆ 7ಕ್ಕೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಧ್ವಜ ಸತ್ಯಾಗ್ರಹ ಕುರಿತ 'ಒಣಶುಂಠಿ', ನ್ಯೆನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಆ.14ರಂದು ಬೆಂಗಳೂರಿನ ರಾಗಿಕಣದಲ್ಲಿ ಧ್ವಜ ಸತ್ಯಾಗ್ರಹ ನಡೆಸಲಾಗುತ್ತದೆ ಎಂದು ವಿವರಿಸಿದರು.

ರಾಷ್ಟ್ರಧ್ವಜವೆಂಬುದು ಒಂದು ಲಾಂಛನ. ಹೀಗಾಗಿ ನಮ್ಮ ದೇಶದ ಲಾಂಛನವಾಗಿರುವ ತ್ರಿವರ್ಣ ಧ್ವಜವು ಖಾದಿ ವಸ್ತ್ರದಲ್ಲಿಯೇ ಇರಬೇಕು ಎಂಬ ಮಹತ್ವದ ನಿರ್ಣಯವೊಂದನ್ನು ನಮ್ಮ ಹಿರಿಯರು ತೆಗೆದುಕೊಂಡಿದ್ದರು. ಆದರೆ ಇದಕ್ಕೆ ಪ್ರತಿಯಾಗಿ ನಾವು ಇಂದು ಖಾದಿ ವಸ್ತ್ರದ ಜಾಗದಲ್ಲಿ ಕಾಯಕವನ್ನೇ ಕೊಲ್ಲುವ ವಿದೇಶಿ ವಸ್ತ್ರವನ್ನು ಅಳವಡಿಸಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮೀಣ ಮಹಿಳೆಯರು, ಬೆವರು ಸುರಿಸಿ ತಯಾರಿಸಿದ ಖಾದಿ ವಸ್ತ್ರ ಮಾತ್ರವೇ ರಾಷ್ಟ್ರದ ಲಾಂಛನವಾಗಿರಬೇಕು ಎಂಬುದು ಹಿರಿಯರ ಘನ ಉದ್ದೇಶವಾಗಿತ್ತು. ಆದರೆ ಈಗ ಬಾರ್ಬಿ ಡಾಲಿಗೆ ಸೀರೆಸುತ್ತಿ ಗೌರಮ್ಮನನ್ನು ಮಾಡಿದಂತೆ, ಅಥವಾ ಪ್ಲಾಸ್ಟಿಕ್ಕಿನ ಮುದ್ದೆಯಿಂದ ಗಣಪನನ್ನು ಮಾಡಿದಂತೆ, ವಿದೇಶಿ ವಸ್ತ್ರದಿಂದ ರಾಷ್ಟ್ರ ಧ್ವಜವನ್ನು ಮಾಡಿದ್ದೇವೆ. ಇದು ವಿನಾಶಕಾರಿ. ಹೀಗೆ ಮಾಡಿ, ಈಗಾಗಲೇ ವಿದೇಶಿ ಆರ್ಥಿಕತೆ ಹಾಗೂ ವಿದೇಶಿ ಸಂಸ್ಕೃತಿಗಳ ದಾಸರಾಗಿರುವ ಭಾರತೀಯರನ್ನು ಸಂಪೂರ್ಣವಾಗಿ ವಿದೇಶಿ ದಾಸ್ಯಕ್ಕೆ ತಳ್ಳುತ್ತಿದ್ದೇವೆ ಎಂದು ವಿಷಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಉಗ್ರನರಸಿಂಹೇಗೌಡ, ರಂಗಕರ್ಮಿ ಪ್ರಸನ್ನ ಲೀಲಾ ವೆಂಕಟೇಶ್ ಇದ್ದರು.

ಜನನ, ಮರಣ ಪತ್ರ ನೀಡುವ ಅಧಿಕಾರ

## ಕೋರ್ಟ್‌ನಿಂದ ಎಸಿ, ಡಿಸಿಗೆ ನೀಡಿರುವ ಕ್ರಮ ಖಂಡಿಸಿ ಮೈಸೂರಲ್ಲಿ ವಕೀಲರ ಪ್ರತಿಭಟನೆ



ಮೈಸೂರು,ಜು.28(ಎಂಟಿವೈ)– ಜನನ ಹಾಗೂ ಮರಣ ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರವನ್ನು ಸಿವಿಲ್ ನ್ಯಾಯಾಲಯದಿಂದ ಉಪ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸಿರುವುದು ಸರಿಯಲ್ಲ. ಕೂಡಲೇ ಸರ್ಕಾರ ಈ ಆದೇಶ ಹಿಂಪಡೆಯಬೇಕು ಎಂದು ಕರ್ನಾಟಕ ಪ್ರಜಾಪಾರ್ಟಿ ರೈತಪರ್ವ ರಾಜ್ಯಾಧ್ಯಕ್ಷ ಡಾ.ಬಿ. ಶಿವಣ್ಣ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅವೈಜ್ಞಾನಿಕವಾದ ಆದೇಶ ಹೊರಡಿಸುವ ಮೂಲಕ ಜನರಿಗೆ ತೊಂದರೆಯನ್ನುಂಟು ಮಾಡುತ್ತಿದೆ. ಈ ಹಿಂದೆ ಸಾರ್ವಜನಿಕರು ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ಮಹಾನಗರ ಪಾಲಿಕೆ ಹಾಗೂ ತಹಶೀಲ್ದಾರ್ ಕಚೇರಿಯಿಂದ ಪಡೆಯಲು ಸಾಧ್ಯವಾಗದೇ ಇದ್ದಾಗ ವಕೀಲರ ಮೂಲಕ ನ್ಯಾಯಾಲಯಕ್ಕೆ ಜನನ ಮತ್ತು ಮರಣ ನೋಂದಣಿ ಕಾಯ್ದೆ 1969ರ ನಿಯಮಾನುಸಾರ ಅರ್ಜಿ ಸಲ್ಲಿಸಿ, ನ್ಯಾಯ ಸಮ್ಮತ ಮಾರ್ಗದಲ್ಲಿ ಪಡೆಯುತ್ತಿದ್ದರು. ಇದರಿಂದ ಕಕ್ಷಿದಾರರಿಗೆ ವಿಳಂಬವಾಗುತ್ತಿರಲಿಲ್ಲ. ಕಡಿಮೆ ಖರ್ಚಿನಲ್ಲಿ ಅಗತ್ಯ ಪ್ರಮಾಣ ಪತ್ರ ಪಡೆದುಕೊಳ್ಳುತ್ತಿದ್ದರು. ಆದರೆ ಇದೀಗ ಸರ್ಕಾರ ಸಿವಿಲ್ ನ್ಯಾಯಾಲಯದಲ್ಲಿದ್ದ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಕಿತ್ತುಕೊಂಡು ಎಸಿ ಹಾಗೂ ಡಿಸಿ ವ್ಯಾಪ್ತಿಗೆ ನೀಡಿರುವುದು ಖಂಡನೀಯ ಎಂದರು.

ಸರ್ಕಾರದ ಈ ಕ್ರಮದಿಂದ ಕಾರ್ಯಾಂಗದ ಕ್ಷೇತ್ರದ ಮೇಲೆ ಹೆಚ್ಚಿನ ಒತ್ತಡ ಉಂಟಾಗಲಿದೆ. ನಿಗದಿತ ಸಮಯದಲ್ಲಿ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ಸಾರ್ವಜನಿಕರು ಪಡೆಯಲು ಸಾಧ್ಯವಾಗದೇ, ಭ್ರಷ್ಟಾಚಾರಕ್ಕೂ ಕಾರಣವಾಗಬಹುದು. ಹೀಗಾಗಿ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಆದೇಶ ವಾಪಸು ಪಡೆಯಬೇಕು. ಇಲ್ಲದಿದ್ದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಸಿದರು.

## ಬಿಇಎಂಎಲ್ ಆವರಣದಲ್ಲಿ ಕಣ್ಣಾಮುಚ್ಚಾಲೆ ಆಡುತ್ತಿದ್ದ ಚಿರತೆ ಸೆರೆ

ಮೈಸೂರು,ಜು.28(ಎಂಟಿವೈ)– ಮೈಸೂರಿನ ಬಿಇಎಂಎಲ್ ಆವರಣದಲ್ಲಿ ಹಲವು ದಿನಗಳಿಂದ ಕಣ್ಣಾಮುಚ್ಚಾಲೆ ಆಡುತ್ತಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದ್ದು, ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದಾರೆ.



ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಕೂರ್ಗಳ್ಳಿಯ ಬಿಇಎಂಎಲ್ ಕಾರ್ಖಾನೆ ಆವರಣದಲ್ಲಿ ಕಳೆದ ಹಲವು ದಿನಗಳಿಂದ ಚಿರತೆ ಓಡಾಡುವುದನ್ನು ಕಂಡಿದ್ದ ಸಿಬ್ಬಂದಿ ಆತಂಕಕ್ಕೆ ಒಳಗಾಗಿದ್ದರು. ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಕಳೆದ ಎರಡು ದಿನದ ಹಿಂದಷ್ಟೇ ಅರಣ್ಯ ಇಲಾಖೆ ಸಿಬ್ಬಂದಿ ಬೋನ್‌ವೊಂದನ್ನು ಬಿಇಎಂಎಲ್ ಆವರಣದಲ್ಲಿಟ್ಟಿದ್ದರು. ಇಂದು ಮುಂಜಾನೆ ಆಹಾರ ಅರಸಿ ಬಂದ ಚಿರತೆ ಬೋನ್‌ಗೆ ಬಿದ್ದಿದೆ ವಿಷಯ ತಿಳಿದು ಸ್ಥಳಕ್ಕೆ ಬಂದ ಆರ್‌ಎಫ್‌ಓ ಕೆ.ಸುರೇಂದ್ರ ನೇತೃತ್ವದ ಅರಣ್ಯ ಸಿಬ್ಬಂದಿ ತಂಡ ಬೋನ್‌ನಲ್ಲಿದ್ದ ಚಿರತೆ ಮೈಸೂರಿನ ಅಶೋಕಪುರಂನ ಅರಣ್ಯ ಭವನಕ್ಕೆ ತಂದು, ಆರೋಗ್ಯ ತಪಾಸಿಸಿದರು. ಬಳಿಕ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಚಾಮರಾಜನಗರ ಜಿಲ್ಲೆಯ ಕೆ.ಗುಡಿ(ಕ್ಯಾತೇಶ್ವರ ಗುಡಿ) ಅರಣ್ಯದಲ್ಲಿ ಸಂಜೆ ವೇಳೆಗೆ ಬಿಡುಗಡೆ ಮಾಡಲಾಯಿತು.

## ಮೈಸೂರು, ಕೊಡಗು, ಮಂಡ್ಯ, ಚಾ.ನಗರದಲ್ಲಿ ತುಂತುರು ಮಳೆ ಸಾಧ್ಯತೆ

ಮೈಸೂರು, ಜು.28(ಆರ್‌ಕೆಬಿ)– ಹವಾಮಾನ ಮುನ್ಸೂಚನೆ ಪ್ರಕಾರ ಜು.31ರವರೆಗೆ ಕೊಡಗು ಜಿಲ್ಲೆಯಲ್ಲಿ ಸಾಧಾರಣ ಹಾಗೂ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ತುಂತುರು ಮಳೆಯಾಗಲಿದೆ.

ಕೊಡಗಿನಲ್ಲಿ ಜು.29ರಂದು 5 ಮಿ.ಮೀ., 30ರಂದು 16 ಮಿ.ಮೀ., 31ರಂದು 7 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಇರಲಿದೆ.

ಈ ಮೂರು ದಿನದ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು 10 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ 11 ಮಿ.ಮೀ. ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 10 ಮಿ.ಮೀ. ಮಳೆಯಾಗಲಿದೆ.

ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 31–32 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 30 ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರುವ ಸಾಧ್ಯತೆ ಇದೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಜು.29ರಿಂದ ಆ.4ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿ ಗ್ರಾಮೀಣ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

## ಶಾಸಕ ರಾಮ್‌ದಾಸ್ ನೇತೃತ್ವದಲ್ಲಿ ಪ್ರವೀಣ್‌ಗೆ ಶ್ರದ್ಧಾಂಜಲಿ ಸಭೆ

ಕುಟುಂಬಕ್ಕೆ 10 ಲಕ್ಷ ರೂ. ನೆರವು ನೀಡುವ ನಿರ್ಣಯ

ಮೈಸೂರು, ಜು.28(ಜಿಎ)–ನಿನ್ನೆ ಹತ್ಯೆಗೀಡಾದ ಸುಳ್ಯದ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರ್ ಅವರಿಗೆ ಇಂದು ಮೈಸೂರಲ್ಲಿ ಶಾಸಕ ರಾಮ್‌ದಾಸ್ ನೇತೃತ್ವದಲ್ಲಿ ವಿದ್ಯಾರಣ್ಯಪುರಂನ ಅವರ ಗೃಹ ಕಚೇರಿ ಮುಂದಿನ ಪಾರ್ಕ್‌ನಲ್ಲಿ ಶ್ರದ್ಧಾಂಜಲಿ ಏರ್ಪಡಿಸಲಾಗಿತ್ತು. ಇದರಲ್ಲಿ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಈ ಸಭೆಯಲ್ಲಿ ಪ್ರವೀಣ್ ಹತ್ಯೆಯನ್ನು ಉಗ್ರವಾಗಿ ಖಂಡಿಸಲಾಯಿತು. ಅಲ್ಲದೆ ಅವರ ಕುಟುಂಬಕ್ಕೆ 10 ಲಕ್ಷ ರೂ. ಆರ್ಥಿಕ ನೆರವು ನೀಡಲು ನಿರ್ಣಯಿಸಲಾಯಿತು.

ಈ ವೇಳೆ ಶಾಸಕ ರಾಮ್‌ದಾಸ್ ಮಾತನಾಡಿ, ಸುಳ್ಯದ ಹಿಂದೂ ಕಾರ್ಯಕರ್ತ ಪ್ರವೀಣ್ ಹತ್ಯೆ ಅತ್ಯಂತ ಅಮಾನವೀಯ ಕೃತ್ಯ. ರಾಜ್ಯದಲ್ಲಿ ಪದೇ ಪದೆ ಇಂತಹ ದುಷ್ಕೃತ್ಯಗಳು ನಡೆಯುತ್ತಲೇ ಇವೆ. ಉತ್ತರ ಪ್ರದೇಶ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಕೈಗೊಂಡಿ ರುವಂತಹ ಕ್ರಮಗಳನ್ನು ಇಲ್ಲಿಯೂ ಅನಿಸರಿಸಿದ್ದಾರೆ ಇಂತಹ ಹೀನ ಕೃತ್ಯಗಳನ್ನು ಹತ್ತಿಕ್ಕಬಹುದಾಗಿದೆ. ನಮ್ಮ ಮುಖ್ಯಮಂತ್ರಿಗಳು ಕಠಿಣ ಕ್ರಮ ಕೈಗೊಳಲು ಮುಂದಾಗಿದ್ದಾರೆ. ಸಮಾಜದಲ್ಲಿನ ದುಷರ್ಮಿಗಳನ್ನು ಬಗ್ಗು ಬಡಿಯಲು ಹೊಸದಾದ ಕಾನೂನು ತರುವ ಪ್ರಯತ್ನಕ್ಕೂ ಕೈಹಾಕಿದ್ದಾರೆ. ಈ ಮೂಲಕ ಎಚ್ಚರಿಕೆಯ ಸಂದೇಶ ನೀಡದಿದ್ದಲ್ಲಿ. ರಾಜ್ಯದಲ್ಲಿ ಸಮಾಜ ಘಾತುಕ ಶಕ್ತಿಗಳು ಅಟ್ಟಹಾಸ ಮೆರೆಯುತ್ತವೆ ಎಂದು ಅಭಿಪ್ರಾಯಪಟ್ಟರು. ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳ ಬಗ್ಗೆ ಈಗಾಗಲೇ ಜನರಿಗೆ ಅರಿವಿದೆ. ದೇಶಿಯ ದುಷ್ಟ ಶಕ್ತಿಗಳ ಧಮನ ಮಾಡುವ ಕಾಲ ಕೂಡಿ ಬಂದಿದೆ. ಪ್ರದಾನಿ ಮೋದಿ ಇದರ ಬಗ್ಗೆ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುವ ವಿಶ್ವಾಸವಿದೆ ಎಂದರು.




ಪ್ರವೀಣ್ ಕುಟುಂಬದವರಿಗೆ ಧೈರ್ಯ ತುಂಬುವುದರ ಜೊತೆಗೆ ಜೀವನಕ್ಕೆ ಭದ್ರತೆ ಕಲ್ಪಿಸಲು ಖಾಯಂ ಉದ್ಯೋಗ ನೀಡಬೇಕು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ರಾಜ್ಯದಲ್ಲಿ ಎಲ್ಲೂ ಮರುಕಳಿಸದ ಹಾಗೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು ಎಂದು ಗೃಹ ಮಂತ್ರಿಗಳಿಗೆ ಪತ್ರ ಬರೆಯುವುದದಾಗಿ ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ನೇಮಕಾತಿ ಹಗರಣ

## ಬಂಧಿತ ಚಟರ್ಜಿ ಸಂಪುಟದಿಂದ ವಜಾ ಮಾಡಿದ ದೀದಿ

ಕೋಲ್ಕತ್ತಾ, ಜು.28– ಶಿಕ್ಷಕರ ನೇಮಕಾತಿ ಹಗರಣದಲ್ಲಿ ಬಂಧನಕ್ಕೊಳಗಾಗಿರುವ ಪಶ್ಚಿಮ ಬಂಗಾಳದ ಸಚಿವ ಪಾರ್ಥ ಚಟರ್ಜಿ ಅವರನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಸಂಪುಟದಿಂದ ವಜಾ ಮಾಡಿದ್ದಾರೆ.



ಪಾರ್ಥ ಚಟರ್ಜಿ ಅವರನ್ನು ಸಚಿವ ಸಂಪುಟದಿಂದ ಮತ್ತು ಪಕ್ಷದ ಎಲ್ಲಾ ಹುದ್ದೆಗಳಿಂದ ತಕ್ಷಣವೇ ವಜಾಗೊಳಿಸಿ, ಅವರನ್ನು ಪಕ್ಷದಿಂದಲೂ ಉಚ್ಚಾಟಿಸಬೇಕು. ನನ್ನ ಈ ಹೇಳಿಕೆ ತಪ್ಪೆಂದು ಪರಿಗಣಿಸಿದರೆ, ಎಲ್ಲಾ ಹುದ್ದೆಗಳಿಂದ ನನ್ನನ್ನೂ ತೆಗೆದುಹಾಕಲು ಪಕ್ಷಕ್ಕೆ ಅಧಿಕಾರ ಇದೆ. ನಾನು ಟಿಎಂಸಿಯ ಸೈನಿಕನಾಗಿ ಮುಂದುವರಿಯುತ್ತೇನೆ" ಎಂದು ಟಿಎಂಸಿ ವಕ್ತಾರ ಘೋಷ್ ಟ್ವೀಟ್ ಮಾಡಿದ್ದರು. ಇವರೊಂದಿಗೆ ಹಲವು ನಾಯಕರು ಚಟರ್ಜಿ ವಜಾಕ್ಕೆ ಆಗ್ರಹಿಸಿದ್ದರು.

**ಪ್ರಕರಣದ ಹಿನ್ನೆಲೆ:** ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಸಚಿವರಾಗಿದ್ದ ಪಾರ್ಥ ಚಟರ್ಜಿ ಅವರ ಮನೆ ಮೇಲೆ ಇಡಿ ಅಧಿಕಾರಿಗಳು ಐದು ದಿನಗಳ ಹಿಂದೆ ದಾಳಿ ನಡೆಸಿ, ಅವರನ್ನು ಬಂಧಿಸಿದ್ದರು.

ಅವರ ಆಪ್ತೆ ಅರ್ಪಿತಾ ಮುಖರ್ಜಿ ಅಪಾರ್ಟ್‌ಮೆಂಟ್‌ಗಳ ಮೇಲೆ ದಾಳಿ ನಡೆಸಿದ ವೇಳೆ 50 ಕೋಟಿ ರೂ. ನಗದು ಹಾಗೂ 4.30 ಕೋಟಿ ರೂ. ಮೌಲ್ಯದ ಚಿನ್ನಾಭರಣ ಪತ್ತೆಯಾಗಿತ್ತು. ಅಲ್ಲದೆ ಹಲವು ಆಸ್ತಿ ಮತ್ತು ವಿದೇಶಿ ವಿನಿಮಯದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಮೈಸೂರು ಮಿತ್ರ
ಶುಕ್ರವಾರ 29 ಜುಲೈ 2022

# ಬಡ ಮಕ್ಕಳಿಗಾಗಿ ಶಿಕ್ಷಣ ಸಂಸ್ಥೆ ತೆರೆದಿರುವುದು ಶ್ಲಾಘನೀಯ

## ಗುರುವಂದನೆ ಕಾರ್ಯಕ್ರಮದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್

ತಿ.ನರಸೀಪುರ, ಜು.28– ಮಾಡ್ರಹಳ್ಳಿ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿಗಳು ಬಡಮಕ್ಕಳ ಶಿಕ್ಷಣಕ್ಕಾಗಿ ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆ ತೆರೆದಿರುವುದು ಶ್ಲಾಘನೀಯ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಶ್ರೀಗುರು ಚನ್ನಮಲ್ಲಿಕಾರ್ಜುನ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಮಾಡ್ರಹಳ್ಳಿ ಪಟ್ಟದ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮಿಗಳ ಗುರುವಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಮೀಜಿಗಳು ತಮ್ಮ ಸರಳ ನಡವಳಿಕೆಯಿಂದ ತಾಲೂಕಿಗೆ ಮಾದರಿಯಾಗಿದ್ದಾರೆ. ನಾನು ರಾಜಕೀಯಕ್ಕೆ ಬಂದಾಗಿನಿಂದಲೂ ಸ್ವಾಮೀಜಿಗಳೊಂದಿಗೆ ಒಡನಾಟ ಇಟ್ಟುಕೊಂಡಿದ್ದು, ಅವರ ಸರಳತೆ, ಪ್ರಾಮಾಣಿಕತೆ ಹಾಗೂ ನಿತ್ಯ ಕಾಯಕವನ್ನು ಗಮನಿಸಿದ್ದೇನೆ ಎಂದರು.

ಎಂ.ಎಲ್.ಹುಂಡಿ ಮಠದ ಗೌರಿಶಂಕರ ಸ್ವಾಮೀಜಿ ಮಾತನಾಡಿ, ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಗಳು ಸರ್ಕಾರದ ಅನುದಾನವಿಲ್ಲದೇ ತಮ್ಮ ಸ್ವಂತ ಹಣದಲ್ಲಿ ಶಿಕ್ಷಣ ಸಂಸ್ಥೆ ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ಸರ್ಕಾರದ ಸಹಾಯಧನ ಇಲ್ಲದೇ ಒಂದು ಸಂಸ್ಥೆ ನಡೆಸುವುದು ಸುಲಭದ ಮಾತಲ್ಲ. ತಮ್ಮ ಇಳಿ ವಯಸ್ಸಿನಲ್ಲೂ ಸ್ವಾಮೀಜಿಗಳು ತಮ್ಮದೇ ಜಮೀನಿನಲ್ಲಿ ವ್ಯವಸಾಯ ಮಾಡಿ ಅಲ್ಲಿ ಬಂದ ಹಣದಿಂದ ಸಂಸ್ಥೆ ನಡೆಸುತ್ತಿದ್ದಾರೆ ಎಂದರು.



> ಬಡ ಮಕ್ಕಳು, ದೀನ ದಲಿತರ ಪರ ಕೆಲಸ ಮಾಡುತ್ತಿರುವ ತಾಲೂಕಿನ ಮಠಗಳಲ್ಲಿ ಮಾಡ್ರಹಳ್ಳಿ ಮಠ ಮುಂಚೂಣಿಯಲ್ಲಿದೆ. ಎಲ್ಲಾ ವರ್ಗದ ಮಕ್ಕಳಿಗೆ ಶಿಕ್ಷಣ ಕೊಡುವ ಮಹತ್ತರ ಕೆಲಸವನ್ನು ಸ್ವಾಮೀಜಿಗಳು ಮಾಡುತ್ತಿದ್ದು, ಅವರ ಆರೋಗ್ಯ ಉತ್ತಮವಾಗಿರಲಿ, ಅವರಿಗೆ ಭಗವಂತ ಮತ್ತಷ್ಟು ಕಾಯಕ ಮಾಡುವ ಶಕ್ತಿ ಕರುಣಿಸಲಿ.
>
> -ಡಾ.ಎನ್.ಎಲ್.ಭಾರತಿ ಶಂಕರ್, ಮಾಜಿ ಶಾಸಕ

**ಎಲ್ಲ ಸ್ವಾಮೀಜಿಗಳು ಒಂದೇ!:** ಸ್ವಾಮೀಜಿಗಳಾದ ನಮಗೆ ಅವಕಾಶಗಳೇ ಸಿಕ್ಕಿಲ್ಲ. ಯಾವುದೇ ಸಮಾವೇಶದಲ್ಲಿ ಸ್ವಾಮೀಜಿಗಳು ಭಾಗಿಯಾಗಿರುವುದನ್ನು ನೋಡಿದ್ದೀರಾ, ಕಾರ್ಯಕ್ರಮಗಳಲ್ಲಿ ಒಬ್ಬರೋ ಅಥವಾ ಇಬ್ಬರೋ ಸ್ವಾಮೀಜಿಗಳಿರುತ್ತಾರೆ. ಯಾಕೆ ಹೀಗಾಗುತ್ತಿದೆ ಎಂಬುದು ತಿಳಿಯುತ್ತಿಲ್ಲ. ತಾಲೂಕಿನಲ್ಲಿ ಬೇರೆ ಯಾವ ಸ್ವಾಮೀಜಿಗಳು ಇಲ್ಲವೇ? ಬೇಕಾದಷ್ಟು ಸ್ವಾಮೀಜಿಗಳು ಸಮರ್ಥರಿದ್ದಾರೆ. ಗವಿ ಮುಡುಕುತೊರೆ ಹಾಗೂ ಮುಡುಕನಪುರ ಮಠದ ಸ್ವಾಮೀಜಿಗಳಿದ್ದಾರೆ. ಸ್ವಾಮೀಜಿಗಳು ಎಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದರು.

ಗುರುವಂದನೆ ಸ್ವೀಕರಿಸಿ, ಆಶೀರ್ವಚನ ನೀಡಿ ಮಾತನಾಡಿದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಗುರುವಂದನೆ ನಮಗೆ ಅಲ್ಲ. ಅದು ಗುರು ಪರಂಪರೆಗೆ ಸಲ್ಲುವಂತಹದ್ದು. ನನ್ನ ಜೀವನದಲ್ಲಿ ನಾನು ಸಾಕಷ್ಟು ಜನರ ಪ್ರೀತಿ ಸಂಪಾದಿಸಿದ್ದೇನೆ. ಶಿಕ್ಷಣ ಸಂಸ್ಥೆ ನಿರ್ವಹಣೆ ನನ್ನ ಜೀವನದ ಭಾಗ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಕೆ.ಜಿ. ಶಿವಪ್ರಸಾದ್, ಮಹದೇವಪ್ಪ, ಪರಶಿವಮೂರ್ತಿ, ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್, ಟಿ.ಎಸ್. ಶಾಂತರಾಜು, ಪಾಲಾಕ್ಷಮೂರ್ತಿ, ಶಿವಮೂರ್ತಿ, ರಾಜಣ್ಣ, ಸಿದ್ದಪ್ಪ, ಶಾಮಿಯಾನ ವೀರೇಶ್ ಅವರನ್ನು ಸನ್ಮಾನಿಸಲಾಯಿತು. ಮುಡುಕನಪುರ ಹಲವಾರ ಮಠದ ಷಡಕ್ಷರ ಸ್ವಾಮೀಜಿ, ಗವಿಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಸದಸ್ಯ ಎಸ್.ಕೆ. ಕಿರಣ್, ವಕೀಲ ಜಗದೀಶ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿದ್ದಪ್ಪ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವೀರೇಶ್, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಮಹದೇವ ಸ್ವಾಮಿ, ಮೈಮುಲ್ ನಿರ್ದೇಶಕ ಓಂಪ್ರಕಾಶ್, ಶಾಂತರಾಜು, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೊಂಟೇಶ್, ಹೋಟೆಲ್ ರಾಜಣ್ಣ, ವಕೀಲ ಸಂಘದ ಅಧ್ಯಕ್ಷ ಪಾಲಾಕ್ಷಮೂರ್ತಿ, ಮೂಗೂರು ಕುಮಾರಸ್ವಾಮಿ, ದಯಾನಂದ್ ಪಟೇಲ್, ಶಾಂತರಾಜ್, ಪಿ.ಸ್ವಾಮಿನಾಥ್‌ಗೌಡ, ಗುತ್ತಿಗೆದಾರ ನಂದೀಶ್ ಸೇರಿದಂತೆ ಇನ್ನಿತರರಿದ್ದರು.

## ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಹುಣಸೂರಲ್ಲಿ ಪ್ರತಿಭಟನೆ



ಹುಣಸೂರು, ಜು.28– ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ನಗರದಲ್ಲಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದಲ್ಲಿ ಜಮಾಯಿಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಹತ್ಯೆಗೊಳಗಾದ ಪ್ರವೀಣ್ ನೆಟ್ಟಾರು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಪ್ರತಿಭಟನೆ ನಡೆಸಿ, ಹತ್ಯೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿದರು. ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣಗೌಡ ಮಾತನಾಡಿ, ಕೇಂದ್ರ ಹಾಗೂ ರಾಜ್ಯದಲ್ಲಿ ನಮ್ಮದೇ ಬಿಜೆಪಿ ಸರ್ಕಾರವಿದ್ದರೂ, ನಿರಂತರವಾಗಿ ಹಿಂದೂ ಕಾರ್ಯಕರ್ತರ ಹತ್ಯೆ ನಡೆಯುತ್ತಿದೆ. ರಾಜ್ಯದಲ್ಲಿ ಉತ್ತರಪ್ರದೇಶದ ಯೋಗಿ ಸರ್ಕಾರದ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಗರ ಅಧ್ಯಕ್ಷ ಗಣೇಶ್ ಮಾತನಾಡಿ, ರಾಜ್ಯದಲ್ಲಿ ನಡೆಯುತ್ತಿರುವ ಹಿಂದೂಗಳ ಹತ್ಯೆ ಹಿಂದೆ ಕಾಣದ ಕೈಗಳ ಕೈವಾಡವಿದೆ. ಹೀಗಾಗಿ PFI, SFI ಗಳನ್ನು ನಿಷೇಧ ಮಾಡುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ನಾಗರಾಜ ಮಲ್ಲಾಡಿ, ಮಂಜುನಾಥ್, ನಗರಸಭೆ ಸದಸ್ಯರಾದ ಶ್ರೀನಿವಾಸ, ರಮೇಶ್, ಅರುಣ್, ಮಹಿಳಾಧ್ಯಕ್ಷೆ ಕಮಲಮ್ಮ, ತಂಬಾಕು ಮಂಡಳಿ ಸದಸ್ಯ ದಿನೇಶ್, ಭೂ ನ್ಯಾಯ ಮಂಡಳಿ ಸದಸ್ಯ ಗಣಪತಿ, ಮಹೇಶ್, ನಾಗೇಂದ್ರ, ಗೋವಿಂದ ನಾಯಕ್, ನಾರಾಯಣ, ರವೀಶ್, ಸುರೇಗೌಡ ಇತರರಿದ್ದರು.

## ಸಮಾಜ ಎಚ್ಚರಿಸುವ ಜವಾಬ್ದಾರಿ ಪತ್ರಕರ್ತರದು

### ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಸಾ.ರಾ.ಮಹೇಶ್

ಕೆ.ಆರ್.ನಗರ, ಜು.28– ಅಧಿಕಾರಿಗಳು, ರಾಜಕಾರಣಿಗಳ ತಪ್ಪುಗಳನ್ನು ತಿದ್ದುವ ಜೊತೆಗೆ ಸಮಾಜವನ್ನು ಎಚ್ಚರಿಸುವ ಜವಾಬ್ದಾರಿ ನಿಮ್ಮದು ಎಂದು ಪತ್ರಕರ್ತರಿಗೆ ಶಾಸಕ ಸಾ.ರಾ.ಮಹೇಶ್ ಸಲಹೆ ನೀಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ 4 ಅಂಗಗಳಾದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಮತ್ತು ಪತ್ರಿಕಾರಂಗ ಸಮಾಜದ ಏಳಿಗೆಗೆ ಸದಾ ದುಡಿಯ ಬೇಕಾಗಿದ್ದು, ಇದರಲ್ಲಿ ಪತ್ರಕರ್ತರ ಪಾತ್ರ ಪ್ರಮುಖ ಎಂದರು.

ಇಂದು ಪತ್ರಕರ್ತರ ಬಗ್ಗೆ ಆರೋಪ–ಪ್ರತ್ಯಾರೋಪ ಸಹಜ. ಎಲ್ಲರನ್ನು ಒಂದೇ ರೀತಿ ಕಾಣಲು ಸಾಧ್ಯವಿಲ್ಲ. ಇನ್ನು ನಿಷ್ಠೆ, ಪ್ರಾಮಾಣಿಕತೆಯಿಂದ ಕೆಲವು ಪತ್ರಕರ್ತರು ತಮ್ಮ ವೃತ್ತಿ ಮುಂದುವರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ ಎಂದರು.

ಪತ್ರಕರ್ತರು ಕೊರೊನಾ ವೇಳೆ ತಮ್ಮ ಜೀವದ ಹಂಗನ್ನು ತೊರೆದು ಕೋವಿಡ್ ವಾರಿಯರ್‌ಗಳಂತೆ ಕೆಲಸ ನಿರ್ವಹಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಹಲವು ದಾನಿಗಳ ನೆರವಿನಿಂದ ಇಂದು ಪಟ್ಟಣದಲ್ಲಿ ಸುಸಜ್ಜಿತ ಪತ್ರಕರ್ತರ ಭವನ



ನಿರ್ಮಾಣವಾಗಿದೆ. ಈ ಹಿಂದೆ ಭವನದ ನಿರ್ಮಾಣಕ್ಕೆ 3 ಲಕ್ಷ ನೀಡಿದ್ದೆ. ಮತ್ತೆ 3 ಲಕ್ಷ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು. ಜಿಪಂ ಮಾಜಿ ಸದಸ್ಯ ಡಿ. ರವಿಶಂಕರ್ ಮಾತನಾಡಿದರು.

ಇದೇ ವೇಳೆ ಹಿರಿಯ ಪತ್ರಕರ್ತರಾದ ಕೆ.ಟಿ.ರಮೇಶ್, ಎ.ಚೈತನ್ಯ, ಹೆಚ್.ಎಲ್. ಆನಂದ, ಪತ್ರಿಕಾ ವಿತರಕರಾದ ಡಿ.ಮಂಜುನಾಥ್, ವೀರರಾಜು ಅವರನ್ನು ಸನ್ಮಾನಿಸಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಎಸ್.ಕೀರ್ತನ, ಸಿ.ಎಂ.ಗಗನ್, ಎನ್.ಸ್ಪಂದನ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಮಾಜ ಸೇವಕರಾದ ಕೆ.ಎಲ್. ಹೇಮಂತ್ ಕುಮಾರ್ ಮತ್ತು ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನುದಿನಿ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ವೆಂಕಟೇಶ್, ಮೂಳೆತಜ್ಞ ಡಾ.ಮೆಹಬೂಬ್ ಖಾನ್, ಜಿಲ್ಲಾಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ರಾಜ್ಯ ಸಮಿತಿ ನಿರ್ದೇಶಕ ರಾಘವೇಂದ್ರ, ಸಂಘದ ಅಧ್ಯಕ್ಷ ವಿ.ಸಿ.ಶಿವರಾಮ್, ಕಾರ್ಯದರ್ಶಿ ರವಿಕುಮಾರ್ ಮಾತನಾಡಿದರು.

ಈ ವೇಳೆ ಉಪಾಧ್ಯಕ್ಷ ಎಸ್.ಬಿ.ಹರೀಶ್, ಕಾರ್ಯದರ್ಶಿ ಸಿ.ಸಿ.ಮಹದೇವ್, ಪುರಸಭಾ ಸದಸ್ಯ ಉಮೇಶ್, ಮುಖ್ಯಾಧಿಕಾರಿ ಡಾ.ಜಯಣ್ಣ ಮತ್ತು ಪತ್ರಕರ್ತರಾದ ಪಂಡಿತ್ ನಾಟಿಕಾರ್, ವಿನಯ್, ನಾಗೇಶ, ಕೆ.ವಿ.ಕೃಷ್ಣಮೂರ್ತಿ, ಮಹಮ್ಮದ್ ಶಬ್ಬೀರ್, ಮಧು, ಶಂಕರ್, ಯೋಗನಂದ್, ನಾಗಣ್ಣ ಸೇರಿದಂತೆ ಇನ್ನಿತರರಿದ್ದರು.

## ಕಾರ್ಖಾನೆ ಕಲುಷಿತ ನೀರಿನಿಂದ ತೆಂಗಿನ ಮರಗಳು ನಾಶ

ನಂಜನಗೂಡು, ಜು.28– ಕಾರ್ಖಾನೆಯ ಕಲುಷಿತ ನೀರಿನಿಂದ ನೂರಾರು ತೆಂಗಿನ ಮರಗಳು ನಾಶವಾಗಿರುವ ಘಟನೆ ಕೈಗಾರಿಕಾ ಪ್ರದೇಶದ ಕಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ವೆಂಕಟೇಶ್ ಮತ್ತು ಸಹೋದರರ 7 ಎಕರೆ ಜಮೀನಿನಲ್ಲಿದ್ದ ನೂರಾರು ತೆಂಗಿನ ಮರಗಳು ಸಂಪೂರ್ಣ ನಾಶವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ.

**ದೂರು, ಸ್ಥಳ ಪರಿಶೀಲನೆ:** ವಿಷಯ ತಿಳಿದು ಸ್ಥಳಕ್ಕಾಗಮಿಸಿದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಪರಿಶೀಲಿಸಿ ತೋಟಗಾರಿಕೆ, ಪರಿಸರ ಮಾಲಿನ್ಯ ಹಾಗೂ ಜುಬಿಲೆಂಟ್ ಕಾರ್ಖಾನೆಯವರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೋಟಗಾರಿಕೆ, ಪರಿಸರ ಮಾಲಿನ್ಯ, ಜುಬಿಲೆಂಟ್ ಕಾರ್ಖಾನೆ ಮುಖ್ಯಸ್ಥರು ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ ತೋಟಗಾರಿಕೆ ಮಹಾವಿದ್ಯಾಲಯದ ಬೇಸಾಯ ತಜ್ಞ ಪ್ರೊ.ಜನಾರ್ಧನ್ ನೇತೃತ್ವದ ಐವರ ತಂಡ ಜಮೀನಿನ ಮಣ್ಣು ಮತ್ತು ನೀರನ್ನು ಪರೀಕ್ಷೆಗಾಗಿ ಕೊಂಡೊಯ್ದಿದ್ದಾರೆ.

ಜಮೀನಿನ ಮಾಲೀಕ ವೆಂಕಟೇಶ್ ಮಾತನಾಡಿ, ಇಲ್ಲಿ ಕಾರ್ಖಾನೆ ಬರುವುದಕ್ಕೂ ಮುನ್ನ ನಮ್ಮ ತೋಟದಲ್ಲಿ ಫಲವತ್ತಾದ ಫಸಲು ಬರುತ್ತಿತ್ತು. ಈಗ ಕಾರ್ಖಾನೆ ಕಲುಷಿತ ನೀರಿನಿಂದಾಗಿ ಮರಗಳು ನಾಶವಾಗಿ ಯಾವುದೇ ಬೆಳೆ ಕೈ ಹತ್ತದೆ ಸಂಕಷ್ಟದಲ್ಲಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಕಾರ್ಖಾನೆಯವರಿಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ, ಶಾಸಕರಿಗೆ, ಸಚಿವರಿಗೆ, ಮುಖ್ಯಮಂತ್ರಿಯಾದಿಯಾಗಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದರು. ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿದರು. ಈ ವೇಳೆ ರೈತ ಮುಖಂಡರಾದ ರಘು, ಸತೀಶ್ ರಾವ್, ಶಿವಣ್ಣ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಚಂದ್ರು, ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಸಿದ್ದಪ್ಪ, ಡಾ.ಶೀಲಾರಾಣಿ, ಡಾ.ಕಿರಣ್ ಕುಮಾರ್ ಹಾಗೂ ಕಾರ್ಖಾನೆ ಸಿಬ್ಬಂದಿ ಉಪಸ್ಥಿತರಿದ್ದರು.




ನಂಜನಗೂಡು ತಾಲೂಕಿನ ಅಡಕನಹಳ್ಳಿಯಲ್ಲಿ ಏಷಿಯನ್ ಪೇಂಟ್ಸ್ ಹಾಗೂ ನ್ಯಾಷನಲ್ ಆಗ್ರೋ ಫೌಂಡೇಶನ್ ಕಂಪನಿಯಿಂದ ರೈತರಿಗೆ ಹನಿ ನೀರಾವರಿ ಬಗ್ಗೆ ಅರಿವು ಮೂಡಿಸಲಾಯಿತು. ಈ ವೇಳೆ ಸಂಪನ್ಮೂಲ ವ್ಯಕ್ತಿ ಮಹೇಶ್, ಎನ್‌ಎಎಫ್ ಸಿಬ್ಬಂದಿ ಹಾಜರಿದ್ದರು.

## ವಿದ್ಯಾರ್ಥಿಗಳಿಂದ ಗ್ರಾಮ ಪಂಚಾಯಿತಿ ಭೇಟಿ



ಸಾಲಿಗ್ರಾಮ, ಜು.28– ತಾಲೂಕಿನ ಪ್ರಥಮ ದರ್ಜೆ ಕಾಲೇಜು ಹಾಗೂ ಸಾಲಿಗ್ರಾಮ ಗ್ರಾಪಂ ಸಹಕಾರದೊಂದಿಗೆ ಕಾಲೇಜಿನ ಅಂತಿಮ ವರ್ಷದ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಾಮ ಪಂಚಾಯಿತಿಯ ಕಾರ್ಯ ಕಲಾಪಗಳು ಮತ್ತು ಗ್ರಾಮ ಪಂಚಾಯಿತಿಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಮಾತನಾಡಿ, ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕರಿಗೆ ಲಭ್ಯವಿರುವ ಕಾರ್ಯ ಕ್ರಮಗಳ ಬಗ್ಗೆ ಸವಿವರವಾದ ಮಾಹಿತಿಯನ್ನು ನೀಡಿದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಸುಧಾ ರೇವಣ್ಣ ಅವರು ವಿದ್ಯಾರ್ಥಿಗಳು ಸಮಾಜದಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದರ ಮುಖಾಂತರ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಎ.ಎಸ್. ರಾಜೇಶ ಗ್ರಾಮೀಣಾಭಿವೃದ್ಧಿಯಲ್ಲಿ ಯುವ ಜನತೆಯ ಪಾತ್ರ ಕುರಿತು ಉಪನ್ಯಾಸ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಧಾ ರೇವಣ್ಣ, ಕಾರ್ಯದರ್ಶಿ ಶ್ರೀನಿವಾಸ್, ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


## ದೊಡ್ಡಹೆಜ್ಜೂರು ಗ್ರಾಪಂಗೆ ಸುಭಾಷ್ ಅಧ್ಯಕ್ಷ



ಹನಗೋಡು, ಜು.28– ತಾಲೂಕಿನ ದೊಡ್ಡಹೆಜ್ಜೂರು ಗ್ರಾಪಂ ನೂತನ ಅಧ್ಯಕ್ಷರಾಗಿ ಸುಭಾಷ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 14 ಸದಸ್ಯ ಬಲದ ಗ್ರಾಪಂನ ಈ ಹಿಂದಿನ ಅಧ್ಯಕ್ಷ ಶಿವಶಂಕರ್ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಂಡು ಅವರನ್ನು ಪದಚ್ಯುತಿಗೊಳಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸುಭಾಷ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜು ಘೋಷಿಸಿದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಅಂಬಿಕಾ, ಸದಸ್ಯರಾದ ವೆಂಕಟೇಶ್, ಸಾವಿತ್ರಮ್ಮ, ಯಶೋಧ, ಲಕ್ಷ್ಮೀ, ನಟರಾಜ್, ಗೀತಾ, ಶ್ರೀನಿವಾಸ್, ಗೌರಮ್ಮ, ವಿಜಯ್, ಗಣೇಶ, ಬಸವರಾಜ್, ಕೆ.ಪಿ.ದೇವರಾಜ್, ಚಂದ್ರಶೇಖರ, ಹನಗೋಡು ಸೊಸೈಟಿ ಅಧ್ಯಕ್ಷ ರವಿಕುಮಾರ್, ರಾಜೇಗೌಡ , ಬಸವಲಿಂಗಯ್ಯ, ನಗರಸಭಾ ಸದಸ್ಯ ಸತೀಶ್, ಪ್ರಭಾಕರ್, ಕೃಷ್ಣೇಗೌಡ, ಗ್ರಾಮದ ಮುಖಂಡರಿದ್ದರು.



ಹುಲ್ಲಹಳ್ಳಿ ಪೊಲೀಸ್ ಠಾಣೆ ನೂತನ ಎಸ್‌ಐ ಕೃಷ್ಣಕಾಂತ್ ಕೋಳಿ ಅವರನ್ನು ಗ್ರಾಪಂ ಅಧ್ಯಕ್ಷ ಹೆಚ್.ಎನ್.ಮಹೇಶ್, ಸದಸ್ಯರಾದ ಹೆಚ್.ಜೆ.ಮಲ್ಲಿಕಾರ್ಜುನ, ಶಿವಣ್ಣ, ಸೋಮ, ಶ್ರೀಕಂಠೇಶ್ವರ ಆಗ್ರೋ ಸೋಮಶೇಖರ್, ಅಶೋಕ್, ರತ್ನಮ್ಮ, ಶ್ರೀವಿದ್ಯಾ ಸನ್ಮಾನಿಸಿದರು

## ಕೋಟೆಯಲ್ಲಿ ಶೀಘ್ರ ಪತ್ರಕರ್ತರ ಭವನ ನಿರ್ಮಾಣ

### ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ

ಹೆಚ್.ಡಿ.ಕೋಟೆ, ಜು.28– ಪಟ್ಟಣದಲ್ಲಿ ಪತ್ರಕರ್ತರ ಭವನಕ್ಕೆ ನಿವೇಶನ ಕಲ್ಪಿಸಿ, ಶೀಘ್ರ ಭವನ ನಿರ್ಮಿಸಿ ಕೊಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದ ಜೈನ ಭವನದಲ್ಲಿ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕು ಪತ್ರಕರ್ತರ ಜೊತೆ ಬಹಳಷ್ಟು ಒಡನಾಟವಿದ್ದು, ನನ್ನ 4 ವರ್ಷದ ಅಧಿಕಾರವಧಿಯಲ್ಲಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಪತ್ರಕರ್ತರಿಗೆ ನಿವೇಶನ ಕಲ್ಪಿಸಿ, ನೂತನ ಭವನ ನಿರ್ಮಾಣ ಮಾಡಿಕೊಡುವ ಜವಾಬ್ದಾರಿ ನನ್ನದು ಎಂದರು.

ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು, ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಉತ್ತಮ ಸ್ನೇಹ ಹೊಂದಿರಬೇಕು. ಕೆಲವು ವೇಳೆ ಅವರ ವಿರುದ್ಧ ಯಾವುದೇ ಭಯವಿಲ್ಲದೇ ಧ್ವನಿ ಎತ್ತುವ ಕೆಲಸ ಮಾಡಬೇಕು. ಪತ್ರಕರ್ತರು ಸಮಾಜಮುಖಿಯಾಗಿ ಕೆಲಸ ಮಾಡುವಾಗ ಇಂತಹ ಸನ್ನಿವೇಶ ಸೃಷ್ಟಿಯಾಗುವುದು ಸಹಜ. ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳದೆ ಸಮಾಜದ ಒಳಿತಿಗಾಗಿ ಕೆಲಸ ಮಾಡಿ ಎಂದು ಸಲಹೆ ನೀಡಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಹೆಚ್.ಡಿ.ಕೋಟೆ ತಾಲೂಕು ಪತ್ರಕರ್ತರು ಯಾವುದೇ ಸಮಸ್ಯೆ ಬಾರದ ಹಾಗೆ ಒಗ್ಗಟ್ಟಿನಿಂದ ಸಂಘ ಮುನ್ನಡೆಸಿಕೊಂಡು ಹೋಗುತ್ತಿರುವುದು ನಿಜಕ್ಕೂ ಸಂತೋಷದ ವಿಚಾರ ಎಂದ ಅವರು, ಗ್ರಾಮೀಣ ಪತ್ರಕರ್ತರು ಸಂಕಷ್ಟದ ನಡುವೆ ಜೀವನ ಸಾಗಿಸುತ್ತಿದ್ದು, ಅವರಿಗೆ ನಿವೇಶನ ಕೊಡಿಸುವ ವಿಚಾರವಾಗಿ ಸಾಕಷ್ಟು ಪ್ರಯತ್ನ ನಡೆಯುತ್ತಿವೆ ಎಂದರು.



ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪತ್ರಕರ್ತರ ಮಕ್ಕಳಾದ ವಿಶ್ವಾಸ್‌ಗೌಡ, ಬೆನಕ ಮತ್ತು ನಿಸರ್ಗ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ರಾಜ್ಯ ನಿರ್ದೇಶಕ ರಾಘವೇಂದ್ರ ಜಿಲ್ಲಾ ನಿರ್ದೇಶಕ ಎಂ.ಎಲ್. ರವಿಕುಮಾರ್, ಸರಗೂರು ತಹಸೀಲ್ದಾರ್ ಚೆಲುವರಾಜು, ಪುರಸಭಾ ಮುಖ್ಯಾಧಿಕಾರಿ ಸುರೇಶ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಪ್ರಧಾನ ಕಾರ್ಯದರ್ಶಿ ಎಸ್.ಆರ್. ನಾಗರಾಮ, ಉಪಾಧ್ಯಕ್ಷ ಮಂಜುಕೋಟೆ, ಸಹ ಕಾರ್ಯದರ್ಶಿ ಬೀಚನಹಳ್ಳಿ ಮಂಜು, ಖಜಾಂಚಿ ದೊಡ್ಡಸಿದ್ದು, ನಿರ್ದೇಶಕರಾದ ಪುರುಷೋತ್ತಮ, ನಾಗೇಶ್ ಹಂಪಾಪುರ, ಶರವಣ, ಚಿಕ್ಕಣ್ಣಗೌಡ, ಆನಂದ, ಮಹೇಶ, ಸದಸ್ಯರಾದ ವಾಸುಕಿ ನಾಗೇಶ, ಜಿ.ರವಿ, ದಾಸೇಗೌಡ, ರಂಗರಾಜು ಸಿ.ಎನ್.ರಘು, ಪ್ರಮೋದ, ನಿಂಗಣ್ಣ ಕೋಟೆ, ಪುಟ್ಟರಾಜು, ನಂದಕುಮಾರ್, ಶ್ರೀನಿಧಿ, ಪತ್ರಕರ್ತರು ಹಾಜರಿದ್ದರು.



## ಬಾಲಕಿಯರ ಪ್ರೌಢಶಾಲೆಯಲ್ಲಿ ಶೌಚಾಲಯ ಉದ್ಘಾಟನೆ

ತಿ.ನರಸೀಪುರ, ಜು.28– ಪ್ರತಿಯೊಬ್ಬರೂ ಸಮಾಜಕ್ಕೆ ತಮ್ಮ ಕೈಲಾದಷ್ಟು ನೆರವು ನೀಡಬೇಕು ಎಂದು ಪುರಸಭಾ ಸದಸ್ಯ ಅರ್ಜುನ್ ತಿಳಿಸಿದರು.



ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ತಮ್ಮ ವೈಯಕ್ತಿಕ ಹಣದಲ್ಲಿ ನಿರ್ಮಿಸಿದ 2 ಶೌಚಾಲಯಗಳನ್ನು ವಿದ್ಯಾರ್ಥಿನಿಯಿಂದ ಉದ್ಘಾಟಿಸಿ ಮಾತನಾಡಿದ ಅವರು, ನಾನು ಈ ಶಾಲೆಗೆ ಭೇಟಿ ನೀಡಿದ ವೇಳೆ ಪರಿಸ್ಥಿತಿ ತುಂಬಾ ಕೆಟ್ಟದಾಗಿತ್ತು. ಹೆಣ್ಣು ಮಕ್ಕಳಿಗೆ ಅಗತ್ಯ ಮೂಲ ಸೌಲಭ್ಯದ ಕೊರತೆ ಇತ್ತು. ಈ ವೇಳೆ ವಿದ್ಯಾರ್ಥಿನಿಯೊಬ್ಬಳು ಅನೇಕ ಶಾಸಕರು, ಸಚಿವರಾದಿಯಾಗಿ ಎಲ್ಲಾ ಜನಪ್ರತಿನಿಧಿಗಳು ಬಂದು ಹೋದರೂ ಏನು ಪ್ರಯೋಜನವಾಗಿಲ್ಲ. ನೀವು ಹಾಗೆಯೇ ಎಂದು ಪ್ರಶ್ನಿಸಿದ್ದಳು. ನಾನು ಅಂದೇ ನಿರ್ಧರಿಸಿ ಶಾಲೆಗೆ ಶೌಚಾಲಯ ನಿರ್ಮಿಸಲು ಸೂಚಿಸಿದೆ. ಇಂದು ಶೌಚಾಲಯ ಕಾಮಗಾರಿ ಪೂರ್ಣಗೊಂಡಿದೆ. ನನ್ನ ಕೈಲಾದಷ್ಟು ಮಾಡಿದ್ದೇನೆ. ಪ್ರತಿಯೊಬ್ಬರು ಮಾನವೀಯತೆಯಿಂದ ನೋಡಬೇಕು. ಇದು ನನ್ನ ಕ್ಷೇತ್ರವಲ್ಲ. ಆದರೂ ನನ್ನೂರಿನ ಓರ್ವ ಪ್ರಜೆಯಾಗಿ ಮಾಡಿದ್ದೇನೆ. ದೇವರು ಶಕ್ತಿ ನೀಡಿದರೆ ಮುಂಬರುವ ದಿನಗಳಲ್ಲಿ ಶಾಲೆಯಲ್ಲಿ ಒಂದು ಕಂಪ್ಯೂಟರ್ ಪ್ರಯೋಗಾಲಯ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಈ ವೇಳೆ ಬಾಲಕಿಯರ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕಿ ಎಸ್.ಜ್ಞಾನೇಶ್ವರಿ, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ್, ಬಾಬು ಜಗಜೀವನ್ ರಾಂ ತಾಲೂಕು ಅಧ್ಯಕ್ಷ ಶಂಕರ್, ಉಪಾಧ್ಯಕ್ಷ ಗೋವಿಂದರಾಜು, ಲಿಂಗರಾಜು, ರಾಜುಗೌಡ, ರಾಜಣ್ಣ, ಆಲಗೂಡು ರಾಜು, ಶಿಕ್ಷಕರಾದ ಜೀನತ್ ಉನ್ನಿಸಾ, ಸೈಯದ್ ಅಫ್ತಾರ ಬಾನು, ಜಿ.ಮಹೇಶ್, ಬಿ.ಭಾರತಿ, ಜೆ.ಅನಿತಾ, ಅನುರಾಧ ನಾಯಕ್, ಎಸ್‌ಡಿಎಂಸಿ ಅಧ್ಯಕ್ಷರು ಇನ್ನಿತರರಿದ್ದರು.

## ಚಿನ್ನತಾಯಮ್ಮ ನಿಧನ



ಹುಣಸೂರು, ಜು.28– ನಗರದ ಸ್ಟೋರ್ ಬೀದಿ ನಿವಾಸಿ ಲೇ.ಹೆಚ್.ಕೆ.ಕೃಷ್ಣಪ್ಪ ಅವರ ಪತ್ನಿ ಚಿನ್ನತಾಯಮ್ಮ(86) ಮಂಗಳವಾರ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಕಲ್ಕುಣಿಕೆ ನಾಯಕರ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಇಂದು ವಿಶ್ವ ಹುಲಿಗಳ ದಿನ

# ಹುಲಿ ಸಂತತಿ ಸಂರಕ್ಷಣೆ ಕರ್ನಾಟಕದ ಹೆಗ್ಗಳಿಕೆ

- ಹುಲಿ ಸಂಖ್ಯೆಯಲ್ಲಿ ಪಾರುಪತ್ಯ ಮುಂದುವರೆಸಿದ ಹಳೆ ಮೈಸೂರು
- ಅರಣ್ಯ ಇಲಾಖೆ ದಿಟ್ಟ ಕ್ರಮದಿಂದ ಹುಲಿ ಸಂತತಿಯಲ್ಲಿ ಸುಧಾರಣೆ

● ಎಂ.ಟಿ.ಯೋಗೇಶ್‌ಕುಮಾರ್



ಮೈಸೂರು, ಜು.28– ಬೇಟೆಗಾರರ ಹಾವಳಿ ಸೇರಿದಂತೆ ವಿವಿಧ ಕಾರಣಗಳಿಂದ ಅಳಿವಿನಂಚಿಗೆ ತಲುಪಿದ್ದ ಹುಲಿಗಳ ಸಂತತಿ, ಸದ್ಯ ಈಗ ಗಣನೀಯ ಪ್ರಮಾಣದಲ್ಲಿ ಚೇತರಿಕೆ ಕಂಡು ಬಂದಿದೆ.

ಭಾರತ, ಬಾಂಗ್ಲಾ, ವಿಯೆಟ್ನಾಂ, ಇಂಡೋನೇಷಿಯಾ, ಸೌತ್ ಚೈನಾ ಸೇರಿದಂತೆ 13 ರಾಷ್ಟ್ರಗಳಲ್ಲಿ ಮಾತ್ರ ಹುಲಿ ಸಂತತಿ ಉಳಿದಿದೆ ಬೇಟೆ ಹಾಗೂ ಮಾನವ–ಪ್ರಾಣಿ ಸಂಘರ್ಷದಿಂದ ಹುಲಿಗಳು ಅಸಹಜವಾಗಿ ಸಾವನ್ನಪ್ಪುತ್ತಿವೆ. ಆದರೂ ಅರಣ್ಯ ಇಲಾಖೆ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮದಿಂದ ಹುಲಿಗಳ ಸಂತತಿ ವೃದ್ಧಿಸಿದೆ. 2018ರ ರಾಷ್ಟ್ರೀಯ ಹುಲಿ ಗಣತಿ(ಟೈಗರ್ ಎಸ್ಟಿಮೇಷನ್) ಪ್ರಕಾರ 13 ರಾಷ್ಟ್ರಗಳಿಂದ 3,900ಕ್ಕೂ ಹೆಚ್ಚು ಹುಲಿಗಳಿರುವುದು ದೃಢಪಟ್ಟಿದೆ.

ಅವುಗಳಲ್ಲಿ ಭಾರತದಲ್ಲಿಯೇ 2,967 ಹುಲಿಗಳಿವೆ. ವಿಶ್ವದಲ್ಲಿರುವ ಹುಲಿಗಳ ಸಂಖ್ಯೆಯಲ್ಲಿ ಭಾರತದಲ್ಲಿ ಶೇ.80ರಷ್ಟಿದ್ದು, ದೇಶದಲ್ಲಿ ಹುಲಿ ಸಂತತಿಯ ಬೆಳವಣಿಗೆಗೆ ಹಿತಕರ ವಾತಾವರಣವಿರುವ ಜೊತೆಗೆ ಅರಣ್ಯ ಇಲಾಖೆ ಕೈಗೊಂಡ ಕಟ್ಟುನಿಟ್ಟಿನ ಕ್ರಮದಿಂದ ಹುಲಿಗಳ ಸಂತತಿ ವೃದ್ಧಿ ಸಾಧ್ಯವಾಗುತ್ತಿದೆ. 2010ರಲ್ಲಿದ್ದ ಪರಿಸ್ಥಿತಿಯನ್ನು ಅವಲೋಕಿಸಿದರೆ ಪ್ರಸ್ತುತ ಹುಲಿಗಳ ಸಂಖ್ಯೆಯಲ್ಲಿ ಶೇ.24ರಷ್ಟು ಹೆಚ್ಚಳವಾಗಿದೆ.

**53 ಹುಲಿ ಸಂರಕ್ಷಿತ ಪ್ರದೇಶ:** ಒಂದು ಶತಮಾನದ ಹಿಂದಕ್ಕೆ ಹೋಲಿಸಿದರೆ ಪ್ರಸ್ತುತ ವಿಶ್ವದಲ್ಲೇ ಗಣನೀಯ ಪ್ರಮಾಣದಲ್ಲಿ ಹುಲಿಗಳ ಸಂಖ್ಯೆ ಕ್ಷೀಣಿಸಿದೆ. ಬೇಟೆ ಮತ್ತಿತರ ಕಾರಣಕ್ಕೆ ರಾಜರು ಮತ್ತು ಬ್ರಿಟಿಷರ ಅವಧಿಯಲ್ಲಿ ನಮ್ಮ ದೇಶದ ಅರಣ್ಯ ವ್ಯಾಪ್ತಿ ಜೊತೆಗೆ ಹುಲಿಗಳ ಜನಸಂಖ್ಯೆಯೂ ತೀವ್ರವಾಗಿ ಕ್ಷೀಣಿಸಿತು.

1970ರ ದಶಕದಲ್ಲಿ ಹುಲಿಗಳ ರಕ್ಷಣೆಗೆ ಆದ್ಯತೆ ನೀಡಲಾಯಿತು. ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರ ಗಮನಕ್ಕೆ ತಂದು ಹುಲಿಗಳ ಸಂರಕ್ಷಣೆಗೆ ಕಾರ್ಯಕ್ರಮ ರೂಪಿಸಿ, ಸೇರಿದಂತೆ 9 ಅರಣ್ಯ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಲಾಯಿತು. ಇದೀಗ ದೇಶದಲ್ಲಿ 103 ರಾಷ್ಟ್ರೀಯ ಉದ್ಯಾನಗಳು, 544 ವನ್ಯಜೀವಿ ತಾಣಗಳಿವೆ. ಈ ಪೈಕಿ ರಾಜ್ಯದ ಐದು ಸೇರಿದಂತೆ 53 ಅರಣ್ಯ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಲಾಗಿದೆ. ದೇಶದಾದ್ಯಂತ ಈವರೆಗೆ ಹುಲಿ ಸಂರಕ್ಷಿತ ಪ್ರದೇಶದಿಂದ 11,188 ಕುಟುಂಬಗಳನ್ನು ಸ್ಥಳಾಂತರಿಸಲಾಗಿದ್ದು, ಇನ್ನೂ 40,000 ಕುಟುಂಬಗಳು ಹುಲಿ ಮೀಸಲು ಪ್ರದೇಶದಲ್ಲೇ ನೆಲೆಸಿವೆ.

**4 ವರ್ಷಕ್ಕೊಮ್ಮೆ ಗಣತಿ:** ಪ್ರತಿ ನಾಲ್ಕು ವರ್ಷಕ್ಕೊಮ್ಮೆ ರಾಷ್ಟ್ರ ಮಟ್ಟದಲ್ಲಿ ಗಣತಿ ನಡೆಸಲಾಗುತ್ತದೆ. 2006 ರಲ್ಲಿ ನಡೆಸಿದ ಗಣತಿಯಲ್ಲಿ ಭಾರತದಲ್ಲಿ 1,411, 2010ರಲ್ಲಿ 1,706 ಹಾಗೂ 2014ರಲ್ಲಿ 2226 ಹುಲಿಗಳಿದ್ದವು. ಹುಲಿ ಸಂಖ್ಯೆಯು ಹೆಚ್ಚಾದರೂ ಅವುಗಳ ಆವಾಸ ಸ್ಥಾನಕ್ಕೆ ಅರಣ್ಯ ಪ್ರದೇಶದ ಪ್ರಮಾಣ ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಣೆ ಮಾಡಿ ವನ್ಯಜೀವಿಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. 2018ರಲ್ಲಿ ನಡೆದ ಸಮೀಕ್ಷೆಯಲ್ಲಿ 2,967 ಹುಲಿಗಳು ಕಂಡು ಬಂದಿವೆ. ಈ ಸಾಲಿನ (2022) ಸಮೀಕ್ಷೆ ಈಗಾಗಲೇ ನಡೆದಿದ್ದು, ಅದರ ವರದಿ ಕೇಂದ್ರ ಸರ್ಕಾರದ ಬಳಿ ಇದೆ. ವಿಶ್ವ ಹುಲಿಗಳ ದಿನವಾದ ನಾಳೆ (ಜು.29) ವರದಿ ಬಿಡುಗಡೆಗೊಳ್ಳುವ ಸಂಭವವಿದ್ದು, ಮತ್ತೊಮ್ಮೆ ಕರ್ನಾಟಕ ಹುಲಿಗಳ ಸಂತತಿಯಲ್ಲಿ ಮುನ್ನಡೆ ಸಾಧಿಸುವ ಎಲ್ಲಾ ಲಕ್ಷಣಗಳಿವೆ.

**ಹುಲಿಗಳ ತವರು ಹಳೆ ಮೈಸೂರು:** ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ 3 ಹುಲಿ ಸಂರಕ್ಷಿತ ಪ್ರದೇಶಗಳಿವೆ. ರಾಜ್ಯದ ಮೊಟ್ಟದ ಮೊದಲ ಹುಲಿ ಸಂರಕ್ಷಿತ ಪ್ರದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆ ವ್ಯಾಪ್ತಿಗೆ ಸೇರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವು 1,020 ಚ.ಕಿ.ಮೀ ವ್ಯಾಪ್ತಿಯಲ್ಲಿ ಚಾಚಿಕೊಂಡಿದ್ದು, ಈ ಬಾರಿ 170ರಿಂದ 200ಕ್ಕೂ ಹೆಚ್ಚು ಹುಲಿಗಳು ಸಮೀಕ್ಷೆಯಲ್ಲಿ ಕಂಡುಬರುವ ನಿರೀಕ್ಷೆ ಇದೆ.

ಮೈಸೂರು ಹಾಗೂ ಕೊಡಗು ಜಿಲ್ಲೆಗೆ ಸೇರಿರುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವು 200 ಚ.ಕಿ.ಮೀ ಬಫರ್ ಜೋನ್ ಸೇರಿದಂತೆ 843 ಚ.ಕಿ.ಮೀ. ವಿಸ್ತಾರ ಹೊಂದಿದ್ದು, ಕಳೆದ ಬಾರಿ 125ಕ್ಕೂ ಹುಲಿಗಳು ಇಲ್ಲಿ ಕಂಡು ಬಂದಿವೆ. ಈ ಬಾರಿ ಅಂತರಸಂತೆ, ಕಬಿನಿ ಸೇರಿದಂತೆ ವಿವಿಧೆಡೆ ಹುಲಿಗಳ ಮರಿಗಳು ಕಂಡು ಬಂದಿರುವುದರಿಂದ ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವ ನಿರೀಕ್ಷೆ ಹೊಂದಲಾಗಿದೆ.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ ಹುಲಿ ಸಂರಕ್ಷಿತ ಪ್ರದೇಶ 572 ಚದರ ಕಿ.ಮೀ ವ್ಯಾಪ್ತಿಯಲ್ಲಿ ವಿಸ್ತರಿಸಿದ್ದು, ಆರು ರೇಂಜ್, ಎರಡು ಉಪವಿಭಾಗದಿಂದ ಕಳೆದ ಬಾರಿ 55–65 ಹುಲಿಗಳು ಕಂಡು ಬಂದಿದ್ದವು. ರಾಜ್ಯದ ನೂತನ ಹುಲಿ ಸಂರಕ್ಷಿತ ಪ್ರದೇಶವಾಗುವ ಹೊಸ್ತಿಲಲ್ಲಿರುವ ಮಲೆ ಮಹಾದೇಶ್ವರ ಬೆಟ್ಟ ಅರಣ್ಯ ಪ್ರದೇಶವು 920 ಚ.ಕಿ.ಮೀ. ವಿಸ್ತಾರವಾದ ಪ್ರದೇಶವಾಗಿದೆ. ಇಲ್ಲಿ 7 ರೇಂಜ್, 3 ಉಪ ವಿಭಾಗಗಳಲ್ಲಿ 23–30 ಹುಲಿಗಳು ವಾಸಿಸುತ್ತಿವೆ.

### ಹುಲಿಗಳಿಗೆ ಹಿತಕರ ವಾತಾವರಣ

"ಬಂಡೀಪುರ, ನಾಗರಹೊಳೆ ಸೇರಿದಂತೆ ರಾಜ್ಯದ ಬಹುತೇಕ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿಗಳಿಗೆ ಉತ್ತಮ ವಾತಾವರಣವಿದೆ. ಹುಲಿ ಸಂರಕ್ಷಣೆಯೊಂದಿಗೆ ವನ್ಯ ಸಂಪತ್ತು ರಕ್ಷಣೆಗೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಬೇಟೆಗಾರರ ಹಾವಳಿ ನಿಯಂತ್ರಣದಲ್ಲಿದ್ದರೂ ಹುಲಿಗಳ ಬೇಟೆ ನಿಂತಿಲ್ಲ. ಕಳೆದ ವರ್ಷ 74 ಹುಲಿಗಳು ಮೃತಪಟ್ಟಿವೆ. 2018ರಿಂದ 2020ರವರೆಗೆ 108 ಹುಲಿ ಚರ್ಮವನ್ನು ವಶಪಡಿಸಿಕೊಳ್ಳಲಾಗಿದೆ. ನಮ್ಮ ಅರಣ್ಯ ಪ್ರದೇಶದಲ್ಲಿ ಹುಲಿಗಳ ಆಹಾರವಾದ ಜಿಂಕೆ, ಸಾಂಬಾರ್, ಕಾಡೆಮ್ಮೆಗಳ ಸಂಖ್ಯೆಯೂ ಯಥೇಚ್ಛವಾಗಿರುವುದು ಹುಲಿಗಳ ಸಂತತಿ ವೃದ್ಧಿಗೆ ಕಾರಣ. ಹುಲಿ ಸರಹದ್ದು ಇದೀಗ 20 ಚ.ಕಿ.ಮೀ. ವ್ಯಾಪ್ತಿಯಿಂದ 5 ಚ.ಕಿ.ಮೀ. ವ್ಯಾಪ್ತಿಗೆ ಕಡಿಮೆ ಮಾಡಲಾಗಿದೆ. ಅರಣ್ಯ ಪ್ರದೇಶ ವಿಸ್ತರಿಸಲು ಹಾಗೂ ಇರುವ ಅರಣ್ಯ ಪ್ರದೇಶ ಉಳಿಸಲು ಕ್ರಮಗಳು ಆಗಬೇಕಿದೆ.

–ರಾಜಕುಮಾರ್ ಡಿ.ಅರಸ್, ಮುಖ್ಯಸ್ಥರು, ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್

## 17 ವರ್ಷಕ್ಕಿಂತ ಮೇಲ್ಪಟ್ಟವರು ಮತದಾರರಾಗಲು ಮುಂಚಿತವಾಗಿ ನೋಂದಾಯಿಸಿಕೊಳ್ಳಿ

ನವದೆಹಲಿ: ಮತದಾನದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಆಯೋಗವು 17 ವರ್ಷಕ್ಕಿಂತ ಮೇಲ್ಪಟ್ಟವರು 18 ವರ್ಷ ತುಂಬಿದ ನಂತರ ಮತದಾರರಾಗಿ ನೋಂದಾಯಿಸಲು ಮುಂಗಡವಾಗಿ ಅರ್ಜಿ ಸಲ್ಲಿಸಬಹುದು ಎಂದು ಗುರುವಾರ ಹೇಳಿದೆ.

ಇತ್ತೀಚಿನವರೆಗೂ, ನಿರ್ದಿಷ್ಟ ವರ್ಷದ ಜನವರಿ 1ರಂದು ಅಥವಾ ಅದಕ್ಕಿಂತ ಮೊದಲು 18 ವರ್ಷ ತುಂಬಿದ ಜನರು ಮಾತ್ರ ಮತದಾರರ ಪಟ್ಟಿಯಲ್ಲಿ ತಮ್ಮನ್ನು ತಾವು ನೋಂದಾಯಿಸಿಕೊಳ್ಳಲು ಅರ್ಹರಾಗಿದ್ದರು. ಜನವರಿ 1ರ ನಂತರ 18 ವರ್ಷ ತುಂಬಿದರೂ ಮತದಾರರಾಗಿ ನೋಂದಾಯಿಸಲು ಒಂದು ವರ್ಷ ಪೂರ್ತಿ ಕಾಯಬೇಕಾಗಿತ್ತು. ಚುನಾವಣಾ ಕಾನೂನಿನ ಬದಲಾವಣೆಯ ನಂತರ, ಜನರು ಜನವರಿ 1, ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1ರಂದು 18ನೇ ವರ್ಷಕ್ಕೆ ಕಾಲಿಟ್ಟಾಗ ಮತದಾರರಾಗಿ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಚುನಾವಣಾ ಸಮಿತಿಯು 17 ವರ್ಷಕ್ಕಿಂತ ಮೇಲ್ಪಟ್ಟ, ಇನ್ನೂ 18 ವರ್ಷ ತುಂಬದ ಜನ ಮತದಾರರಾಗಿ ಮುಂಚಿತವಾಗಿ ನೋಂದಾಯಿಸಿಕೊಳ್ಳಲು ತಂತ್ರಜ್ಞಾನ ಅಭಿವೃದ್ಧಿಪಡಿಸುವಂತೆ ರಾಜ್ಯ ಚುನಾವಣಾ ಆಯೋಗಗಳಿಗೆ ನಿರ್ದೇಶನ ನೀಡಿದೆ.

## ಅತ್ಯುನ್ನತ ಶ್ರೇಣಿಯಲ್ಲಿ ಅಂಜಲಿ ತೇರ್ಗಡೆ



ಮೈಸೂರು,ಜು.28–ಮೈಸೂರಿನ ವಿಜಯನಗರ 2ನೇ ಹಂತದ ಮಾನಸರೋವರ ಪುಷ್ಕರಣಿ ವಿದ್ಯಾಶ್ರಮದ ವಿದ್ಯಾರ್ಥಿನಿ ಅಂಜಲಿ ಎ.ಕುಮಾರ್, ಎಐಎಸ್ ಎಸ್ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ.97.4ರಷ್ಟು ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಈಕೆ ಕುವೆಂಪುನಗರ ನಿವಾಸಿ ಎಸ್.ಅನಿಲ್‌ಕುಮಾರ್ ಹಾಗೂ ವಂದಿತಾ ಅನಿಲ್ ದಂಪತಿ ಪುತ್ರಿ.

## ಬ್ರಾಹ್ಮಣ ಧರ್ಮ ಸಹಾಯ ಸಭಾದಿಂದ ಉಪಾಕರ್ಮ

ಮೈಸೂರು,ಜು.28–ಬ್ರಾಹ್ಮಣ ಧರ್ಮ ಸಹಾಯ ಸಭಾ ಆಶ್ರಯದಲ್ಲಿ ಕೃಷ್ಣಸ್ವಾಮಿ ಶಾಸ್ತ್ರಿಗಳು ಹಾಗೂ ಶ್ರೀನಾಥ ಶಾಸ್ತ್ರಿಗಳ ನೇತೃತ್ವದಲ್ಲಿ ಆ.2ರಂದು ಋಗ್‌ಉಪಾಕರ್ಮ, 11ರಂದು ಯಜುರ್ ಉಪಾಕರ್ಮವನ್ನು ತ್ರಿಮತಸ್ಥ ಬ್ರಾಹ್ಮಣರಿಗಾಗಿ ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಸಂಜೆ 6.30 ಗಂಟೆಗೆ ಏರ್ಪಡಿಸಲಾಗಿದೆ. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು 1 ದಿನ ಮುಂಚಿತವಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕೆಂದು ಕೋರಲಾಗಿದೆ. ಮಾಹಿತಿಗೆ ದೂ. 0821–2446498 ಸಂಪರ್ಕಿಸಿ.

## ಜು.31, ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು,ಜು.28–ವಿಶ್ವಮಾನವ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಜು.31ರಂದು ಬೆಳಗ್ಗೆ 11ಕ್ಕೆ ಸಂಘದ ಕಚೇರಿ ಆವರಣದಲ್ಲಿ ನಡೆಯಲಿದೆ ಎಂದು ನರಸೇಗೌಡ ತಿಳಿಸಿದ್ದಾರೆ.



## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ಅನುಸೂಚಿಯಲ್ಲಿ ವರ್ಣಿಸಿರುವ ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ವರುಣಾ ಹೋಬಳಿ, ದುದ್ದಗೆರೆ ಗ್ರಾಮದ ಸರ್ವೆ ನಂ.149 ರ 14 ಎಕರೆ 25 ಗುಂಟೆ ಪೈಕಿ 8 ಎಕರೆ 25 ಗುಂಟೆ ಹಾಗೂ ಸರ್ವೆ ಸಂ. 151 ರ 7 ಎಕರೆ 32 ಗುಂಟೆ ಪೈಕಿ 2 ಎಕರೆ ಮತ್ತು 2 ಎಕರೆ 16 ಗುಂಟೆ ಜಮೀನುಗಳನ್ನು, ನನ್ನ ಕಕ್ಷಿದಾರರಾದ ಶ್ರೀ ಆರ್.ರವಿಕುಮಾರ್ ರವರು ದಿ। ದೇವರಗುಡ್ಡಯ್ಯನವರ ವಂಶಸ್ಥರಾದ – ಶ್ರೀಮತಿ ಮಹದೇವಮ್ಮ ಮತ್ತು ಇತರರ ಬಳಿ ಶುದ್ಧ ಕ್ರಯಕ್ಕೆ ಪಡೆಯಲು ಒಪ್ಪಿ ಕರಾರನ್ನು ಮಾಡಿಕೊಂಡಿರುತ್ತಾರೆ. ಅನುಸೂಚಿಯಲ್ಲಿ ವರ್ಣಿಸಿರುವ ಸದರಿ ಜಮೀನುಗಳ ಮೇಲೆ ಬೇರೆ ಯಾವುದಾದರೂ ವ್ಯಕ್ತಿ / ಸಂಸ್ಥೆಗಳಿಗೆ ಯಾವುದೇ ತರಹದ ಹಕ್ಕು ಇದ್ದಲ್ಲಿ ಅಥವಾ ಸದರಿ ಜಮೀನುಗಳ ಕ್ರಯಕ್ಕೆ ಆಕ್ಷೇಪಣೆಗಳಿದ್ದಲ್ಲಿ ಕೆಳ ಕಾಣಿಸಿದ ವಕೀಲರ ಬಳಿ ಈ ಪ್ರಕಟಣೆಯ ಒಂದು ವಾರದೊಳಗೆ ಲಿಖಿತವಾಗಿ, ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಸದರಿ ಅವಧಿಯಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತಕರಾರು ಸಲ್ಲಿಸದಿದ್ದಲ್ಲಿ ತಕರಾರುಗಳಿಲ್ಲವೆಂದು ಭಾವಿಸಿ, ನನ್ನ ಕಕ್ಷಿದಾರರು ಕ್ರಯಕ್ಕೆ ಮುಂದಾಗುವುದಾಗಿಯೂ, ನಂತರ ಬಂದ ಯಾವುದೇ ತರಹದ ತಕರಾರುಗಳಿಗೆ, ಅವರು ಬದ್ಧರಾಗುವುದಿಲ್ಲ.

**ಅನುಸೂಚಿ – 1**

ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ವರುಣಾ ಹೋಬಳಿ, ದುದ್ದಗೆರೆ ಸರ್ವೆ ಸಂ. 149 ರ 14 ಎಕರೆ 25 ಗುಂಟೆ ಪೈಕಿ 8 ಎಕರೆ 25 ಗುಂಟೆ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ : ಸರ್ವೆ ಸಂ.149 ರ ಉಳಿಕೆ ಬಾಬ್ತು–ಮಾದೇ ಗೌಡ, ನಾಗರಾಜು, ಸೋಮಣ್ಣ, ರಂಗಯ್ಯ, ಪಶ್ಚಿಮಕ್ಕೆ : ಸರ್ವೆ ಸಂ. 151 ರ ಸ್ವತ್ತು, ಉತ್ತರಕ್ಕೆ : ಸರ್ವೆ ಸಂ. 146 ಮತ್ತು 148, ದಕ್ಷಿಣಕ್ಕೆ : ಸರ್ವೆ ಸಂ. 150 ಮತ್ತು ರಸ್ತೆ.

**ಅನುಸೂಚಿ – 2**

ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ, ವರುಣಾ ಹೋಬಳಿ, ದುದ್ದಗೆರೆ ಗ್ರಾಮದ ಸರ್ವೆ ಸಂ. 151 ರ 7 ಎಕರೆ 32 ಗುಂಟೆ ಪೈಕಿ 2 ಎಕರೆ ಮತ್ತು 2 ಎಕರೆ 16 ಗುಂಟೆ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ: ಸರ್ವೆ ಸಂ.149 ರ ಲೇಟ್ ದೇವರಗುಡ್ಡಯ್ಯ ಕುಟುಂಬದವರ ಸ್ವತ್ತು, ಪಶ್ಚಿಮಕ್ಕೆ: ಮಂಚಯ್ಯ ಬಿನ್ ಲೇಟ್ ಮಾದಯ್ಯರವರ ಸ್ವತ್ತು ಹಾಗೂ ಸರ್ವೆ ಸಂ.151ರ ಉಳಿಕೆ ಬಾಬ್ತು, ಉತ್ತರಕ್ಕೆ: ಲಕ್ಷ್ಮಿಪುರ ಗ್ರಾಮದ ರಸ್ತೆ ಹಾಗೂ ಸರ್ವೆ ಸಂ.147, ದಕ್ಷಿಣಕ್ಕೆ: ಸರ್ವೆ ಸಂ. 150 ಮತ್ತು 152.

Sd/- Rohit Subbayya,
BAL, LL.B., Advocate,
No.1230/A, CH 36/A, 2nd Cross,
(Behind Ramamandira)
Krishnamurthypuram, Chamaraja Mohalla, Mysore-570004,
Mob.: 9480004999, 9448439222.
ದಿನಾಂಕ: 28–07–2022

## ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ).,

ಜೆಎಸ್‌ಎಸ್ ನಗರ, ಮೈಸೂರು – 570 029

ನಿ.ಸಂಖ್ಯೆ: ಜೆಆರ್‌ಎಂ: ಆರ್‌ಸಿಎಸ್: 699/1975 Ph: 0821- 2470798

**ಪ್ರಕಟಣೆಗಾಗಿ**

ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಈ ಸಹಕಾರ ಸಂಘದ ಆಡಳಿತ ಮಂಡಳಿಯ ಬಾಕಿ ಉಳಿದಿರುವ ಅವಧಿಗೆ ತೆರವಾಗಿರುವ 02 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆಯನ್ನು ದಿನಾಂಕ: 14.08.2022ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ಜೆಎಸ್‌ಎಸ್ ಪಬ್ಲಿಕ್ ಶಾಲೆ, ಟೀಚರ್ಸ್ ಲೇಔಟ್, ಡಾ. ಎಸ್ ರಾಧಾಕೃಷ್ಣನಗರ, ಮೈಸೂರು–29 ಇಲ್ಲಿ ಜರುಗಲಿದ್ದು ಚುನಾವಣಾ ವೇಳಾಪಟ್ಟಿ ಈ ಕೆಳಕಂಡಂತಿದೆ.

| ಕ್ರ.ಸಂ | ಚುನಾವಣಾ ಕಾರ್ಯಸೂಚಿಯ ವಿವರಗಳು | ದಿನಾಂಕ, ವಾರ ಸ್ಥಳ ಮತ್ತು ವೇಳೆಯ ವಿವರ |
|---|---|---|
| 1. | ನಾಮಿನೇಷನ್ ಅರ್ಜಿಗಳನ್ನು ಸ್ವೀಕರಿಸಲಾಗುವ ಪ್ರಾರಂಭದ ದಿನಾಂಕ | ದಿ: 30.07.2022 ನೇ ಶನಿವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆ ಒಳಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಗೆ |
| 2. | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | ದಿ: 06.08.2022 ನೇ ಶನಿವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆ ಒಳಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಗೆ |
| 3. | ನಾಮಪತ್ರಗಳ ಪರಿಶೀಲನೆ | ದಿ: 07.08.2022 ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ |
| 4. | ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | ದಿ: 07.08.2022 ನೇ ಭಾನುವಾರ ನಾಮಪತ್ರಗಳ ಪರಿಶೀಲನೆಯ ನಂತರ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ |
| 5. | ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ | ದಿ: 08.08.2022 ನೇ ಸೋಮವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯ ಒಳಗೆ ರಿಟರ್ನಿಂಗ್ ಆಫೀಸರ್ ರವರಿಗೆ ಸಂಘದ ಕಛೇರಿಯಲ್ಲಿ |
| 6. | ಅರ್ಹತೆ ಪಡೆದವರ ಅಂತಿಮ ಪಟ್ಟಿ ಪ್ರಕಟಿಸುವುದು | ದಿ: 08.08.2022 ನೇ ಸೋಮವಾರ ಮಧ್ಯಾಹ್ನ 2.00 ಗಂಟೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ ರವರಿಂದ |
| 7. | ಚುನಾವಣೆ ನಡೆಸಬೇಕಾದಲ್ಲಿ ಚುನಾವಣೆ ದಿನಾಂಕ ಮತ್ತು ಸ್ಥಳ | ದಿ: 14.08.2022 ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸ್ಥಳ: ಜೆ.ಎಸ್.ಎಸ್ ಪಬ್ಲಿಕ್ ಶಾಲೆ, ಟೀಚರ್ಸ್ ಲೇಔಟ್, ಡಾ. ಎಸ್ ರಾಧಾಕೃಷ್ಣನಗರ, ಮೈಸೂರು–29 |

ಚುನಾವಣಾ ವೇಳಾಪಟ್ಟಿಯನ್ನು ಅರ್ಹ ಮತದಾರರಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ವೇಳಾಟ್ಟಿ ತಲುಪದ ಸದಸ್ಯರು ಇದನ್ನೆ ವೇಳಾಪಟ್ಟಿ ಎಂದು ತಿಳಿದು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯದರ್ಶಿಯವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– (ವಸಂತ್ ಕುಮಾರ್ ಎಸ್)
ರಿಟರ್ನಿಂಗ್ ಆಫೀಸರ್
ಜೆ.ಎಸ್.ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು

### 3ನೇ ವರ್ಷದ ಪುಣ್ಯಸ್ಮರಣೆ



ಶ್ರೀ–ಸುಧೀರ್.ಡಿ
22/1/1958 – 29/7/2019
ಸದಾ ನಿಮ್ಮನ್ನು ಪ್ರೀತಿಸುತ್ತಾ ನಿಮ್ಮ ಸ್ಮರಣೆಯಲ್ಲಿರುವ

### 6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಪತಿ: ನಟರಾಜು ಡಿ.ಎನ್.,
ಅತ್ತೆ: ನಾಗಮ್ಮ
ಮಾವ: ನಿಂಗೇಗೌಡ
ಮತ್ತು ಕುಟುಂಬವರ್ಗದವರು
ಶ್ರೀಮತಿ ನವೀನ.ಎನ್.
ಸ್ಥಳ: ದೇಶಹಳ್ಳಿ, ಮಳವಳ್ಳಿ ತಾ॥ ಮಂಡ್ಯ ಜಿಲ್ಲೆ.

### 20ನೇ ವರ್ಷದ ಸವಿನೆನಪು



ನಾಗಾಭರಣ್.ಜಿ.ಓ (ಸಂತೋಷ್)
ಜನನ: 15.05.1984 ಮರಣ: 29.07.2002
ನೀನು ನಮ್ಮನ್ನಗಲಿ ಇಂದಿಗೆ 20 ವರ್ಷ ಕಳೆದರೂ ನಿನ್ನ ನೆನಪು ಮಾತ್ರ ದಿನವೂ ಕಾಡುತ್ತಿದೆ ಎಂದೆಂದಿಗೂ ಸದಾ ನಿನ್ನ ನೆನಪಿನಲ್ಲಿರುವ ನಿನ್ನ ತಂದೆ
ಜಿ.ಓಂಕಾರ್ ಪ್ರಸಾದ್ Ex-Deputy Mayor,
ತಾಯಿ ಎಮ್.ಎನ್.ರಾಜೇಶ್ವರಿ,
ಕುಮಾರಿ ಆಕರ್ಷ ಮತ್ತು ಕುಟುಂಬವರ್ಗದವರು

### ನಿಧನ



ಡಾ. ರವಿ ಕುಮಾರ್ ಎಂ.ಪಿ
(Maxillofacial Surgeon)
Precision Dental Clinic & Dental Implant Centre
9901324050 / 9971940679

### ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಮೀನಾಕ್ಷಿ
(ಶ್ರೀ ಮಂಜುನಾಥರವರ ಧರ್ಮಪತ್ನಿ)
ಮನೆ ನಂ. 17
ಧರ್ಮಸಿಂಗ್ ಕಾಲೋನಿ, ಮೈಸೂರು

ದಿನಾಂಕ 19.07.2022ರ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರಕ್ರಿಯಾದಿ ಭೂಶಾಂತಿ ಕಾರ್ಯಕ್ರಮವನ್ನು ದಿನಾಂಕ 29.07.2022 ರ ಶುಕ್ರವಾರ ಮಧ್ಯಾಹ್ನ 2.30 ರಿಂದ ಸ್ಟರ್ಲಿಂಗ್ ಟಾಕೀಸ್‌ನ ಬಳಿ ಹಿಂದೂ ರುದ್ರಭೂಮಿಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಬಂದು ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ತಮ್ಮಲ್ಲಿ ವಿನಂತಿ.
[redacted] ದುಃಖತಪ್ತರು: [redacted]
ಶ್ರೀ ಮಂಜು, ಮಗನಾದ ಹರೀಶ್ ಹಾಗೂ ಕುಟುಂಬವರ್ಗದವರು.

### ಮೈಸೂರು ಮಿತ್ರ 43 – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು